ಸಂಪುಟ 20 ಸಂಚಿಕೆ 37
ಸೆಪ್ಟಂಬರ್ 12, 1999 ಬೆಲೆ ರೂ. 3.00


ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ

ಬಿಜೆಪಿಯ ಹದಿಮೂರು ಸುಳ್ಳುಗಳು



ಅನಂತ್‌ಕುಮಾರ್ ಉಸ್ತುವಾರಿಯಲಿ ನಡೆದದ್ದೇನು?



ಜಾತ್ಯಾತೀತ ಶಕ್ತಿಗಳಿಗೆ ಜನತೆಯ ಒಲವು

ಸಿಪಿಐ(ಎಂ) ಮುನ್ನಡೆಯತ್ತ...

ಜಾತ್ಯಾತೀತ ಶಕ್ತಿಗಳಿಗೆ ಜನತೆಯ ಒಲವು

೧೧೫ ವಿಧಾನಸಭಾ ಕ್ಷೇತ್ರಗಳಲ್ಲಿ ಹಾಗೂ ೧೫ ಲೋಕಸಭಾ ಕ್ಷೇತ್ರಗಳಲ್ಲಿ ಕರ್ನಾಟಕದಲ್ಲಿ ಸೆ. ೫ ರಂದು ಮೊದಲ ಸುತ್ತಿನ ಮತದಾನ ನಡೆಯುತ್ತಿದೆ. ತುರ್ತು ಪರಿಸ್ಥಿತಿಯ ನಂತರ ಕಾಂಗ್ರೆಸ್‌ನ ಏಕಪಕ್ಷ ಸರ್ವಾಧಿಕಾರ ಮುರಿದ ಮೇಲೆ ನಡೆದ ೮೦, ೯೦ ರ ದಶಕದ ಚುನಾವಣೆಗಳಿಗಿಂತ ಈ ಚುನಾವಣೆಯ ಸಂದರ್ಭ ಹಾಗೂ ರಾಜ್ಯದ ರಾಜಕೀಯ ಪರಿಸ್ಥಿತಿ ಸಂಪೂರ್ಣ ಭಿನ್ನವಾಗಿದೆ.

ರಾಜ್ಯದ ಕೋಮು ಸಾಮರಸ್ಯವನ್ನು ಹದಗೆಡಿಸಿ ತಮ್ಮ ಫ್ಯಾಸಿಸ್ಟ್ ಆಕಾಂಕ್ಷೆಯ ನೆಲೆಯಾಗಿ ಕರ್ನಾಟಕವನ್ನು ಪರಿವರ್ತಿಸಬೇಕೆಂಬ ಸಂಘ ಪರಿವಾರ ಎರಡು ದಶಕಗಳಿಂದ ನಡೆಸಿದ ಯೋಜಿತ ಸಂಚು ಒಂದು ಕಡೆ ಹಾಗೂ ಕೋಮುಶಕ್ತಿಗಳ ಕುತಂತ್ರಕ್ಕೆ ನಮ್ಮ ಬದುಕು ಬಲಿಯಾಗಬಾರದೆಂಬ ಜನರ ಅತೀವ ಆಕಾಂಕ್ಷೆ ಮತ್ತೊಂದು ಕಡೆ - ಈ ಚುನಾವಣೆಯ ಪ್ರಧಾನ ಪ್ರಶ್ನೆಯಾಗಿದೆ.

ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ, ಇಲ್ಲಿಯವರೆಗೆ ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳ ಮೇಲುಗೈಯನ್ನು ತಡೆಯವುದಕ್ಕೆ ಹಾಗೂ ಕಾಂಗ್ರೆಸ್‌ನ ಬಗ್ಗೆ ಜನರಿಗಿರುವ ಅತೃಪ್ತಿ, ಅಸಮಾಧಾನಗಳು ಬಿಜೆಪಿಗೆ ವರದಾನವಾಗುವುದನ್ನು ತಪ್ಪಿಸುವುದಕ್ಕೆ ಜನರು ಬಳಸುತ್ತಿದ್ದ ಒಂದು ಪ್ರಮುಖ ರಾಜಕೀಯ ಅಸ್ತ್ರ - ಜನತಾಪಕ್ಷ/ದಳ. ಇಂದು ಕೋಮು ಸಾಮರಸ್ಯ ಹಾಗೂ ತಮ್ಮ ಬದುಕಿನ ಬವಣೆಯ ಪರಿಹಾರದ ಬಗ್ಗೆ ಹಂಬಲಿಸುವ ರಾಜ್ಯದ ಜನತೆಯ ಕೈಯಿಂದ ಇದನ್ನು ಕಸಿದುಕೊಳ್ಳಲಾಗಿದೆ. ಇದು ಕೋಮುಶಕ್ತಿ (ಬಿಜೆಪಿ)ಗಳ ಕುತಂತ್ರವೆಂದು ರಾಜ್ಯದ ಜನಕ್ಕೆ ತಿಳಿದುಹೋಗಿದೆ.

ಈ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಪ್ರವಾಸ ಮಾಡಿದಾಗ ಜನರ ತೀರ್ಮಾನದ ಮುನ್ಸೂಚನೆ ಎಂಬಂತೆ ಕಾಣುವ ಅಭಿಪ್ರಾಯದಂತೆ ಕರ್ನಾಟದಲ್ಲಿ ಜಾತ್ಯತೀತ ಶಕ್ತಿಗಳಿಗೆ ಜನ ತಮ್ಮ ಒಲವನ್ನು ವ್ಯಕ್ತಪಡಿಸುವ ಹಾದಿಯಲ್ಲಿದ್ದಾರೆ.

ಸಂಪಾದಕೀಯ

ತಮ್ಮ ದುರ್ಲಾಭಕ್ಕಾಗಿ ಜನರನ್ನು ಶೋಷಣೆಯ ಚಕ್ರದಲ್ಲಿ ಮುಂದುವರೆಸಲು ಕೋಮುಶಕ್ತಿಗಳ ಬೆಳವಣಿಗೆಯನ್ನು ಬೆಂಬಲಿಸುತ್ತಿರುವ ದೊಡ್ಡ ಬಂಡವಾಳಶಾಹಿಗಳ ಕೈಯ ಗುಲಾಮರಾದ ಪತ್ರಿಕೆಗಳ ಸಮೀಕ್ಷೆಗಳು, ಅಭಿಪ್ರಾಯ ಸಂಗ್ರಹಗಳು ಏನೇ ಹೇಳಿದರೂ, ಬಿಜೆಪಿಯ ಅಬ್ಬರ ಎಷ್ಟೆ ನಡೆದರೂ ಜನ ಅದಕ್ಕೆ ಮರುಳಾಗದಿರುವ ಸೂಚನೆ ನೀಡುತ್ತಿರುವುದು ಬಹಳ ಆರೋಗ್ಯಕರ ಅಂಶವಾಗಿದೆ.

ಆದೇ ರೀತಿಯಲ್ಲಿ ಜನತಾದಳದ ವಿನಾಶವನ್ನು ಬಯಸಿ ಹರಕೆ ಹೊರುತ್ತಾ ಹಲವು ಪತ್ರಿಕೆಗಳು, ಶಕ್ತಿಗಳು ದಳ ಮುಗಿದೇ ಹೋಯಿತು, ಶವಯಾತ್ರೆಯೂ ಆಗಿ ಹೋಯಿತು ಎಂದು ಸಾರಿದರೂ ಜನತೆ ಅದನ್ನು ಜೀವಂತವಾಗಿಡುವ, ತಮ್ಮ ರಕ್ಷಣೆಯ ಅಸ್ತ್ರವನ್ನಾಗಿ ಮುಂದೆಯೂ ಬಳಸಿಕೊಳ್ಳುವ ಆಕಾಂಕ್ಷೆಯನ್ನು ವ್ಯಕ್ತಪಡಿಸುತ್ತಿರುವುದು, ಗಣನೀಯ ಸಂಖ್ಯೆಯಲ್ಲಿ ಮತಗಳು ಅದಕ್ಕೆ ಚಲಾವಣೆಯಾಗುವ ಸಾಧ್ಯತೆಯನ್ನು ಸೂಚಿಸಿರುವುದು- ಅದೂ ಜನತಾದಳ (ಜಾತ್ಯಾತೀತ) ಬಹಳ ದುರ್ಬಲವೆನ್ನುವ ಹೈದರಬಾದ್ ಕರ್ನಾಟಕ ಪ್ರದೇಶದಲ್ಲಿಯೂ ಸಮಾಧಾನಕರವಾಗಿದೆ. ಮುಂದಿನ ಸುತ್ತಿನ ಮತದಾನದಲ್ಲಿ ಅದು ಮತ್ತಷ್ಟು ಸ್ಪಷ್ಟಗೊಳ್ಳಲಿದೆ.

ಜನತಾದಳವನ್ನೊಡೆಯುವವರೆಗೂ ಅಟ್ಟದಲ್ಲಿ ಕುಳ್ಳಿರಿಸಲ್ಪಟ್ಟಿದ್ದ ಜನತಾದಳ (ಪಟೇಲ್ ಬಣ) ಇಂದು ಬಹಿರಂಗವಾಗಿ ೪೦ ಕಡೆಗಳಲ್ಲಿ ಬಿಜೆಪಿಯ ವಿನಾಶಕಾರಿ ಕೃತ್ಯಕ್ಕೆ ಬಲಿಯಾಗುತ್ತಿದ್ದಾರೆ ವಿಷಪೂರಿತ ಆರೆಸ್ಸೆಸ್ ಅಂತೂ ಜನತಾದಳ ಪಟೇಲ್ ಬಣ)ವನ್ನು ಬೆಳೆಯಗೊಡಬಾರದೆನ್ನುವ ತೀರ್ಮಾನಕ್ಕೆ ಬದ್ಧವಾಗಿದೆ.

ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಚುನಾವಣೆ ಅತ್ಯಂತ ಗೊಂದಲಕಾರಿ ಸನ್ನಿವೇಶದಲ್ಲಿ ನಡೆಯುತ್ತಿದೆ ಈ ಗೊಂದಲವನ್ನು ಉದ್ದೇಶ ಪೂರ್ವಕವಾಗಿಯೇ ಸೃಷ್ಟಿಸಲಾಗಿದೆ.

ಇಂತಹ ಸಮಯದಲ್ಲಿಯೇ ಅತ್ಯಂತ ಸ್ಪಷ್ಟತೆ ಆವಶ್ಯಕ. ಸ್ಪಷ್ಟ ರಾಜಕೀಯ ಪ್ರಜ್ಞೆಯೇ ಗೊಂದಲವನ್ನೆದುರಿಸುವ ಆಯುಧ.


ಬೆಂಗಳೂರು ಆಕಾಶವಾಣಿಯಿಂದ ಸೆಪ್ಟೆಂಬರ್ 7 ಹಾಗೂ 8 ರಂದು ವಿವಿಧ ರಾಜಕೀಯ ಪಕ್ಷಗಳ ಚುನಾವಣಾ ಪ್ರಣಾಳಿಕೆಗಳ ಕುರಿತು ಗುಂಪು ಚರ್ಚೆ ಪ್ರಸಾರ ಮಾಡಲಿದೆ. ಇದರಲ್ಲಿ ಸಿಪಿಐ(ಎಂ) ಪರವಾಗಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್ ಭಾಗವಹಿಸುತ್ತಾರೆ. ರಾತ್ರಿ 10.20 ಕ್ಕೆ ಈ ಕಾರ್ಯಕ್ರಮ ಪ್ರಸಾರವಾಗಲಿದೆ.



ಟೈಮ್ಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್

"ಕರ್ನಾಟಕವನ್ನು ಧರ್ಮನಿರಪೇಕ್ಷವಾಗಿ ಉಳಿಸಿ ಸಂದರ್ಭಸಾಧಕ ಬಿಜೆಪಿ ಮೈತ್ರಿ ಕೂಟವನ್ನು ಸೋಲಿಸಿ"

ಸಿಪಿಐ(ಎಂ) ಪರವಾಗಿ ರಾಜ್ಯಕಾರ್ಯದರ್ಶಿ ಎಸ್.ಸೂರ್ಯನಾರಾಯಣ ರಾವ್‌ರವರು ಸೆಪ್ಟೆಂಬರ್ 1 ರಂದು ದೂರದರ್ಶನದಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡಿದರು. ಆಗಸ್ಟ್ 31 ರಂದು ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಎಸ್.ವೈ.ಗುರುಶಾಂತ್ ಆಕಾಶವಾಣಿಯಲ್ಲಿ ಭಾಷಣ ಮಾಡಿದರು. ಸೂರ್ಯನಾರಾಯಣ ರಾವ್‌ರವರ ಭಾಷಣದ ಪೂರ್ಣಪಾಠವನ್ನು ಹಾಗೂ ಎಸ್.ವೈ.ಗುರುಶಾಂತ್‌ರವರ ಭಾಷಣದ ಆಯ್ದ ಭಾಗಗಳನ್ನು ಇಲ್ಲಿ ಕೊಡಲಾಗಿದೆ.



ಒಂದೂವರೆ ವರ್ಷದೊಳಗೆ ಭಾರತದ ಜನತೆಯ ಮೇಲೆ ಮತ್ತೊಂದು ಲೋಕಸಭಾ ಚುನಾವಣೆಯನ್ನು ಹೇರಲಾಗಿದೆ. ಇದಕ್ಕೆ ಬಿಜೆಪಿಯೇ ಸಂಪೂರ್ಣ ಹೊಣೆ.

ಕೇಂದ್ರದಲ್ಲಿ ಬಿಜೆಪಿ ಆಳ್ವಿಕೆ ಬೇರೆ ಯಾವುದೇ ಪಕ್ಷದ ಆಳ್ವಿಕೆಯಂತಲ್ಲ ಎಂದು ಸಿಪಿಐ(ಎಂ) ಎಚ್ಚರಿಸಿತ್ತು. ಏಕೆಂದರೆ ಅದು ಆರ್.ಎಸ್.ಎಸ್. ಹೇಳಿದಂತೆ ನಡೆಯುವ ಪಕ್ಷ. 13 ತಿಂಗಳ ಆಳ್ವಿಕೆ ಇದನ್ನು ಸಾಬೀತು ಮಾಡಿದೆ. ರಾಷ್ಟ್ರೀಯ ಅಜೆಂಡಾ ಎಂಬುದನ್ನು ಮುಂದಿಟ್ಟರೂ ಅದು ಆರ್.ಎಸ್.ಎಸ್.ನ ಬಚ್ಚಿಟ್ಟ ಅಜೆಂಡಾವನ್ನೇ ತರಲು ಪ್ರಯತ್ನಿಸಿತು. ಕ್ರೈಸ್ತ ಅಲ್ಪಸಂಖ್ಯಾತರ ಮೇಲೆ ಹಿಂದೆಂದೂ ಕಾಣದ ಧಾಳಿಗಳು ನಡೆದವು. ಸ್ಟೈನ್ಸ್ ಮತ್ತು ಅವರ ಇಬ್ಬರು ಮಕ್ಕಳನ್ನು ಜೀವಂತ ಸುಡುವ ಅತ್ಯಂತ ಅಮಾನುಷ ಘಟನೆ ನಡೆಯಿತು.

ಪ್ರತಿ ವರ್ಷ ಒಂದು ಕೋಟಿ ಉದ್ಯೋಗಾವಕಾಶ ನೀಡುವ ಭರವಸೆ ಹಾಗು 'ಸ್ವದೇಶಿ'ಯ ಸೋಗು ಬೇಗನೇ ಕಳಚಿ ಬಿತ್ತು. ದೇಶೀ-ವಿದೇಶೀ ಬಂಡವಾಳಗಾರರಿಗೆ ಒಂದೇ ಬಜೆಟ್ಟಿನಲ್ಲಿ 8,000 ಕೋಟಿ ರೂಪಾಯಿಗಳ ಭಕ್ಷೀಸು ನೀಡಿದ ಸರ್ಕಾರ, ಕಾರ್ಮಿಕರು, ರೈತರ ಮೇಲೆ ಅಷ್ಟೇ ಪ್ರಮಾಣದ ಬೆಲೆಏರಿಕೆ ಹೇರಿತು. ರೇಶನ್ ಅಕ್ಕಿ, ಗೋಧಿ, ಸಕ್ಕರೆ ಬೆಲೆಗಳಲ್ಲಿ 40 ರಿಂದ 60 ಶೇಕಡಾ ಏರಿಕೆ. ರೈಲು, ಅಂಚೆ, ಪೆಟ್ರೋಲ್, ರಸಗೊಬ್ಬರ- ಹೀಗೆ ಎಲ್ಲದರ ಬೆಲೆಏರಿಕೆ-ಬಿಜೆಪಿಯ ಕೊಡುಗೆ. ಈರುಳ್ಳಿ, ಉಪ್ಪಿನ ಬೆಲೆ ಗಗನಕ್ಕೇರಿ ಮೂರು ರಾಜ್ಯಗಳಲ್ಲಿ ಹೀನಾಯವಾಗಿ ಸೋತಿದ್ದು ನಿಮಗೆ ನೆನಪಿದೆ. ಆದರೂ ಅಂತಹ ನೀತಿಗಳನ್ನು ಮಾತ್ರ ಅದು ಬದಲಿಸಿಲ್ಲ.

ನಾಲ್ಕು ನೂರಕ್ಕೂ ಹೆಚ್ಚು ಕೃಷಿ ಸರಕುಗಳ ಮುಕ್ತ ಆಮದಿಗೆ ಅವಕಾಶ ಮಾಡಿಕೊಟ್ಟು ನಮ್ಮ ರೈತರಿಗೆ ಆತ್ಮಹತ್ಯೆಯೇ ಗತಿ ಎನ್ನುವಂತಹ ಪರಿಸ್ಥಿತಿಯನ್ನು ಸೃಷ್ಟಿಸಿತು. ಮಾನ್ಸೆಂಟೊದಂತಹ ವಿದೇಶೀ ಕಂಪನಿಗಳು ನಮ್ಮ ರೈತರನ್ನು ಲೂಟಿ ಹೊಡೆಯಲು ಅವಕಾಶ ಮಾಡಿದೆ. ಸಾರ್ವಜನಿಕ ವಲಯವನ್ನು ಖಾಸಗೀಕರಣ ಮಾಡುವ ಹಾಗೂ ಶೇರುಗಳನ್ನು ಮಾರಾಟಮಾಡಿ ದೇಶದ ಸಾರ್ವಭೌಮತ್ವಕ್ಕೆ ಧಕ್ಕೆತಂದಿದೆ. ವಿದೇಶಿ ಬಂಡವಾಳಗಾರರು ನಮ್ಮ ದೇಶವನ್ನು ಲೂಟಿ ಮಾಡಲು ಅವಕಾಶ ಮಾಡಿಕೊಟ್ಟಿದೆ. ಕೃಷಿ ಕಾರ್ಮಿಕರಿಗೆ ಒಂದು ಸಮಗ್ರ ಶಾಸನವನ್ನು ತರಲಿಲ್ಲ.


ಭ್ರಷ್ಟಾಚಾರದಲ್ಲೂ ಒಂದು ಕೈ ಮೇಲಾಗಿರುವ ಬಿಜೆಪಿ ದೇಶದ ಬೊಕ್ಕಸಕ್ಕೆ 50 ಸಾವಿರ ಕೋಟಿ ರೂಪಾಯಿ ನಷ್ಟ ಮಾಡುವ ಟೆಲಿಕಾಂ ಹಗರಣ ಮತ್ತು 50 ಸೀಟಿನ ವಿಮಾನ ಖರೀದಿ ಹಗರಣದಲ್ಲಿ ಸಿಲುಕಿದೆ.

ಪೋಖ್ರಾನ್ ಸ್ಫೋಟ ನಡೆಸಿ ಭಾರತವನ್ನೀಗ ಪರಮಾಣು ಶಕ್ತಿ ಸಂಪನ್ನ ಬಲಾಢ್ಯ ದೇಶವನ್ನಾಗಿ ಮಾಡಿದ್ದೇವೆ ಎಂಬ ಇವರ ಟೊಳ್ಳು ಜಂಭವೂ ಬಯಲಾಗುತ್ತಿದೆ. ಸ್ಫೋಟದ ನಂತರ ಅಮೇರಿಕಾದ ಆಳರಸರ ಬೆದರಿಕೆಗಳಿಗೆ ಜಗ್ಗಿ, ಅವರ ದಾಸರಂತೆ ಕರೆದಲ್ಲೆಲ್ಲಾ ಹೋಗಿ, ತಿಂಗಳಾನುಗಟ್ಟಲೆ ಗುಪ್ತ ಮಾತುಕತೆ ನಡೆಸಿದೆ. ಕಾರ್ಗಿಲ್ ನಂತಹ ಘಟನೆ ನಡೆದು ಸುಮಾರು 500 ವೀರ ಯೋಧರನ್ನು ಬಲಿತೆಗೆದುಕೊಳ್ಳುವಂತಹ ಸ್ಥಿತಿಯು ಏಕೆ ಸೃಷ್ಟಿಯಾಯಿತು, ಎಂದು ಈ ಸರ್ಕಾರಕ್ಕೆ ಉತ್ತರ ಹೇಳಲು ಸಾಧ್ಯವಾಗದೆ, ರಾಜ್ಯ ಸಭೆಯ ಅಧಿವೇಶನವನ್ನು ಕರೆಯಲು ನಿರಾಕರಿಸಿತು.

ಕಾಂಗ್ರೆಸ್ ಕೂಡ ಜನ ತನ್ನನ್ನು ಅಧಿಕಾರದಿಂದ ಏಕೆ ಇಳಿಸಿದರು ಎಂಬ ಆತ್ಮ ಪರೀಕ್ಷೆ ಮಾಡಿಕೊಳ್ಳದೆ ಇನ್ನೂ ಏಕ ಪಕ್ಷ ಆಳ್ವಿಕೆಯ ಭ್ರಮೆಯಲ್ಲೇ ಇದೆ. ಕೋಮುವಾದದ ಪಿಡುಗಿನ ವಿರುದ್ಧ ಚಂಚಲತೆ ತೋರುವ ಕಾಂಗ್ರೆಸ್ ಜನವಿರೋಧಿ ಆರ್ಥಿಕ ನೀತಿಯನ್ನು ಮುಂದುವರಿಸಿದೆ. ಭ್ರಷ್ಟಾಚಾರವನ್ನು ನಿರ್ಮೂಲ ಮಾಡಲು ಯಾವುದೇ ದೃಢತೆಯನ್ನು ತೋರದ, ಕಾಂಗ್ರೆಸ್ ಖಂಡಿತಾ ಪರ್ಯಾಯವಾಗಲಾರದು.

ಇಡೀ ದೇಶದಲ್ಲಿನ ರಾಜಕೀಯ ಅಸ್ಥಿರತೆಯ ನಡುವೆಯೂ ಸತತವಾಗಿ 22 ವರ್ಷಗಳ ಕಾಲ ಒಂದು ರಾಜ್ಯ ಸರಕಾರವನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿರುವ ಸಿಪಿಐ(ಎಂ) ಮತ್ತು ಎಡಶಕ್ತಿಗಳು ಮಾತ್ರವೇ ಇಂತಹ ಒಂದು ಪರ್ಯಾಯವನ್ನು ಕೊಡಲು ಸಾಧ್ಯ. ಸಿಪಿಐ(ಎಂ) ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಇಂತಹ ಪರ್ಯಾಯದ ನೀತಿಗಳನ್ನು ಚರ್ಚೆಗಾಗಿ ದೇಶದ ಮುಂದಿಟ್ಟಿದೆ.

ವಿಧಾನಸಭೆಗೂ ಈ ಬಾರಿ ನೀವು ಮತ ಹಾಕಲಿದ್ದೀರಿ. ನಿರ್ಲಕ್ಷ್ಯ, ಪೋಲೀಸ್ ದಮನ, ಗೋಲಿಬಾರುಗಳ ಮೂಲಕ ರಾಜ್ಯದ ಕಾರ್ಮಿಕರ, ರೈತರ ಸಿಟ್ಟಿಗೆ ಗುರಿಯಾಗಿರುವ ಪಟೇಲ್ ಬಣದೊಂದಿಗೆ, ಕಳೆದ ಐದು ವರ್ಷಗಳಲ್ಲಿ ಸದಾ ತನ್ನದೇ ಕಾರಣಗಳಿಗಾಗಿ ಬಯ್ಯುತ್ತಿದ್ದ, ಇನ್ನೊಂದೆಡೆ ಸುರತ್ಕಲ್, ಬಾಬಾಬುಡನ್‌ಗಿರಿ ಯಂತಹ ಘಟನೆಗಳ ಮೂಲಕ ರಾಜ್ಯದಲ್ಲಿನ ಕೋಮು ಸೌಹಾರ್ದತೆಯನ್ನು ಹಾಳುಗೆಡವಲು ಪ್ರಯತ್ನಿಸಿರುವ ಬಿಜೆಪಿಯ ಮೈತ್ರಿಯು ಒಂದು ಅತ್ಯಂತ ಹೀನ ಸಂದರ್ಭ ಸಾಧಕತನದ್ದಾಗಿದೆ. ಆದ್ದರಿಂದ ಬಿಜೆಪಿ ಮತ್ತು ಆದರ ಮಿತ್ರರನ್ನು ಸೋಲಿಸಿ, ಸಿಪಿಐ(ಎಂ) ಹಾಗು ಜಾತ್ಯಾತೀತ ಶಕ್ತಿಗಳನ್ನು ಬೆಂಬಲಿಸಿ ಎಂದು ಸಿಪಿಐ(ಎಂ) ಕರೆ ನೀಡಿದೆ. ರಾಜ್ಯದಲ್ಲಿ ಸಿಪಿಐ(ಎಂ) ಹನ್ನೊಂದು ವಿಧಾನ ಸಭಾ ಸ್ಥಾನಗಳಿಗೆ ಸ್ಪರ್ಧಿಸುತ್ತಿದೆ. ಇಲ್ಲಿ ಸಿ.ಪಿ.ಐ.(ಎಂ) ಅಭ್ಯರ್ಥಿಗಳನ್ನು, ಉಳಿದೆಡೆ ಜಾತ್ಯಾತೀತ ಜನತಾದಳದ ಅಭ್ಯರ್ಥಿಗಳನ್ನು ಗೆಲ್ಲಿಸಿ, ಕರ್ನಾಟಕವು ಕೋಮುವಾದಿಗಳ ತೆಕ್ಕೆಗೆ ಹೋಗದಂತೆ ಉಳಿಸಿ, ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಬೇಕೆಂದು ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇವೆ.



ಚುನಾವಣೆಗಳು ಮತ್ತೆ ಬಂದಿವೆ. ದೇಶವನ್ನುಳಿಸುವ ಹೋರಾಟದಲ್ಲಿ ನೀವು ಯಾರಕಡೆಗೆ ಎಂದು ನಿರ್ಧರಿಸಿ.

ಕೇಂದ್ರ ಸರ್ಕಾರದಲ್ಲಿ ತಮ್ಮ ಆಡಳಿತದ ವಿಫಲತೆಯಿಂದ ಜನರಲ್ಲಿ ಅಸಮಾಧಾನದ ಹೊಗೆ ಮೂಡಿಸಿದಾಗ ಗಮನ ಬೇರೆಡೆಗೆ ಸೆಳೆಯಲು ಪ್ರಯತ್ನಿಸಲಾಯಿತು. ನಂತರ ಸಮೃದ್ಧ ಕರ್ನಾಟಕವೆಂಬ ಹೊಸ ನಾಟಕದ ಮೂಲಕ ಕರ್ನಾಟಕದ ಜನರ ಕಣ್ಣಿಗೆ ಮಣ್ಣೆರಚಲು ಬಿಜೆಪಿ ಪ್ರಯತ್ನ ನಡೆಸಿದೆ.

ಕರ್ನಾಟಕದ ಜನತೆ ಬಿಜೆಪಿಯನ್ನು, ಅದರ ಮಿತ್ರಕೂಟವನ್ನು ತಿರಸ್ಕರಿಸಬೇಕು. ಕರ್ನಾಟಕವನ್ನು ಧರ್ಮನಿರಪೇಕ್ಷವಾಗಿ ಉಳಿಸಿಕೊಳ್ಳಬೇಕು. ಅಂದಾಗ ಮಾತ್ರವೇ ಅಭಿವೃದ್ಧಿ ನೆಮ್ಮದಿ ಸಾಧ್ಯ.

ಭಯ್, ಭೂಕ್ (ಹಸಿವು) ಮತ್ತು ಭ್ರಷ್ಟಾಚಾರದಿಂದ ಬಿಡುಗಡೆ ಹಾಗೂ ಸ್ವದೇಶಿ ಘೋಷಣೆಯ ಮೇಲೆ ಅಧಿಕಾರಕ್ಕೆ ಬಂದ ಬಿಜೆಪಿ ಕೂಟ ಐ.ಎಂ.ಎಫ್, ವಿಶ್ವಬ್ಯಾಂಕ್ ಹಾಗೂ ವಿಶ್ವವಾಣಿಜ್ಯ ಸಂಸ್ಥೆಗಳ ಒತ್ತಡಕ್ಕೆ ಮತ್ತಷ್ಟು ಮಣಿದು ಹೊಸ ಆರ್ಥಿಕ ನೀತಿಗಳನ್ನು ಇನ್ನಷ್ಟು ರಭಸವಾಗಿ ಕಾರ್ಯಗತ ಮಾಡಿದೆ. 1600ಕ್ಕೂ ಹೆಚ್ಚು ವಸ್ತುಗಳನ್ನು ದೇಶದೊಳಕ್ಕೆ ಮುಕ್ತವಾಗಿ ಬಿಡಲಾಗಿದೆ. ಇದರಿಂದ ಕೃಷಿ, ಕೈಗಾರಿಕೆಗಳೆರಡೂ ನಾಶವಾಗುತ್ತಿವೆ.

ಸಕ್ಕರೆ, ಬೇಳೆ, ಅಡಿಗೆ ಎಣ್ಣೆ, ಹಾಲಿನ ಪುಡಿ, ಹಣ್ಣು-ತರಕಾರಿ, ಸಿದ್ಧ ಆಹಾರ ವಸ್ತುಗಳ ಆಮದಿನಿಂದ ಭಾದೆಗೊಳಗಾದ 2000ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಸಿರಾದಲ್ಲಿ ಗುಂಡಿಗೆ ಬಲಿಯಾಗಿದ್ದಾರೆ. ಕೋಟ್ಯಾಂತರ ಜನರು ನಿರುದ್ಯೋಗ, ಬಡತನ, ಹಸಿವುಗಳ ದವಡೆಗೆ ನೂಕಲ್ಪಟ್ಟಿದ್ದಾರೆ.

ಲಕ್ಷಾಂತರ ಉದ್ಯಮಗಳು ಬಿಕ್ಕಟ್ಟಿನಲ್ಲಿ ಸಿಲುಕಿವೆ, ಮುಚ್ಚಿವೆ. ದೊಡ್ಡ ಪ್ರಮಾಣದಲ್ಲಿ ದೇಶವನ್ನು ದೋಚಲು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ಅಣಿಮಾಡಿಕೊಡಲಾಗುತ್ತಿದೆ.

ಈ ಎಲ್ಲಾ ವ್ಯವಹಾರಗಳ ಜೊತೆಗೆ ದೇಶದ ರಕ್ಷಣೆಗಾಗಿ ಆಧುನಿಕ ಶಸ್ತ್ರಾಸ್ತ್ರಗಳನ್ನು ಕೊಳ್ಳುವಲ್ಲಿ ದೊಡ್ಡ ಭ್ರಷ್ಟಾಚಾರದ ಹಗರಣಗಳು ಬೆಳಕಿಗೆ ಬಂದಿವೆ.

ದೇಶದ ರಕ್ಷಣೆಯ ವಿಷಯದಲ್ಲಿಯೂ ಬಿಜೆಪಿ ಸರ್ಕಾರ ಹೊಣೆಗೇಡಿತನದಿಂದ ವರ್ತಿಸಿದೆ.

ಹೀಗಾಗಿ ಈ ಚುನಾವಣೆಗಳು ಸಂಘ ಪರಿವಾರ ಅಬ್ಬರಿಸುವಂತೆ ಸ್ವದೇಶಿ-ವಿದೇಶಿ ಪ್ರಶ್ನೆಗಳದಲ್ಲ. ದೇಶದಲ್ಲಿ ಕೋಮುವಾದ ಮತ್ತು ಜಾತ್ಯಾತೀತತೆ ನಡುವಣ ಸಮರವಾಗಿದೆ. ದೇಶವನ್ನು, ರಾಜ್ಯವನ್ನು ಜಾತ್ಯಾತೀತವಾಗಿ ಉಳಿಸಿಕೊಳ್ಳಲು ಪಣ ತೊಡಬೇಕಾಗಿದೆ.

ಬಿಜೆಪಿಯ ಸಮರ್ಥಕರಾಗಿ ರಾಮಕೃಷ್ಣ ಹೆಗ್ಗಡೆ- ಜಾರ್ಜ್ ಫರ್ನಾಂಡಿಸ್, ವಾಜಪೇಯಿಯವರ ನೇತೃತ್ವದಲ್ಲಿ ಕರ್ನಾಟಕದಲ್ಲಿ ಜಾತ್ಯಾತೀತ ರಾಜಕೀಯದ ಪ್ರಬಲ ಶಕ್ತಿಯಾದ ಜನತಾದಳವನ್ನು ಒಡೆಯಲು, ಕೋಮುವಾದಿ ಕೂಟವನ್ನು ಬಲಪಡಿಸಲು ಸಂಚು ಮಾಡಿದ್ದಾರೆ. ಈ ತ್ರಿಮೂರ್ತಿಗಳ ಕೂಟದ ಸಂಚನ್ನು ಕರ್ನಾಟಕದ ಜನತೆ ಸೋಲಿಸಬೇಕು. ಹಿಂದಿನ ದಿನ ಬಿಜೆಪಿಯನ್ನು ಕ್ಯಾನ್ಸರ್ ಎಂದು ದೂಷಿಸಿ ಮರುದಿನ ಅದನ್ನಪ್ಪಿಕೊಂಡ ಜೆ.ಹೆಚ್. ಪಟೇಲ್ ಕೂಟ, ಬಗೆದ ದ್ರೋಹಕ್ಕೆ ತಕ್ಕ ಶಿಕ್ಷೆ ನೀಡಬೇಕು.

ಬಿಜೆಪಿಯ ಬೆಳವಣಿಗೆಗೆ ಕಾಂಗ್ರೆಸ್ ಸರ್ಕಾರದ ಜನವಿರೋಧಿ ನೀತಿಗಳು, ಭ್ರಷ್ಟಾಚಾರ, ಕೋಮುವಾದಿಗಳನ್ನು ಎದುರಿಸುವಲ್ಲಿ ಚಂಚಲತೆ ಕಾರಣವಾಗಿದೆ. ಇಂದಿಗೂ ಕೂಡ ಕಾಂಗ್ರೆಸ್ ಈ ಜನವಿರೋಧಿ ಆರ್ಥಿಕ ನೀತಿಗಳನ್ನು ಕೈ ಬಿಟ್ಟಿಲ್ಲ.

ಸಿ.ಪಿ.ಐ(ಎಂ) ನೇತೃತ್ವದ ಪ. ಬಂಗಾಳ ಎಡರಂಗ ಸರ್ಕಾರ 22 ವರ್ಷಗಳ ಕಾಲ ಸತತ ಆಡಳಿತ ನಡೆಸಿ ಜಾಗತಿಕ ದಾಖಲೆ ನಿರ್ಮಿಸಿದೆ. ಇಂತಹ ಸಮಗ್ರ ಜನಪರ ಅಭಿವೃದ್ಧಿಯನ್ನು ಯಾವುದೇ ರಾಜ್ಯದಲ್ಲಿ ಬಿಜೆಪಿ, ಕಾಂಗ್ರೆ ಪಕ್ಷಗಳು ಇತರ ಯಾವುದೇ ಪಕ್ಷಗಳು ನೀಡಲು ಸಾಧ್ಯವಾಗಿಲ್ಲ. ಇಂತಹ ದುಡಿವ ಜನಪರ, ಸಮಗ್ರ ಅಭಿವೃದ್ಧಿ ಪಥದ ಹರಿಕಾರ, ದೃಢ ಧರ್ಮ ನಿರಪೇಕ್ಷ ಪಕ್ಷವಾದ ಸಿ.ಪಿ.ಐ(ಎಂ) ನಿಂದ ಕರ್ನಾಟಕದ ಅಭಿವೃದ್ಧಿ ಸಾಧ್ಯ.

ದೃಢವಾದ ನಿಷ್ಠೆ, ಪ್ರಾಮಾಣಿಕತೆಯಿಂದ, ತ್ಯಾಗಜೀವಿಗಳಾಗಿ ದುಡಿಯುತ್ತಿರುವ ಕಾರ್ಯಕರ್ತರು ರಾಜ್ಯದ ವಿವಿಧ ಪ್ರದೇಶಗಳಲ್ಲಿ ಜನಕ್ಕೆ ಅಚ್ಚುಮೆಚ್ಚಿನವರಾಗಿದ್ದಾರೆ. ಸಿಪಿಐ(ಎಂ) ಶಾಸಕರು ಇಡೀ ರಾಜ್ಯದ ದುಡಿಯುವ ಜನರ ದನಿಯಾಗಿದ್ದಾರೆ. 5 ದಶಕದಿಂದ ರಾಜ್ಯದಲ್ಲಿ ಜನರಿಗಾಗಿ, ಭ್ರಷ್ಟಾಚಾರ, ಅಸಮಾನತೆ, ಶೋಷಣೆ, ಕೋಮುವಾದದ ವಿರುದ್ಧ ದೃಢ ಹೋರಾಟ ನಡೆಸಿರುವ ಸಿಪಿಐ(ಎಂ) ಅನ್ನು ಆರಿಸಿ ಜನರ ಧ್ವನಿ ವಿಧಾನ ಸೌಧದಲ್ಲಿ ಹೆಚ್ಚಿನ ಶಕ್ತಿಯಿಂದ ಮೊಳಗುವಂತೆ ಜನ ಮತನೀಡಬೇಕೆಂದು ವಿನಂತಿಸುತ್ತೇವೆ. ಕರ್ನಾಟಕದಲ್ಲಿ ಸಿಪಿಐಎಂ ಮತ್ತು ಜನತಾದಳ(ಎಸ್) ಪಕ್ಷಗಳು ಸ್ಥಾನ ಹೊಂದಾಣಿಕೆಯಿಂದ ಚುನಾವಣೆಯಲ್ಲಿ ಹೋರಾಡುತ್ತಿವೆ. ಸಿಪಿಐ(ಎಂ) 11 ಸ್ಥಾನಗಳಿಗೆ ಸ್ಪರ್ಧಿಸುತ್ತಿದ್ದು ಕುಡುಗೋಲು-ಸುತ್ತಿಗೆ-ನಕ್ಷತ್ರದ ಗುರುತಿಗೆ ಮತ ನೀಡಬೇಕೆಂದು ವಿನಂತಿಸುತ್ತೇವೆ.

ಸಿಪಿಐ(ಎಂ) ಮುನ್ನಡೆಯತ್ತ

ಕರ್ನಾಟಕದಲ್ಲಿ ಸಿಪಿಐ(ಎಂ) ಸ್ಪರ್ಧಿಸಿದ 11 ಕ್ಷೇತ್ರಗಳಲ್ಲಿ 8 ಕ್ಷೇತ್ರಗಳ ಮತದಾನ ಸೆ. 5 ರಂದು ನಡೆಯುತ್ತಿದೆ. ಬಾಗೇಪಲ್ಲಿ ಕ್ಷೇತ್ರದ ಚುನಾವಣೆಯೂ ಅಂದೇ ನಡೆಯಬೇಕಾಗಿದ್ದದ್ದು ಚುನಾವಣಾ ಆಯೋಗದ ತೀರ್ಮಾನದಿಂದಾಗಿ ಮುಂದೆ ಹೋಗಿದೆ. ಈ ಬಗ್ಗೆ ಒಂದು ಪ್ರತ್ಯೇಕ ವರದಿ ನೀಡಲಾಗಿದೆ.

ಈ 8 ಕ್ಷೇತ್ರಗಳಲ್ಲಿ ನಾಲ್ಕು ಕ್ಷೇತ್ರಗಳಲ್ಲಿ ಪಕ್ಷದ ಸ್ಪರ್ಧೆ ಇದೇ ಮೊದಲ ಬಾರಿ.

ರಾಜ್ಯದಲ್ಲಿ ಸಾಮೂಹಿಕ ಚಳುವಳಿಯಲ್ಲಿ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಸಿಪಿಐ(ಎಂ) ಮುಂದಿದ್ದರೂ ದುಡಿಯುವ ಜನದ ಹಿತಕ್ಕಾಗಿ ಸರ್ವಸ್ವವನ್ನು ತ್ಯಾಗ ಮಾಡಿ ದುಡಿಯುವ ಕಾರ್ಯಕರ್ತರ ಪಡೆಯನ್ನೇ ಪಡೆದಿದ್ದರೂ ಕೂಡ ರಾಜಕೀಯ ರಂಗದಲ್ಲಿ ಅದೇ ಪ್ರಮಾಣದ ಸಾಧನೆ ಮಾಡುವುದು, ತನ್ನ ರಾಜಕೀಯ ಶಕ್ತಿಯನ್ನು ಪ್ರದರ್ಶಿಸುವುದು ಸಾಧ್ಯವಾಗಿಲ್ಲ. ಇದಕ್ಕೆ ಕಾರಣವನ್ನು ವಿಶ್ಲೇಷಿಸಲು ಇದು ಸಂದರ್ಭ ಹಾಗೂ ಸರಿಯಾದ ವೇದಿಕೆಯಲ್ಲ.

ಆದರೆ ಪ್ರಮುಖ ಕಾರಣಗಳಲ್ಲೊಂದು ಸಿಪಿಐ(ಎಂ) ಬಂಡವಾಳಶಾಹಿ ಪಕ್ಷಗಳಂತೆ ಚುನಾವಣೆಗಳಲ್ಲಿ ಸ್ಪರ್ಧಿಸುವ ಏಕೈಕ ಗುರಿಯಿಂದ ಕೆಲಸ ಮಾಡುವ ಪಕ್ಷವಲ್ಲ, ಅದಕ್ಕೆ ಬದಲಾಗಿ ರಾಜ್ಯಾದ್ಯಂತ ಸಾಮೂಹಿಕ ಚಳುವಳಿಯನ್ನು ಕಟುವಲ್ಲಿ ತೊಡಗಿದೆ ಎಂಬುದು. ಇದರಿಂದಾಗಿ ಪಕ್ಷದ ಶಕ್ತಿ ಒಂದು ಪ್ರದೇಶದಲ್ಲಿ ಬಲಿಷ್ಠವಾಗಿರದೆ ರಾಜ್ಯದಲ್ಲೆಲ್ಲಾ ಹಂಚಿಹೋಗುತ್ತದೆ.

ಈ ಬಾರಿ ಸಾಮೂಹಿಕ ಚಳುವಳಿ ಒಂದು ಪ್ರದೇಶಕ್ಕೆ ನಿಷ್ಠವಾಗಿ ಹಬ್ಬಿರುವ ಕಡೆಗಳಲ್ಲಿ ಸ್ಪರ್ಧಿಸಿದೆ ಹಾಗೂ ರಾಜಕೀಯವಾಗಿ ಹೆಚ್ಚು ಸಂಘಟಿತವಾಗಿ ಚುನಾವಣೆಯಲ್ಲಿ ತೊಡಗಿದೆ.

ಈ ಹಿನ್ನೆಲೆಯಲ್ಲಿ ಈ ಬಾರಿ ಉತ್ತಮ ಫಲಿತಾಂಶ ಸಾಧಿಸುವ ನಿರೀಕ್ಷೆ ಪಡೆದಿದೆ. ಈ ಚುನಾವಣೆಗಳ ನಂತರ ಅತಿಶೀಘ್ರವಾಗಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳಿಗೂ ಚುನಾವಣೆ ನಡೆಯಲಿರುವುದರಿಂದ ಈ ಚುನಾವಣೆ ಕೆಲಸ ಈ ಚುನಾವಣೆಯ ಮೇಲೆ ಪರಿಣಾಮ ಬೀರಲಿದೆ.

ಸಿಪಿಐ(ಎಂ) ಸ್ಪರ್ಧಿಸುವ 8 ಕ್ಷೇತ್ರಗಳ ಬಗ್ಗೆ ಸಂಕ್ಷಿಪ್ತ ವರದಿ ಇಲ್ಲಿದೆ.

ಕಮಲಾಪುರ ಕ್ಷೇತ್ರ: *ಗುಲ್ಬರ್ಗಾ ಜಿಲ್ಲೆಯ ಈ ಕ್ಷೇತ್ರದಲ್ಲಿ ರೈತರ ಸಂಘಟನೆ, ಗ್ರಾಮೀಣ ಪ್ರದೇಶದಲ್ಲಿ ವಿವಿಧ ನಾಗರಿಕ ಸಮಸ್ಯೆಗಳು ಮುಖ್ಯವಾಗಿ ಹಳ್ಳಿಗಳಲ್ಲಿ ದುಡಿಯುವ ಜನರ ಶೋಷಣೆ ಮಾಡುವ ಪಾಳೆಗಾರಿ ಧಣಿಗಳ ವಿರುದ್ಧ ನಿರ್ಣಾಯಕ ಸಮರ ಸಾಗಿಸಿದ್ದು ಈ ಪ್ರದೇಶದಲ್ಲಿ ಪಕ್ಷಕ್ಕೆ ಒಂದು ಸ್ಥಳೀಯ ಆಧಾರವನ್ನು ನೀಡಿದೆ. 1986 ರಲ್ಲಿ ಜಿಲ್ಲಾ ಪಂಚಾಯತ್ ಪ್ರಪ್ರಥಮವಾಗಿ ರಚನೆಯಾದಾಗ ಈ ಕ್ಷೇತ್ರದ ಒಂದು ಭಾಗವಾದ ಚಿಂಚಲಸೂರು ಕ್ಷೇತ್ರದಿಂದ ಸಿಪಿಐ(ಎಂ) ಅಭ್ಯರ್ಥಿ ಮಾನ್ವಡೆ ಯವರು ಅತ್ಯಧಿಕ ಬಹುಮತದಿಂದ ಗೆದ್ದು ಅಚ್ಚರಿ ಮೂಡಿಸಿದ್ದರು. ನಂತರ ಜಿಲ್ಲಾ ಪಂಚಾಯಿತಿಯಲ್ಲಿ ಅವರು ನಡೆಸಿದ ಹೋರಾಟ, ಬಯಲಿಗೆಳೆದ ಭ್ರಷ್ಟಾಚಾರದ ಹಗರಣಗಳು ಹಾಗೂ ಇಡೀ ಪ್ರದೇಶದಲ್ಲಿ ಸಿಪಿಐ(ಎಂ) ಪಕ್ಷದ ಪ್ರಭಾವವನ್ನು ವಿಸ್ತರಿಸಿತು. 1995 ರಲ್ಲಿ ನಡೆದ ಚುನಾವಣೆಗಳಲ್ಲಿ ಈ ಜಿಲ್ಲಾ ಪಂಚಾಯಿತಿ ಕ್ಷೇತ್ರವನ್ನು ಉಳಿಸಿಕೊಂಡದ್ದಲ್ಲದೆ ಮೂರು ತಾಲ್ಲೂಕು ಪಂಚಾಯಿತಿ ಕ್ಷೇತ್ರವನ್ನು ಪಕ್ಷ ಪಡೆಯಿತು.*

ಜೊತೆಗೆ ನಿರಂತವಾಗಿ ರೈತ ಸಂಘಟನೆ, ಹೋರಾಟಗಳು- ಪ್ರಮುಖವಾಗಿ ತೊಗರಿ ಬೆಳೆಗಾರರನ್ನು ಕಬ್ಬು ಬೆಳೆಗಾರರ ಸಮಸ್ಯೆಗಳ ಪರಿಹಾರಕ್ಕಾಗಿ, ನೀರಾವರಿ ಹಾಗೂ ಗ್ರಾಮೀಣ ಬಡವರಿಗೆ ಸರ್ಕಾರಿ ಭೂಮಿ ಹಂಚಿಕೆ, ಹಸಿರು ಕಾರ್ಡು, ವಸತಿ ಮೊದಲಾದ ಸೌಕರ್ಯಗಳ ಸಲುವಾಗಿ ನಡೆಸಿದ ಪ್ರಯತ್ನಗಳು ಇಡೀ ಕಮಲಾಪುರ ಕ್ಷೇತ್ರದಲ್ಲಿ ರೈತ ಸಂಘದ ಪ್ರಭಾವ ಹಬ್ಬಲು ಕಾರಣವಾಗಿದೆ. ಜೊತೆಗೆ ಮಾನ್ವಡೆ ಹೋರಾಟಗಾರ, ಅಲ್ಲಿಯ ಜನರ ಭಾಷೆಯಲ್ಲಿ ಹೇಳುವುದಾದರೆ 'ವರ್ಕರ್ ಹಾನ' (ಒಳ್ಳೆಯ ಕೆಲಸಗಾರರಾಗಿದ್ದಾರೆ) ಎಂದು ಹೆಸರು ಪಡೆದಿದ್ದಾರೆ. ಇವುಗಳ ಜೊತೆಗೆ ಕ್ಷೇತ್ರದ ಪ್ರದೇಶದಲ್ಲಿ ಡಿವೈಎಫ್ಐ, ಜನವಾದಿ ಮಹಿಳಾ ಸಂಘಟನೆ, ಈ ಜನ ವಿಭಾಗಗಳ ಸಮಸ್ಯೆಯ ಪರಿಹಾರ ಹಾಗೂ ಅವರಲ್ಲಿ ಎಚ್ಚರ ಮೂಡಿಸುವ ಕೆಲಸ ಮಾಡಿವೆ. ಇತ್ತೀಚೆಗೆ ವಿದ್ಯಾರ್ಥಿ ಸಂಘಟನೆಯೂ ಆರಂಭವಾಗಿದೆ.

1994 ರಲ್ಲಿ ಪ್ರಥಮ ಬಾರಿಗೆ ಇಲ್ಲಿ ಚುನಾವಣೆಯಲ್ಲಿ ಹೊಂದಾಣಿಕೆಯಿಲ್ಲದೆ ಸ್ಪರ್ಧಿಸಿದಾಗ 12 ಸಾವಿರಕ್ಕಿಂತಲೂ ಹೆಚ್ಚು ಮತಗಳು ಸಿಕ್ಕು ಕಾಂಗ್ರೆಸ್, ಜನತಾದಳ ಪಕ್ಷಗಳಿಗೆ ಸರಿಸಮಾನಾದ ಮತಗಳಿಸಿತ್ತು. 1994 ರ ಚುನಾವಣೆಯಲ್ಲಿಯೇ ಸಾಧಿಸಬಹುದಾಗಿದ್ದ ಗೆಲುವಿಗೆ ಇದ್ದ ಒಂದು ಪ್ರಮುಖ ಅಡ್ಡಿಯೆಂದರೆ ಈ ಪಕ್ಷ ಕ್ಷೇತ್ರದಲ್ಲಿ ಹೊಸದು, ಆದ್ದರಿಂದ ಗೆಲ್ಲುವ ಪಕವಲ್ಲ ಎನ್ನುವ ಭಾವನೆ ಕ್ಷೇತ್ರದ ಕೆಲವು ಭಾಗಗಳಲ್ಲಿ ವ್ಯಾಪಕವಾಗಿ ಹರಡಿದ್ದುದು. ಚುನಾವಣಾ ಫಲಿತಾಂಶ ಹೊರಬಿದ್ದ ಮೇಲೆ ಪಡೆದ ಮತಗಳ ಸಂಖ್ಯೆ ಆ ಭಾಗಗಳಲ್ಲಿ 'ಅರೇ ಅನ್ಯಾಯವಾಯಿತಲ್ಲ, ಇಷ್ಟು ಮತಗಳನ್ನು ಇವರು ಪಡೆಯುವರೆಂದು ಮೊದಲೇ ತಿಳಿದಿದ್ದರೆ ನಮ್ಮ ಮತವನ್ನು ಹಾಕಿ ಈ ಬಾರಿ ಗೆಲ್ಲಿಸ ಬಹುದಾಗಿತ್ತು, ಕ್ಷೇತ್ರದ ಅಭಿವೃದ್ಧಿಗೆ ಅದರಿಂದ ಬಹಳ ಅನುಕೂಲವಾಗುತ್ತಿತ್ತು' ಎಂಬ ಅಭಿಪ್ರಾಯ ಆಗಲೇ ವ್ಯಕ್ತವಾಗಿತ್ತು. ಇಂತಹ ಪಕ್ಷಕ್ಕೆ ನಾವು ಅನ್ಯಾಯ ಮಾಡಿದ್ದೇವೆ ಎಂಬ ಪಶ್ಚಾತ್ತಾಪ ಈ ಚುನಾವಣೆಗಳಲ್ಲಿ ಬಹುದೊಡ್ಡ ಅನುಕೂಲಕರ ಅಂಶವಾಗಿದೆ.

1991 ರ ನಂತರ ಪಕ್ಷದ ಹಾಗೂ ಸಾಮೂಹಿಕ ಚಳುವಳಿ ಈ ಪ್ರದೇಶದಲ್ಲಿ ಮತ್ತಷ್ಟು ವಿಸ್ತಾರವಾಗಿದೆ ಹೀಗಾಗಿ ದುರ್ಬಲ ಪ್ರದೇಶಗಳ ವ್ಯಾಪ್ತಿ ಕಡಿಮೆಯಾಗಿದೆ.

ಇವುಗಳ ಜೊತೆಗೆ ಇಲ್ಲಿಯ ಬಿಜೆಪಿ ಶಾಸಕನ ಕೆಲಸ ಹಾಗೂ ಭ್ರಷ್ಟಾಚಾರದ ಬಗ್ಗೆ ಇರುವ ಅಸಮಾಧಾನ, ಬಿಜೆಪಿ ಬಗ್ಗೆ ಇದ್ದ ಭ್ರಮೆ ಹರಿದಿರುವುದು ಕೂಡ ನಮ್ಮ ಪಕ್ಷದ ಬೆಂಬಲಕ್ಕೆ ಬರುತ್ತಿದೆ. ಕಾಂಗ್ರೆಸ್ ನ ಅಭ್ಯರ್ಥಿ 1994 ರಲ್ಲಿ ಹಿಂದೆ ಎರಡು ಬಾರಿ ಶಾಸಕನಾಗಿ ಕೆಲವ ಕಾಲ ಮಂತ್ರಿಯೂ ಆಗಿದ್ದರೂ ಕ್ಷೇತ್ರದ ಅಭಿವೃದ್ಧಿಗೆ ಗಮನಕೊಡಲಿಲ್ಲ ಎಂಬ ಕಾರಣಕ್ಕಾಗಿ ನಿರಾಕರಿಸಲ್ಪಟ್ಟ ಜಿ.ರಾಮಕೃಷ್ಣ. ಈ ಬಾರಿ ರಾಜ್ಯದ ಇತರ ಕಡೆಗಳಲ್ಲಿ ಜನತಾದಳ (ಜಾತ್ಯಾತೀತ) ನಮ್ಮ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದರೂ ಕಮಲಾಪುರದಲ್ಲಿ ಅಭ್ಯರ್ಥಿಯನ್ನು ನಿಲ್ಲಿಸಿದ್ದಾರೆ. ಆದರೂ ನಮ್ಮ ಪಕ್ಷ ಹಾಗೂ ಅಭ್ಯರ್ಥಿಯ ಜನಾನುರಾಗದ ಪರಿಣಾಮವಾಗಿ ಈ ಸ್ಪರ್ಧೆಗಳು ಕಳಾಹೀನವಾಗಿವೆ.

ಒಟ್ಟಿನಲ್ಲಿ ನಮ್ಮ ಪಕ್ಷ ಈ ಕ್ಷೇತವನ್ನು ಗೆಲ್ಲುವುದಕ್ಕೆ ಸಮೀಪವಾಗಿದೆ.

ದೇವದುರ್ಗ: ರಾಯಚೂರು ಜಿಲ್ಲೆಯ ಒಣಬೇಸಾಯದ ಪ್ರದೇಶದಲ್ಲಿರುವ ಈ ಕ್ಷೇತ್ರದ ರೈತ ಚಳುವಳಿ 1982 ರಿಂದಲೇ ಆರಂಭವಾಯಿತು. 1980 ರ ದಶಕದಲ್ಲಿ ಅಲ್ಲಿ ತೀವ್ರವಾಗಿದ್ದ ಬರಗಾಲದ ಸಂದರ್ಭದಲ್ಲಿ ಪರಿಹಾರಕಾರ್ಯಗಳಿಗಾಗಿ ನಡೆಸಿದ ಜಾಥಾ ಹೋರಾಟಗಳು, ಸರ್ಕಾರಿ ಭೂಮಿ ಆಕ್ರಮಣ ಹಾಗೂ ಹಂಚಿಕೆಗಾಗಿ, ಹಾಗೂ ಇತ್ತೀಚಿನ ಕೆಲ ವರ್ಷಗಳಲ್ಲಿ ಈಗಾಗಲೇ ಐಕ್ಯರಂಗದಲ್ಲಿ ಹಿಂದೆ ವರದಿಯಾಗಿರುವಂತೆ ಕೃಷ್ಣಾ ಬಲ ದಂಡೆ ನೀರಾವರಿಗಾಗಿ ನಡೆಸಿದ ವ್ಯಾಪಕ ಹೋರಾಟ ಪ್ರಾಂತ ರೈತ ಸಂಘದ ಪ್ರಭಾವವನ್ನು ವಿಸ್ತರಿಸಿದೆ. ಪಕ್ಷದ ಸಂಘಟನೆಯೂ ಹೆಚ್ಚು ದೃಢಗೊಳ್ಳುತ್ತಿದೆ.

1995 ರಲ್ಲಿ ಪಕ್ಷ ಪಡೆದ 10 ತಾಲ್ಲೂಕು ಪಂಚಾಯ್ತಿ ಸ್ಥಾನಗಳಲ್ಲಿ ದೇವದುರ್ಗವೂ ಒಂದು. ಇದು ಪಕ್ಷಕ್ಕೆ ಜನರ ನಡುವೆ ಇರುವ ಬೆಂಬಲವನ್ನು ವ್ಯಕ್ತಪಡಿಸುತ್ತದೆ.

1994 ರಲ್ಲಿ ಜನತಾದಳದ ಮಹಿಳಾ ಅಭ್ಯರ್ಥಿ ಲಲಿತಾನಾಯಕರು ಈ ಕ್ಷೇತ್ರದ ಶಾಸಕರಾಗಿ ಚುನಾಯಿತರಾಗಿದ್ದರು. ಹಾಲಿ ವಿಧಾನ ಸಭಾ ಸದಸ್ಯರು ಇರುವ ಕ್ಷೇತ್ರ ಆಯಾ ಪಕ್ಷಕ್ಕೆ ಎಂಬದೊಂದು ಪದ್ಧತಿಯಾಗಿದ್ದರೂ ಸಿಪಿಐ(ಎಂ) ಪಕ್ಷದ ಒತ್ತಡಕ್ಕೆ ಜನತಾದಳ ಈ ಕ್ಷೇತ್ರವನ್ನು ಬಿಟ್ಟುಕೊಟ್ಟು ಲಲಿತನಾಯಕರ ಸ್ಪರ್ಧೆಯನ್ನು ಹಿಂದೆ ತೆಗೆದುಕೊಂಡಿತು. ಇದು ಕ್ಷೇತ್ರದಲ್ಲಿ ಈಗಾಗಲೇ ಇರುವ ಸಿಪಿಐ(ಎಂ) ಆಧಾರಕ್ಕೆ ಮತ್ತಷ್ಟು ರಂಗನ್ನು ಒದಗಿಸಿತು.

ಇಂದು ಈ ಕ್ಷೇತ್ರದಲ್ಲಿ ಸಿಪಿಐ(ಎಂ)ನ ಜೊತೆಗೆ ಕಾಂಗ್ರೆ, ಬಿಜೆಪಿ, ಪಟೇಲರ ಜನತಾದಳದ ತುಂಡು ಪ್ರಮುಖ ಅಭ್ಯರ್ಥಿಗಳು. ಕಾಂಗ್ರೆ ಇಲ್ಲಿ ಬಲವಾಗಿದ್ದರೂ ಕಾಂಗ್ರೆನ ವಿಧಾನ ಸಭಾ ಅಭ್ಯರ್ಥಿಯ ಇತಿಹಾಸ ಜನರಲ್ಲಿ ಅತೃಪ್ತಿಮೂಡಿಸಿದೆ. ಬಿಜೆಪಿಯ ಅಭ್ಯರ್ಥಿ ನಿನ್ನೆಯವರೆಗೆ ಕಾಂಗ್ರೆನಲ್ಲಿದ್ದ, ಟಿಕೆಟ್ ಸಿಗಲಿಲ್ಲ ಎಂಬಕಾರಣಕ್ಕಾಗಿ ಬಿಜೆಪಿಗೆ ಜಿಗಿದ ಕಂಟ್ರಾಕ್ಟರ್ (ಗುತ್ತೆದಾರ) . ಇದು ಬಿಜೆಪಿಗೆ ಬಿಟ್ಟು ಕೊಟ್ಟಿರುವ ಕ್ಷೇತ್ರದ ಎಂದು ಎಷ್ಟು ಬಾರಿ ಸಾರಿದ್ದರೂ, ಆದೇಶ ನೀಡಿದರೂ ಹಿಂತೆಗೆಯದ ಪಟೇಲರ ಬಣದ ಅಭ್ಯರ್ಥಿ ಒಂದು ಮಠದ ಸ್ವಾಮಿ.

ಸಿಪಿಐ(ಎಂ) ಅಭ್ಯರ್ಥಿ ಕೂಲಿಕಾರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರ ಕ್ಷೇತ್ರಕ್ಕೆ ಹೊಸಬರಾಗಿದ್ದರೂ ಹೋರಾಟಕ್ಕೆ ಹೊಸಬರಲ್ಲ. ಅವರು ಕ್ಷೇತ್ರದ ಸಮಸ್ಯೆಗಳನ್ನು ತಿಳಿಯಾದ ಭಾಷೆಯಲ್ಲಿ ವ್ಯಕ್ತ ಪಡಿಸುವ ರೀತಿ ಜನರನ್ನು ಆಕರ್ಷಿಸಿದೆ.

ಪಕ್ಷದ ಪ್ರಮುಖ ಆಧಾರ ನೆಲೆಯಾದ ಪ್ರದೇಶಗಳಲ್ಲಿನ ಜನ ಬೆಂಬಲವನ್ನು ಆಧಾರವಾಗಿಟ್ಟಕೊಂಡು ಕ್ಷೇತ್ರದ ಇತರ ಭಾಗಗಳಲ್ಲಿ ವ್ಯಾಪಕವಾಗಿ ಚುನಾವಣಾ ಪ್ರಚಾರ ನಡೆಸಲಾಗಿದೆ. ಟ್ರಾಕ್ಟರ್ ಜಾತಾಗಳು, ಮಹಿಳೆಯರ ತಂಡಗಳು ಜನರಿಂದ ಒಳ್ಳೆಯ ಸ್ಪಂದನವನ್ನು ಪಡೆದಿವೆ. ಒಟ್ಟಿನಲ್ಲಿ ಈ ಕ್ಷೇತ್ರದಲ್ಲಿ ಪಕ್ಷ ಉತ್ತಮ ಮುನ್ನಡೆ ಸಾಧಿಸುವ ದಿಶೆಯಲ್ಲಿದೆ.

ಹೊಸಪೇಟೆ: 1980 ರ ದಶಕದ ಆದಿಯಲ್ಲಿ ಪ್ರಗತಿಪರ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ, ವಿದ್ಯಾರ್ಥಿ ಸಂಘಟನೆಯ ಮೂಲಕ ಈ ಪ್ರದೇಶದಲ್ಲಿ ಎಡ ಚಳುವಳಿ ಕಾಲೂರಿತು. ಹೊಸಪೇಟೆ ನಗರದಲ್ಲಿ ಡಿ.ವೈ.ಎಫ್.ಐ, ಎಸ್.ಎಫ್.ಐ ಗಳು ಮನೆಮಾತಾಗಿವೆ. ಹೊಸಪೇಟೆನಗರ, ಸುತ್ತಲಿನ ಪ್ರದೇಶಗಳಲ್ಲಿ ನಾಗರೀಕ ಸೌಲಭ್ಯಗಳ ಸುಲುವಾಗಿ, ಬಡಜನರಿಗೆ ಮನೆ ಹಸಿರು ಕಾರ್ಡು ಸಲುವಾಗಿ ಹೋರಾಡುವ ಏಕ ಮಾತ್ರ ಸಂಘಟನೆ ಡಿವೈಎಫ್ಐ ಎಂದು ಪ್ರಸಿದ್ಧವಾಗಿದೆ.

ಇತ್ತೀಚಿನ ದಿನಗಳಲ್ಲಿ ಹೊಸಪೇಟೆ ಹಾಗೂ ಕಂಪ್ಲಿ ಪಟ್ಟಣಗಳಲ್ಲಿ ಕಾರ್ಮಿಕ ಚಳುವಳಿ ವ್ಯಾಪಕವಾಗಿ ಬೆಳೆಯುತ್ತಿದೆ. ಕಂಪ್ಲಿ ಸಕ್ಕರೆ ಕಾರ್ಖಾನೆ ಕಾರ್ಮಿಕರ ಧೀರ್ಘ ಹೋರಾಟ ಸಾಗಿದೆ. ಕರ್ನಾಟಕ ಆಯಿಲ್ ಫೆಡರೇಷನ್, ಆಟೋ, ಅಂಗನವಾಡಿ ನೌಕರರ ಹೋರಾಟಗಳೂ ಜೊತೆಗೂಡಿವೆ. ಪುರಸಭಾ ಚುನಾವಣೆಗಳಲ್ಲಿ ಪಕ್ಷ ಒಂದು ಕ್ಷೇತ್ರದಲ್ಲಿ ಗೆಲುವನ್ನು ಸಾಧಿಸಿದೆ.

ಇಂದು ಚುನಾವಣೆಯಲ್ಲಿ ಹಾಲಿ ಬಿಜೆಪಿ ಶಾಸಕ ಶಂಕರೇಗೌಡ, ಕಾಂಗ್ರೆ, ಜನತಾದಳ (ಜಾತ್ಯಾತೀತ) ಪಕ್ಷಗಳು ಸ್ಪರ್ಧೆಯಲ್ಲಿರುವ ಇನ್ನಿತರ ಪಕ್ಷಗಳು. ನಮ್ಮ ಪಕ್ಷದ ಅಭ್ಯರ್ಥಿ ಕಾಂ. ಪ್ರಸನ್ನಕುಮಾರ್ ಈ ಪ್ರದೇಶದ ಕಾರ್ಮಿಕ ಚಳುವಳಿಯಲ್ಲಿ ಹಾಗೂ ರಾಜಕೀಯ ಚಟುವಟಿಕೆಗಳಲ್ಲಿ ಹೆಸರು ಪಡೆದಿದ್ದಾರೆ. ಕ್ಷೇತ್ರಕ್ಕೆ ಹೊರಗಿನವರಾಗಿದ್ದರೂ ತಮ್ಮ ಹೋರಾಟಗಳಿಂದಾಗಿ ಈ ಕ್ಷೇತ್ರದ ಭಾಗವೇ ಆಗಿಹೋಗಿದ್ದಾರೆ.

ಸಂಘಟಿತ ರಾಜಕೀಯ ಪಚಾರ ನಡೆಸಿ ಈ ಪ್ರದೇಶದಲ್ಲಿ ಎರಡು ದಶಕಗಳಷ್ಟು ಕಾಲ ಸಾಮೂಹಿಕ ಚಳುವಳಿಯ ಪ್ರಭಾವವನ್ನು ರಾಜಕೀಯಗೊಳಿಸುವ ಪ್ರಯತ್ನ ನಡೆಯುತ್ತಿದೆ. ಈ ಕ್ಷೇತ್ರದಲ್ಲಿನ ಸ್ಪರ್ಧೆ ಪಕ್ಷದ ರಾಜಕೀಯ ಆಧಾರವನ್ನು ವಿಸ್ತರಿಸುವ ಮೂಲಕ ಉತ್ತಮ ಮುನ್ನಡೆ ಸಾಧಿಸುವ ಹುರುಪಿನಲ್ಲಿದೆ.

ವರ್ತೂರು: ಬೆಂಗಳೂರು ಹೊರವಲಯದಲ್ಲಿರುವ ಪಟ್ಟಣ ಪ್ರದೇಶಗಳು ಹಾಗೂ ಸಮೀಪದ ಹಳ್ಳಿಗಳು ಕೂಡಿರುವ ಕ್ಷೇತ್ರವಿದು. ಬೆಂಗಳೂರಿನಲ್ಲಿ ಸಿಐಟಿಯು (ಕಾರ್ಮಿಕ ಚಳುವಳಿ) ಯ ಆಧಾರದ ಪ್ರದೇಶದಲ್ಲೊಂದು. ಎರಡು ದಶಕಗಳಿಗಿಂತಲೂ ಹೆಚ್ಚು ಕಾಲ ಈ ಕ್ಷೇತ್ರದ ಹತ್ತಾರು ಸಾವಿರ ಕಾರ್ಮಿಕರ ಹೋರಾಟದಲ್ಲಿ ಪಕ್ಷ ದುಡಿದಿದೆ. ಇಲ್ಲಿಯ ಹತ್ತಾರು ಸಾವಿರ ಕಾರ್ಮಿಕರ ಜೀವನ ಮಟ್ಟ ಗೌರವಯುತವಾಗುವಂತೆ ಏರಲು ಚಳುವಳಿ ದೊಡ್ಡ ಕಾಣಿಕೆ ನೀಡಿದೆ.

ಸಿಐಟಿಯು ಇಲ್ಲಿಯ ಪ್ರಮುಖ ಹಾಗೂ ಸಂಘರ್ಷಪರ ಸಂಘಟನೆಯಾಗಿ ಹೆಸರುವಾಸಿಯಾಗಿದೆ. ಕಾಂ. ಸೂರಿಯವರು ಈ ಕ್ಷೇತ್ರದಲ್ಲಿ 1978,1983,1985 ರಲ್ಲಿ ಸ್ಪರ್ಧಿಸಿದ್ದರು. 1983 ರಲ್ಲಿ ಈ ಕ್ಷೇತ್ರವನ್ನು ಸ್ಪರ್ಧಿಸಿದ್ದರು. ಕೇವಲ ಎರಡೇ ವರ್ಷಗಳ ಕಾಲ (1983-1985) ವಿಧಾನ ಸಭಾ ಸದಸ್ಯರಾಗಿದ್ದರೂ ಕೂಡ ಶಾಸಕರಾಗಿ ಅವರು ಸಾಧಿಸಿದ ಅಭಿವೃದ್ಧಿ ಇಂದೂ ನೆನಪಿನಲ್ಲಿದೆ. ಆದರೆ 1985 ರಲ್ಲಿ ಚುನಾವಣಾ ಹೊಂದಾಣಿಕೆಯಾದರೂ ಕೂಡ ಜನತಾಪಕ್ಷ ಬಂಡಾಯ ಸ್ಪರ್ಧಿಯನ್ನು ಸ್ಪರ್ಧೆಗಿಳಿಸಿ ಎರಡೂ ಪಕ್ಷಗಳೂ ಸೋಲುವಂತಾ ದ್ದರಿಂದ ಈ ಕ್ಷೇತ್ರದಲ್ಲಿ ಮುಂದಿನ ಚುನಾವಣೆಗಳಲ್ಲಿ ಸ್ಪರ್ಧೆ ಮಾಡಿರಲಿಲ್ಲ. ಈಗ 14 ವರ್ಷಗಳ ತರುವಾಯ ಈ ಪ್ರದೇಶದಲ್ಲಿ ಪಕ್ಷದ ರಾಜಕೀಯ ನೆಲೆಯನ್ನು ವಿಸ್ತರಿಸುವ ಹಾಗೂ ಗಟ್ಟಿಗೊಳಿಸಲು ಇಲ್ಲಿ ಸ್ಪರ್ಧಿಸಲಾಗಿದೆ.

ಇಂದು ಸಿಪಿಐ(ಎಂ) ಪಕ್ಷದ ಪರವಾಗಿ ಕಾರ್ಮಿಕ ಮುಂದಾಳು ಎಚ್.ಎನ್. ಗೋಪಾಲಗೌಡರು ಸ್ಪರ್ಧಿಸಿದ್ದರೆ, ಹಾಲಿ ಶಾಸಕ ಹಾಗೂ ಸಚಿವ ಅಶ್ವತ್ಥನಾರಾಯಣರೆಡ್ಡಿ, ಕಾಂಗ್ರೆ ನಿಂದ ಕೃಷ್ಣಪ್ಪ, ಜನತಾದಳ(ಜಾತ್ಯಾತೀತ) ಪಕ್ಷದಿಂದ ಶಂಕರ್ ಕಣದಲ್ಲಿದ್ದಾರೆ. ಇಲ್ಲಿನ ಕಾರ್ಮಿಕ ಚಳುವಳಿಗಳಲ್ಲಿ ದುಡಿಯುತ್ತಾ ಪಕ್ಷದ ಸ್ಥಳೀಯ ಸಮಿತಿಯ ಕಾರ್ಯದರ್ಶಿಯಾಗಿರುವ ಗೋಪಾಲಗೌಡರು ಗ್ರಾಮೀಣ ಬಡವರ ವಸತಿ ಸಮಸ್ಯೆಗಳ ನಿರ್ವಾಹಣೆಗಾಗಿ ಕೂಡ ದುಡಿದವರಾಗಿದ್ದಾರೆ. ಸಾಂಸ್ಕೃತಿಕ ಪ್ರಚಾರ, ನೂರಾರು ಕಾರ್ಮಿಕರ ನಿರಂತರ ಪ್ರಚಾರ, ಈ ಪ್ರದೇಶದಲ್ಲಿ ಪ್ರಮುಖವಾಗಿರುವ ಐಟಿಐ, ಎಚ್.ಎ.ಎಲ್. ಮೊದಲಾದ ಕಾರ್ಮಿಕರಲ್ಲಿ ಸಿಐಟಿಯು ಬಗೆಗಿನ ಗೌರವ ಇವೆಲಾ ಚುನಾವಣೆಯಲ್ಲಿ ನೆರವಾಗಲಿವೆ. ಒಟ್ಟಿನಲ್ಲಿ ಈ ಪ್ರದೇಶದಲ್ಲಿ ಪಕ್ಷ ಮುನ್ನಡೆ ಸಾಧಿಸಲು ಈ ಚುನಾವಣೆ ನೆರವಾಗಲಿದೆ.

ದೊಡ್ಡಬಳ್ಳಾಪುರ: *ಬೆಂಗಳೂರು ಜಿಲ್ಲೆಯ ಬಳಿಯ ಗ್ರಾಮಾಂತರ ಪ್ರದೇಶ.ಬಹುಭಾಗ ಒಣಬೇಸಾಯದ ಭೂಮಿ. ವ್ಯಾಪಕವಾದ ಕೊಳವೆ ಭಾವಿಗಳ ನೀರಾವರಿ, ಅಲ್ಲಿ ಹಣ್ಣು ತರಕಾರಿ, ರೇಷ್ಮೆ ಮೊದಲಾದ ಬೆಳೆಗಳು ಅದರ ಮಾರುಕಟ್ಟೆ ಸಮಸ್ಯೆ, ವಿದ್ಯುತ್ ಹಾಗೂ ಅಂತರ್ಜಲದ ಸಮಸ್ಯೆಗಳ ಅಲ್ಲಿನ ರೈತರನ್ನು ಕಾಡುತ್ತಿದೆ. ತಾಲ್ಲೂಕು ಕೇಂದ್ರವಾದ ದೊಡ್ಡಬಳ್ಳಾಪುರ ರೇಷ್ಮೆ ಬಟ್ಟೆಗಳ ಉತ್ಪಾದನಾ ಕೇಂದ್ರ.*

ಇಲ್ಲಿ ಸ್ವಾತಂತ್ರ್ಯದ ಕೆಲ ವರ್ಷಗಳಲ್ಲಿಯೇ ಆರಂಭವಾದ ಜಮೀನುದಾರಿ ಪದ್ಧತಿಯ ವಿರುದ್ಧ ಹೋರಾಟದಿಂದ ರೈತ ಸಂಘ ಪ್ರಭಾವಯುತವಾಗಿದೆ. ಆದರೆ ನಿರಂತರವಾಗಿ ಚಳುವಳಿಗಳು ಮುಂದುವರೆಯದ ಕಾರಣ ಸಂಘಟನೆ ದೃಢವಾಗಿಲ್ಲದ ಈ ಪ್ರದೇಶದಲ್ಲಿ ಪಕ್ಷದ ಸ್ಪರ್ಧೆ ದಶಕಗಳ ಕಾಲದ ಚಳುವಳಿಯ ಸಂಪರ್ಕಗಳನ್ನು ದೃಢಗೊಳಿಸಲು, ರಾಜಕೀಯ ಪ್ರಭಾವವನ್ನು ಗಟ್ಟಿಗೊಳಿಸಲು ನೆರವಾಗಲಿದೆ. ಪ್ರಾಂತ ರೈತ ಸಂಘದ ಮೊದಲ ಪದಾಧಿಕಾರಿಗಳಲ್ಲೊಬ್ಬರಾದ ಕಾಂ. ರಾಮಭದ್ರಯ್ಯನವರ ಪುತ್ರರಾದ ಪಕ್ಷದ ಅಭ್ಯರ್ಥಿ ಕಾಂ. ಚಂದ್ರತೇಜಸ್ವಿ ರೈತ ಸಂಘಟನೆಗೆ ದುಮುಕಿ ತಮ್ಮ ಹಿರಿಯ ತಲೆಮಾರಿನ ಕೆಲಸವನ್ನು ಮುಂದುವರೆಸಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರಾಗಿ ಕಾಂಗ್ರೆಸ್ ಮುಖಂಡರಾಗಿದ್ದ ಕಾಂ. ಮುಗುವಾಳಪ್ಪನವರು ನಂತರ ಕಮ್ಯೂನಿಸ್ಟ್ ಚಳುವಳಿಗೆ ಸೇರಿ ಮಾಡಿರುವ ತ್ಯಾಗ ಮತ್ತು ಪ್ರಭಾವ ಚುನಾವಣೆಯಲ್ಲಿ ನೆರವು ನೀಡಲಿದೆ.

ರೈತ ಸಂಘದ ಜೊತೆಗೆ ಯುವಜನ ಸಂಘಟನೆ, ವಿದ್ಯಾರ್ಥಿ, ಮಹಿಳಾ ಸಂಘಟನೆಗಳು ಬೆಳೆಯುತ್ತಿದ್ದರು ಈ ಎಲ್ಲಾ ಕಾರ್ಯಕರ್ತರೂ ಚುನಾವಣೆಯಲ್ಲಿ ಧುಮುಕಿ ಕೆಲಸ ಮಾಡುತ್ತಿದ್ದಾರೆ.

ಶಿಡ್ಲಘಟ್ಟ: ಇಡೀ ಕೋಲಾರ ಜಿಲ್ಲೆಯಲ್ಲಿಯೇ ಕಾಂ. ಪಾಪಣ್ಣನವರ ಕಾರ್ಯಕ್ಷೇತ್ರವೆಂದು ಹೆಸರಾದ ಶಿಡ್ಲಘಟ್ಟ. ಭೂಮಿ ಹೋರಾಟದಲ್ಲಿ ನೇರ ಸಂಘರ್ಷಕ್ಕೆ ಧುಮುಕಿ ಸಾವಿರಾರು ರೈತರಿಗೆ ಸರ್ಕಾರಿ ಭೂಮಿ ಆಕ್ರಮಿಸಿ ಜೀವನ ನಿರ್ವಹಿಸಲು ಅವಕಾಶ ನೀಡಿದ ರೈತ ಸಂಘದ ಪ್ರಸಿದ್ಧ ಚಳುವಳಿ ಒಂದು ಕಡೆ. ಹಾಲು, ರೇಷ್ಮೆ ಉತ್ಪಾದನೆಯಲ್ಲಿ ಸಹಕಾರಿ ಕ್ಷೇತ್ರವನ್ನು ಬೆಳೆಸಿ ರಾಜ್ಯದಲ್ಲಿಯೇ ಹೆಸರಾದ ಅಭಿವೃದ್ಧಿ ಕೆಲಸ ಮತ್ತೊಂದು ಕಡೆ ಈ ಪ್ರದೇಶವನ್ನು ಕಮ್ಯೂನಿಸ್ಟ್ ಚಳುವಳಿಯ ಪ್ರಭಾವಕ್ಕೊಳಗಾಗಿಸಿದ್ದವು.

ಕಾಂ. ಪಾಪಣ್ಣನವರ ಜೊತೆ ಹೋರಾಟದಲ್ಲಿ ಧುಮುಕಿ ಅನುಭವ ಪಡೆದ ಹಾಗೂ ಕುಂದಲಗುರ್ಕಿ ಪಂಚಾಯ್ತಿ ಪ್ರದೇಶದಲ್ಲಿ ಈ ಕೆಲಸವನ್ನು ಮುಂದುವರೆಸುತ್ತಿರುವ ಕಾಂ. ಕೆ.ಎಂ. ವೆಂಕಟೇಶ್ ಈ ಪ್ರದೇಶದಲ್ಲಿ ಸಿಪಿಐ(ಎಂ) ಅಭ್ಯರ್ಥಿ.

ಇಂದು ಕಾಂಗ್ರೆಸ್, ಜನತಾದಳ (ಪಟೇಲ್ ಬಣ) ದ ಅಭ್ಯರ್ಥಿಗಳಿಗೆ ತೀವ್ರ ಸ್ಪರ್ಧೆಯ ನಡುವೆ ವ್ಯಾಪಕವಾಗಿ ಪ್ರಚಾರ ಮಾಡಿ ಪಕ್ಷದ ಸಾಮೂಹಿಕ ಚಳುವಳಿಯ ಸಂಪರ್ಕವನ್ನು ರಾಜಕೀಯವಾಗಿ ದೃಢಗೊಳಿಸುವುದರಲ್ಲಿ ಪಕ್ಷ ತೊಡಗಿದೆ. ಪಕ್ಷದ ಹಾಗೂ ರೈತ ಚಳುವಳಿಯ ದೊಡ್ಡ ಇತಿಹಾಸ ವಿರುವ ಈ ಪ್ರದೇಶದಲ್ಲಿ ನಮ್ಮ ಸ್ಪರ್ಧೆ ಪಕ್ಷದ ಬೆಳವಣಿಗೆಗೆ ಅಡಿಪಾಯವನ್ನು ಹಾಕುತ್ತದೆ.

ಚಿಂತಾಮಣಿ: ಕೋಲಾರ ಜಿಲ್ಲೆಯ ಈ ಕ್ಷೇತ್ರವೂ ಪಕ್ಷದ ಚಳುವಳಿಯ ದೀರ್ಘ ಇತಿಹಾಸ ಇರುವ ಪ್ರದೇಶ. ಭೂಮಿ ಹೋರಾಟ ಪಾಳೆಯಗಾರಿ ಪಟ್ಟ ಭದ್ರ ಹಿತಾಸಕ್ತಿಗಳೊಡನೆ ಸಂಘರ್ಷವಿರುವ ಈ ಕ್ಷೇತ್ರದಲ್ಲಿ ಇದು ನಮ್ಮ ಎರಡನೇಯ ಸ್ಪರ್ಧೆ.

1994 ರಲ್ಲಿ ಜಿ.ಸಿ.ಬಯ್ಯಾರೆಡ್ಡಿ ನಮ್ಮ ಪಕ್ಷದ ಸ್ಪರ್ಧಿಯಾಗಿದ್ದಕ್ಕೆ ಇಂದು ಈ ಪ್ರದೇಶದಲ್ಲಿ ಆರಂಭಕಾಲದಿಂದಲೂ ದುಡಿದಿರುವ ಹಾಗೂ ದಬ್ಬಾಳಿಕೆಯನ್ನು ಎದುರಿಸಿದ ಕಾಂ.ಜಿ.ವಿ.ಅಶ್ವತ್ಥನಾರಾಯಣ ರೆಡ್ಡಿ ನಮ್ಮ ಸ್ಪರ್ಧಿ.

ಚಿಂತಾಮಣಿ ಪ್ರದೇಶದ ಕಾಂಗ್ರೆಸ್ ಹಾಗೂ ಜನತಾದಳದ ಪಾಳೆಯಗಾರಿ ಪ್ರಭುಗಳ ನನಡುವಣ ಸಮರ ಕಣವಾಗಿದೆ.

ಅವರಲ್ಲಿ ಒಬ್ಬರು ಜನತಾದಳ (ಪಟೇಲರ ಬಣ) ಮತ್ತೊಬ್ಬರು ಕಾಂಗ್ರೆಸ್‌ಗೆ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿ ಚುನಾವಣೆಯೆಂದರೆ ಕ್ಷೇತ್ರದ ಪ್ರತಿನಿಧಿಯನ್ನಾರಿಸುವ ಕ್ರಿಯೆಯಲ್ಲ ಇಬ್ಬರು ಸ್ಪರ್ಧಿಗಳು ರಾಜಕೀಯ ಜೀವನ್ಮರಣದ ಹೋರಾಟ ವೆಂಬಂತೆ ನಡೆಯುತ್ತಿರುವ ಈ ಸ್ಪರ್ಧೆಯಲ್ಲಿ ಪಕ್ಷದ ಸ್ಪರ್ಧೆ ಪಕ್ಷವನ್ನು ನಿರಂತರವಾಗಿ ರಾಜಕೀಯವಾಗಿ ಬೆಳೆಸುವ ಹಾದಿಯಲ್ಲಿ ಮತ್ತೊಂದು ಹೆಜ್ಜೆಯಾಗಲಿದೆ.

ಕೆ.ಜಿ.ಎಫ್: ಬಂಗಾರದ ಗಣಿಗಳಿಂದ ಬಿಇಎಂಎಲ್ ನಂತಹ ಕೇಂದ್ರ ಸಾರ್ವಜನಿಕ ಉದ್ಯಮದಿಂದ ಕೂಡಿ ಸ್ವಾತಂತ್ರ್ಯ ಪೂರ್ವ ಕಾಲದಿಂದಲೂ ಕಾರ್ಮಿಕ ಚಳುವಳಿಗೆ ನಂತರ ಕಮ್ಯೂನಿಸ್ಟ್ ಪ್ರಭಾವಕ್ಕೆ ಹೆಸರಾದ ಪ್ರದೇಶ. 1985 ರಲ್ಲಿ ಒಮ್ಮೆ ಚುನಾವಣೆಯಲ್ಲಿ ಈಗಿನ ಕಾಂ.ಟಿ.ಎಸ್.ಮಣಿ ಸ್ಪರ್ಧಿಸಿವಿಜೇತರಾದವರು. ಹಲವು ದಶಕಗಳಿಂದ ಕಾರ್ಮಿಕ ಚಳುವಳಿ ತೀವ್ರವಾಗಿದೆ. ಬಂಗಾರದ ಗಣಿಯನ್ನೇ ಮುಚ್ಚುವ, ಅದರ ಕಾರ್ಮಿಕರ ಸಂಖ್ಯೆ ತೀವ್ರ ಕಡಿತಕ್ಕೆ ಒಳಗಾಗುವ ಹಿನ್ನಲೆಯಲ್ಲಿ ಇತ್ತೀಚೆಗೆ ಕಾರ್ಮಿಕ ಚಳುವಳಿಯೂ ದುರ್ಬಲವಾಗಿದೆ.

ಕೆ.ಜಿ.ಎಫ್. ನ ರಾಜಕೀಯವೂ ಕೂಡ ಕೇವಲ ದಲಿತರೇ ಇದ್ದಾರೇನೋ ಎನ್ನುವಂತೆ ಕಾಣುವ ಈ ಕ್ಷೇತ್ರದ ಸ್ವರೂಪದಂತೆಯೇ ಭಿನ್ನವಾದುದು. ಇಲ್ಲಿ ತಮಿಳು ಪ್ರದೇಶದಿಂದ ವಲಸೆ ಬಂದಿರುವ ಕಾರ್ಮಿಕರ ದೇಶೀಯಾತೆಗೆ ಅನುಗುಣವಾಗಿ ಎ.ಐ.ಡಿ.ಎಂ.ಕೆ ಹಾಗೂ ಡಿ.ಎಂ.ಕೆ ಗಳ ಪ್ರಭಾವ. ಜೊತೆಗೆ ಕಾಂಗ್ರೆಸ್, ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ ಇವುಗಳ ನಡುವೆ ಸಿಪಿಐ(ಎಂ) ಸ್ಪರ್ಧಿಸಿದೆ. ಕಾರ್ಮಿಕ ಚಳುವಳಿಯನ್ನು ಬಲಪಡಿಸುವ ಹಾಗೂ ರಾಜಕೀಯ ಪ್ರಭಾವವನ್ನು ಧೃಢಗೊಳಿಸುವತ್ತ ಇಲ್ಲಿಯ ಸ್ಪರ್ಧೆ ಇದನ್ನು ಸಹಾಯಕವಾಗುತ್ತದೆ.

- ಜಿ.ಎನ್.ನಾಗರಾಜ್



ಚುನಾವಣೆ-99



ಚೆಡ್ಡಿ ಪ್ರಚಾರಕರು, ಕನ್ನಡದ ಚೆಡ್ಡಿ ಪತ್ರಕರ್ತರು ಮತ್ತು ಚುನಾವಣೆ

ಆಗಸ್ಟ್ 22. ದಿಲ್ಲಿಯ ಒಂದು ಸಾರ್ವಜನಿಕ ಸಂಪರ್ಕಗಳ ಕೆಲಸ ಮಾಡಿಕೊಡುವ ಕಂಪನಿ(ಜಾಹೀರಾತು ಕಂಪನಿಯೆಂದೇ ಇಟ್ಟುಕೊಳ್ಳಿ) ಯಿಂದ ಹಲವು ಪತ್ರಕರ್ತರಿಗೆ ಫೋನು - 'ರಾಜಸ್ಥಾನದ ಒಬ್ಬ ಹಿರಿಯ ಬಿಜೆಪಿ ಮುಖಂಡ ದಿಲ್ಲಿಯ (ಲಕ್ಷ್ಮಿ) ಹೋಟೆಲೊಂದರಲ್ಲಿ ತಂಗಿದ್ದಾರೆ. ಅವರು ಕೇವಲ ಕೆಲವು ಆರಿಸಿದ ಪತ್ರಕರ್ತರೊಂದಿಗೆ ಮಾತನಾಡಲು ಒಪ್ಪಿದ್ದಾರೆ. ಇದರಿಂದ ರಾಜ್ಯಾನದ ಚುನಾವಣಾ ಸನ್ನಿವೇಶದ ಬಗ್ಗೆ ನಿಮಗೊಂದು ಕಣ್ಣೋಟ ಸಿಗಬಹುದು, ಬನ್ನಿ"

ಮರುದಿನವೂ ಅಂತದ್ದೇ ಫೋನು. ಅದೇ ಕಂಪನಿಯವರೋ, ಬೇರೆಯವರೋ ಗೊತ್ತಾಗಲಿಲ್ಲ. ಈ ಬಾರಿ 'ಆರಿಸಿದ' ಪತ್ರಕರ್ತರಿಗೆ ಉತ್ತರ ಪ್ರದೇಶದ ಹಲವು ಮುಖಂಡರೊಂದಿಗೆ ಮಾತನಾಡುವ 'ಸೌಭಾಗ್ಯ'.

ಯಾರು ಈ ಮಂದಿ? ಈ 'ಮಾತುಕತೆ'ಗಳನ್ನು ಏರ್ಪಡಿಸಲು ತಮಗೇನೂ ಯಾರೂ ಹಣ ನೀಡಿಲ್ಲ ಎಂದು ಅವರು ಹೇಳುತ್ತಾರಂತೆ. ಆದರೂ ಏಕೆ ತಮಗೆ ಪರಿಚಯವೇ ಇಲ್ಲದ ದಿಲ್ಲಿಯ ದೊಡ್ಡ ಪತ್ರಿಕೆಗಳ ಪತ್ರಕರ್ತರಿಗೆ ಫೋನ್ ಮಾಡುತ್ತಾರೆ? ಇವರು ಆ ಮುಖಂಡರ ಪರವಾಗಿಯೇ ಫೋನ್ ಮಾಡುತ್ತಾರೆ - ಮರುದಿನದ ಪತ್ರಿಕೆಗಳಲ್ಲಿ ಪುಕ್ಕಟೆಯಾಗಿ ತಮ್ಮ 'ಕಣ್ಣೋಟ' ಗಳು ಪ್ರಕಟವಾದರೆ ಪೂರ್ಣಪುಟದ ಜಾಹೀರಾತುಗಳಿಗಿಂತಲೂ ಹೆಚ್ಚಿನ ಪ್ರಚಾರ ಸಿಗುವು ದಿಲ್ಲವೇ? ಚುನಾವಣಾ ಆಯೋಗಕ್ಕೆ ಇದಕ್ಕೆ ತಗಲಿದ 'ವೆಚ್ಚ'ದ ಲೆಕ್ಕ ಕೊಡ ಬೇಕಾಗಿಲ್ಲ. ಚುನಾವಣಾ ಆಯೋಗ ನೀತಿಸಂಹಿತೆಯ ಅಡ್ಡಿಯೂ ಇಲ್ಲ.

ದಿಲ್ಲಿಯ ಟಿ.ವಿ. ಚಾನೆಲೊಂದು 'ಪ್ರಮುಖ ಅಭ್ಯರ್ಥಿ'ಗಳ ಪ್ರಚಾರದ ಬಗ್ಗೆ ವಿಶೇಷ ಕಾರ್ಯಕ್ರಮ ಬಿತ್ತರಿಸುತ್ತಿದೆ. ದಿಲ್ಲಿಯ ಪತ್ರಿಕೆಗಳಲ್ಲಿ ಬಿಜೆಪಿಯ ಒಂದು ಜಾಹೀರಾತು - " ದಿಲ್ಲಿ ವಾಸಿಗಳ ಪ್ರಿಯ ನೇತಾರ ಮದನ್‌ಲಾಲ ಖುರಾನರು ಕಾರ್ಯಕ್ಷೇತ್ರದಲ್ಲಿ - ಝೀ ನ್ಯೂಸ್ ಚಾನೆಲ್ ನೋಡಿ ಆನಂದಿಸಿ". ಇಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಚುನಾವಣಾ ಪ್ರಚಾರ ಸಲ್ಲದೆಂಬ ಚುನಾವಣಾ ಆಯೋಗದ 'ನಿಷೇಧ' ತಪ್ಪಿಸಿಕೊಳ್ಳಲು ಇದಕ್ಕಿಂತ ಜಾಣ ಉಪಾಯ ಬೇರಿದೆಯೇ ಎಂದು 'ದಿ ಹಿಂದು' ನಲ್ಲಿ ಹಸನ್ ಸುರೂರು ಕೇಳುತ್ತಾರೆ.

ಶೆಣೈಯವರನು ಕಾಡುತಿದೆ ನಾಯಿಗೂಡಿನ ಮಾಯೆ

ಆದರೆ ನಮ್ಮ ದೆಹಲಿಯಿಂದ ಪತ್ರ ಬರೆಯುವ ಪತ್ರಕರ್ತರೆನಿಸಿಕೊಂಡ ಟಿ.ಎ.ಆರ್.ಶೆಣೈರವರಿಗೆ ಈಗ ಈ ಮುಖವಾಡಗಳೂ ಬೇಡ ಎನಿಸುವಂತಹ ಪರಿಸ್ಥಿತಿ ಬಂದಿರಬೇಕು.

'ತರಂಗ'ದ ಒಂದು ಸಂಚಿಕೆಯಲ್ಲಿ ಅವರು 'ನೀರುಳ್ಳಿ' ಯನ್ನು ಮರೆಸಲು ಈಗಿನ ಕೆಳಮಟ್ಟ ಹಣದುಬ್ಬರ(ಬೆಲೆಯೇರಿಕೆ ಅಲ್ಲ - ನೆನಪಿಡಿ - ಈ ಬಗ್ಗೆ ಪುಟ 6-7 ರಲ್ಲಿರುವ 'ಬಿಜೆಪಿಯ ಹದಿಮೂರು ಸುಳ್ಳುಗಳು' ಲೇಖನ ನೋಡಿ), ಸ್ಟಾಕ್ ಮಾರ್ಕೆಟ್ 1991-92 ರ ಹಗರಣದ ಕಾಲದಲ್ಲಿ (ಹರ್ಷದ್ ಮೆಹ್ತಾ ಹಗರಣದ ಕಾಲದಲ್ಲಿ - ನೆನಪಿಸಿಕೊಳ್ಳಿ) ಇದ್ದುದಕ್ಕಿಂತಲೂ ಏರಿದ್ದನ್ನು 'ತರಂಗ'ದ ಓದುಗರಿಗೆ ನೆನಪಿಸುತ್ತಾರೆ. ಕಾರ್ಗಿಲ್ ಅಂತೂ ಇದ್ದೇ ಇದೆ.

ನಂತರದ 'ತರಂಗ' ಸಂಚಿಕೆಯಲ್ಲಂತೂ ಶೆಣೈಯವರಿಗೆ ತಮ್ಮ ಪತ್ರಕರ್ತನ ಮುಖವಾಡವೂ ಮುಜುಗರ ತಂದಿರಬೇಕು. ಮುಖ್ಯ ಚುನಾವಣಾ ಕಮಿಷನರ್ ಗಿಲ್‌ರವರಿಗೆ ತೀವ್ರ ಆತಂಕ ಮೂಡಿಸಿದ ಪ್ರಮೋದ್ ಮಹಾಜನ್, ಜಾರ್ಜ್ ಫರ್ನಾಂಡೀಸ್‌ರವರಿಗಿಂತಲೂ ಕೆಳಮಟ್ಟಕ್ಕೆ ಇಳಿದಿದ್ದಾರೆ.

ಶೆಣೈಯವರಿಗೆ ಏಕೋ, ಮತ್ತೆ-ಮತ್ತೆ ಸಾಕು ನಾಯಿಯ, ನಾಯಿಗೂಡಿನ ನೆನಪು ಕಾಡುತ್ತಿರುವಂತಿದೆ ಅವರ ಈ 'ಲೇಖನ' ನೋಡಿದರೆ. ತಾವಿರುವ ಜಾಗದಲ್ಲಿ ಸಿಪಿಐ(ಎಂ)ನ್ನು ಕೂರಿಸಿ, ಬಿಜೆಪಿ ಜಾಗದಲ್ಲಿ ಕಾಂಗ್ರೆಸ್(ಐ) ನ್ನು ಕೂರಿಸಿ ಅದೇನೋ ವಿಚಿತ್ರ ತೃಪ್ತಿ ಕಾಣುವ ವಿಚಿತ್ರ ಕಾಯಿಲೆಯಿಂದ ಅವರು ಬಾಧಿತರಾದಂತೆ ಕಾಣುತ್ತದೆ.

★★★

ಸಿಪಿಐ(ಎಂ) ಏಕೆ ಈಗ ಕಾಂಗ್ರೆಸ್(ಐ) ಮತ್ತು ಬಿಜೆಪಿಯಿಂದ ಸಮಾನದೂರವೆಂಬ ಧೋರಣೆ ಕೇವಲ ಗೋಸುಂಬೆತನ ಎಂದು ಹೇಳುತ್ತದೆ ಎಂಬುದು ಶೆಣೈಯಂತವರು ಕಣ್ಣಿಗೆ ಕಟ್ಟಿದ ಕಾವಿ ಪಟ್ಟಿಯನ್ನು ಬಿಚ್ಚಿದರೆ ಮಾತ್ರ ಅರ್ಥವಾದೀತು. ಅಥವಾ ನಾಯಿಗೂಡಿನ ನೆನಪು ಕಾಡುವವರೆಗೆ ಅದು ಅರ್ಥವೂ ಆಗುವುದಿಲ್ಲವೇನೋ. ಅಥವಾ ಬಿಜೆಪಿಯ 'ಹಗರಣಮುಕ್ತ' 'ದೇಶಪ್ರೇಮಿ' ಬಡಾಯಿಗಳನ್ನೆಲ್ಲಾ ಸಿಪಿಐ(ಎಂ) ಸಂಪೂರ್ಣ ಬಯಲಿಗೆಳೆದು ತಮ್ಮ ಮಹಾ ಗುರು 'ನಿಷ್ಕಳಂಕ' ವಾಜಪೇಯಿಯವರಿಗೆ ಅಳಿದುಳಿದ ಆಸರೆಯೂ ಇಲ್ಲದ್ದನ್ನು ಕಂಡು ತಮ್ಮ ಇತರ ಕಿರಿ ಗುರುಗಳಾದ ಮಹಾಜನ್, ಫರ್ನಾಂಡೀಸ್ ಚಾಳಿಯೇ ಉಳಿದಿರುವ ಏಕೈಕ ದಾರಿ ಆಗಿಸಿದೆಯೇನೋ ಪಾಪ!

ವಸ್ತುನಿಷ್ಠತೆ ಮಾರಾಟಕ್ಕಿದೆ, ಕಾಮತರೇ!

ಅವರದೇ ಗರಡಿಗೆ ಸೇರಿದ, ಆದರೆ ಇನ್ನೂ ಅವರ ಮಟ್ಟಕ್ಕೆ ಬಹುಶಃ ಇಳಿಯಲೊಲ್ಲದ ಎಂ.ವಿ.ಕಾಮತ್ ಈಗ ಬಿಜೆಪಿ ಅಭ್ಯರ್ಥಿಯಾಗಿರುವ, ಹಿಂದೆ ಬೋಫೋರ್ಸ್ ಹಗರಣದಲ್ಲಿ ಹೆಸರು ಕೇಳಿಬರುತ್ತಿದ್ದ ಅರುಣ್ ನೆಹರೂರವರ ಚುನಾವಣಾ ಭವಿಷ್ಯವನ್ನು ಅವರಿಗಿಂತಲೂ ಹೆಚ್ಚಾಗಿ ನಂಬಿ ಕೂತಂತಿದೆ. ಬಿಜೆಪಿ ಪ್ರಚಂಡ ಗೆಲುವಿನೊಂದಿಗೆ ಅಧಿಕಾರಕ್ಕೆ ಬಂದರೆ ಮುಂದಿನ ಸರಕಾರ ರಚನೆ ತಲೆನೋವಾಗಲಾರದೇ ಎಂಬ ಚಿಂತೆ ಈಗ ಅವರಿಗೆ. ಆದರೆ ಹೆಗಡೆಯವಂತವರಿರುವಾಗ ಬಿಜೆಪಿ ಹೆದರಬೇಕಾಗಿಲ್ಲವಂತೆ.

ಅರುಣ್ ನೆಹರೂ ಬಿಜೆಪಿ ಅಭ್ಯರ್ಥಿಯಾಗಿ ಬಿಜೆಪಿಯ 'ಪ್ರಚಂಡ' ಗೆಲುವಿನ ಬಗ್ಗೆ ಹೇಳುವುದನ್ನೇನೋ ಅರ್ಥ ಮಾಡಿಕೊಳ್ಳಬಹುದು. ಏಕೆಂದರೆ ಯುದ್ಧ ಮತ್ತು ಚುನಾವಣೆಯಲ್ಲಿ ವಸ್ತುನಿಷ್ಠತೆ ಮೊದಲ ಬಲಿಯಂತೆ! ಆದರೆ ಪತ್ರಕರ್ತನಾಗಿ ಕಾಮತರಿಗೆ ಅದು ಬೇಡವೇ ಎಂದು ಕೇಳಬಹುದು. ಬಿಜೆಪಿ ಅಭ್ಯರ್ಥಿಗೂ ಕಾಮತರಂತಹ ಪತ್ರಕರ್ತರಿಗೂ ವಸ್ತುನಿಷ್ಠತೆಗೂ ಎತ್ತಣಿಂದೆತ್ತಣ ಸಂಬಂಧ? ಕಾಮತರು ತಮ್ಮ 'ಮುಖವಾಡ'ವನ್ನು ಧರಾಸೆ ಒಪ್ಪಿಸಿದ್ದಾರೆ. 'ಉದಯವಾಣಿ' ಓದಿ ಯಡಿಯೂರಪ್ಪನವರು ಈಗ ನಿರಾಳವಾಗಿ ತಮ್ಮ ಪ್ರಚಾರ ಮುಂದುವರೆಸಬಹುದು.

- ಕೆ.ವಿ.

ಅಧಿಕೃತ ಅಭ್ಯರ್ಥಿ ಯಾರು, ಹೆಗ್ಡೆಯವರೇ?

ಇದು ಹೆಗ್ಡೆಯವರು ಹೋದಲ್ಲೆಲ್ಲಾ ಮತದಾನದ ಎರಡು ದಿನಗಳ ಹಿಂದಿನವರೆಗೂ ಎದುರಿಸಬೇಕಾಗಿರುವ ಪ್ರಶ್ನೆ. ಜನಗಳಿಂದಲ್ಲ, ಸ್ವತಃ ತಮ್ಮ ಕಾರ್ಯಕರ್ತರಿಂದಲೂ ಕೂಡಾ. ಹೆಗ್ಡೆಯವರು ಉತ್ತರ ಕೊಡುವ ಬದಲು "ಈ ಸಮಸ್ಯೆ ಇಲ್ಲಿ ಮಾತ್ರವಲ್ಲ, 26 ಕ್ಷೇತ್ರಗಳಲ್ಲಿವೆ" ಎನ್ನುವಾಗ ಆ ಕಾರ್ಯಕರ್ತರಿಗೆ ಇನ್ನೂ ದಿಗಿಲು. ಅವರ ದಿಗಿಲು ಇಳಿಸಲು 'ವಾಜಪೇಯಿಯವರೊಡನೆ ಮಾತಾಡಿದ್ದೇನೆ' ಎಂಬ ಆಶ್ವಾಸನೆ.

✻✻✻

ಈಗ ಕರ್ನಾಟಕದಲ್ಲೇ ಓಡಾಡುತ್ತಿರುವ ಬಿಜೆಪಿ ಅಧ್ಯಕ್ಷ ಕುಶಭಾವು ಠಾಕ್ರೆಯವರನ್ನು ಕೇಳಿದಾಗ ಅವರಿಂದ ಉತ್ತರವಿಲ್ಲ - ಮೌನ. ಯುದ್ಧದ ಮಧ್ಯದಲ್ಲಿರುವುದರಿಂದ ಉತ್ತರ ಹೇಳಲು ಸಾಧ್ಯವಿಲ್ಲ ಎಂದು ನುಣುಚಿಕೊಂಡರಂತೆ.

✻✻✻

ಯುದ್ಧ ಯಾರೊಡನೆ ಎಂಬ ಸಂದೇಹವೂ ಈ ಮೈತ್ರಿಕೂಟದ ಕಾರ್ಯಕರ್ತರಲ್ಲಿ ಗೊಂದಲವುಂಟು ಮಾಡಿದಂತಿದೆ. ಉದಾಹರಣೆಗೆ ಜೆ.ಹೆಚ್.ಪಟೇಲರನ್ನು ಚನ್ನಗಿರಿಯಲ್ಲಿ ಗೆಲ್ಲಿಸಲೂ ಬೇಕು, ಸೋಲಿಸಲೂ ಬೇಕು. ಆದರೆ ಎರಡೂ ಹೇಗೆ ಸಾಧ್ಯ? ಇದೇ ಬಿಜೆಪಿ ಮುಖಂಡರ ಸಮಸ್ಯೆಯಂತೆ.

✻✻✻

ಚನ್ನಗಿರಿಯಲ್ಲಿಯೇ ಎನ್‌ಡಿಎ ಕೂಟದ ಇಬ್ಬರು ಅಭ್ಯರ್ಥಿಗಳಿದ್ದಾರೆ ಎನ್ನುವುದು ಏನನ್ನು ತೋರಿಸುತ್ತದೆ ಎಂದು ಜೆ.ಡಿ.(ಯು) ನ ಕಾರ್ಯಕರ್ತರಿಗೆ ಆತಂಕ. ಹೊರನೋಟಕ್ಕೆ ಬಿಜೆಪಿ ಅಭ್ಯರ್ಥಿ ಸ್ವತಂತ್ರ ಅಭ್ಯರ್ಥಿ. ಆದರೆ ಬಿಜೆಪಿ ಕಾರ್ಯಕರ್ತರು ಆತನ ಪ್ರಚಾರದಲ್ಲೇ ತೊಡಗಿದ್ದಾರಂತೆ. ಇನ್ನೂ ಮುಖ್ಯಮಂತ್ರಿಯಾಗಿರುವವರ ಕ್ಷೇತ್ರದಲ್ಲೇ ಎನ್‌ಡಿಎ ದ ಜಂಟಿ ಪ್ರಚಾರವಿಲ್ಲ!

✻✻✻

ಮುಂದಿನ ಮುಖ್ಯಮಂತ್ರಿ(ಗಳು)!

ಆದರೆ ಎನ್‌ಡಿಎ ಬಾಗಿಲೆದುರು ದಿನಗಟ್ಟಳೆ ಕಾದ ಪಟೇಲ್ ಇನ್ನೂ ಹತಾಶರಾಗಿಲ್ಲವಂತೆ. ಮುಂದಿನ ಮುಖ್ಯಮಂತ್ರಿ ನಾನೇ ಎಂಬ ಇಂಗಿತ ವ್ಯಕ್ತಪಡಿಸಿದ್ದಾರಂತೆ. ನಿಜ, ಮುಂದಿನ ಮುಖ್ಯಮಂತ್ರಿಯನ್ನು ಮೈತ್ರಿ ಕೂಟದ ಶಾಸಕಾಂಗ ಸಭೆ ತೀರ್ಮಾನಿಸುತ್ತದೆ ಎಂದೂ ಹೇಳಿದ್ದಾರೆ.

✻✻✻

ಬಿಜೆಪಿ ಅಧ್ಯಕ್ಷ ಕುಶಭಾವು ಠಾಕ್ರೆಯವರೂ ಹಾಗೇ ಹೇಳಿದ್ದಾರೆ. ಆದರೆ ಬಿಜೆಪಿಗೆ ಮೈತ್ರಿಕೂಟದಲ್ಲಿ ಹೆಚ್ಚಿನ ಜವಾಬ್ದಾರಿ [illegible]ದರಿಂದ ಯಡಿಯೂರಪ್ಪನವರು [illegible]ಮಂತ್ರಿಯಾಗುತ್ತಾರೆಯೇ ಎಂದು ಉತ್ತರಿಸಲು ಕೂಡಾ ಠಾಕ್ರೆಯವರಿಗೆ ಸಾಧ್ಯವಿಲ್ಲವಂತೆ. ಆದರೆ ಈ 'ಹೆಚ್ಚಿನ ಜವಾಬ್ದಾರಿ'ಯಲ್ಲಿ ತಮ್ಮ ಬಂಡಾಯ ಅಭ್ಯರ್ಥಿಗಳನ್ನು ಹಿಂದಕ್ಕೆ ತಗೊಳ್ಳುವ ಜವಾಬ್ದಾರಿಯೂ ಇಲ್ಲವೇ ಎಂದು ಜೆಡಿ(ಯು) ಕಾರ್ಯಕರ್ತರು ಹತಾಶೆಯಿಂದ ಕೇಳುತ್ತಿದ್ದಾರಂತೆ.

✻✻✻

ಈ ನಡುವೆ ಒಂದು 'ಸರ್ವೆ' ಬಿಜೆಪಿಗೆ 140 ಸ್ಥಾನ ಕೊಡಿಸಿದರೆ, ಇನ್ನೊಂದು ಸರ್ವೆ ಕಾಂಗ್ರೆಸ್‌ಗೆ 115 ಸ್ಥಾನ ಕೊಡಿಸಿದೆ. ನಿಜವಾಗಿ ಈ ಸ್ಥಾನಗಳನ್ನು ಕೊಡುವ ಮತದಾರರು ಮಾತ್ರ ಒಳಗೊಳಗೇ ನಗುತ್ತಿದ್ದಾರೆ.

✻✻✻

ಜತೆಗೆ ಪಟೇಲರ ಜೋಕುಗಳನ್ನು, ಪಟೇಲರ ಬಗ್ಗೆ ಜೋಕುಗಳನ್ನು ಕೇಳಿ ಜನಕ್ಕೆ ನಗಬೇಕೋ, ಅಳಬೇಕೋ ತಿಳಿಯುತ್ತಿಲ್ಲ. ಕಾಂಗ್ರೆಸ್ಸಿಗರು ಮಂಗಗಳು ಎಂದ ಪಟೇಲ್ ಜೋಕಿಗೆ ಪ್ರತಿಯಾಗಿ ಕಾಂಗ್ರೆಸ್‌ನ ಹಸನಬ್ಬ ಪಟೇಲರು ಹೆಂಡ ಕುಡಿದ ಮಂಗ ಎಂದಿದ್ದಾರೆ.

ಇಣುಕು-ನೋಟ

✻✻✻

ಬೆಂಗಳೂರಿನಲ್ಲಿ ವಾಜಪೇಯಿಯವರ ಬಹಿರಂಗ ಸಭೆಯಲ್ಲಿ ಈಗಿನ್ನೂ ಮುಖ್ಯಮಂತ್ರಿ ಪೀಠದಲ್ಲೇ ಇರುವ ಪಟೇಲರನ್ನು ಅನಂತಕುಮಾರರು ತಮ್ಮ ಭಾಷಣದಲ್ಲಿ ಸ್ವಾಗತಿಸದೇ ಇರುವುದು ಜೆಡಿ(ಯು) ಕಾರ್ಯಕರ್ತರ ಹತಾಶೆಯನ್ನು ಇನ್ನೂ ಹೆಚ್ಚಿಸಿದೆಯಂತೆ. ಆದರೆ ಪಟೇಲರೂ ಬಿಡಲಿಲ್ಲ. ತಮ್ಮ ಭಾಷಣದಲ್ಲಿ ಯಡಿಯೂರಪ್ಪನವರ ಪ್ರಸ್ತಾಪವನ್ನು ಮಾಡಲಿಲ್ಲ!

✻✻✻

ಮುಗಿಯದ ಗೊಂದಲ

ಕೆಳಹಂತಗಳಲ್ಲಿ ಬಿಜೆಪಿಯವರು ಜೆ.ಡಿ(ಯು) ಜತೆ ಪ್ರಚಾರ ನಡೆಸುತ್ತಿಲ್ಲ. ಏಕೆಂಧರೆ ಕಳೆದ ಐದು ವರ್ಷಗಳಲ್ಲಿ ಹೀನಾಮಾನವಾಗಿ ಬಯ್ಯುತ್ತಿದ್ದುದೇಕೆ, ಈಗ ಕೈ ಹಿಡಿದಿರುವುದೇಕೆ ಎಂದು ಜನ ಕೇಳಿದರೆ ಏನುತ್ತರ ಕೊಡುವುದು?

✻✻✻

ಹಾಸನದಲ್ಲಿ ಜನತಾದಳ(ಯು) ನಿಂದ ನಾಮಪತ್ರ ಸಲ್ಲಿಸಿದ್ದ ಅಭ್ಯರ್ಥಿ ತಮ್ಮ ನಾಮಪತ್ರವನ್ನೇನೋ ಹಿಂದಕ್ಕೆ ಪಡೆದರು. ಆದರೆ ಬಿಜೆಪಿಯ ಕೋಮುವಾದಿ ಸ್ವರೂಪ ವೈಯಕ್ತಿಕವಾಗಿ ತಟ್ಟಿ ಈಗ ಕಾಂಗ್ರೆಸ್ಸಿಗೆ ಸೇರಿರುವುದಾಗಿ ಪ್ರಕಟಿಸಿದ್ದಾರೆ!

✻✻✻

ಚಿಕ್ಕಮಗಳೂರಿನಲ್ಲಿ ಎನ್‌ಡಿಎ ಕೂಟದಲ್ಲಿ ಭಾರೀ ಬಿರುಕು ಕಾಣಿಸಿಕೊಂಡಿದೆಯಂತೆ. ಜಿಲ್ಲೆಯ 6 ವಿಧಾನಸಭಾ ಕ್ಷೇತ್ರಗಳಲ್ಲಿ ನಾಲ್ಕರಲ್ಲಿ ಜೆಡಿ(ಯು) ಮತ್ತು ಬಿಜೆಪಿ ಅಭ್ಯರ್ಥಿಗಳಿಬ್ಬರೂ ಇದ್ದಾರೆ. ಇನ್ನೂ ವಿಶೇಷ ಸಂಗತಿಯೆಂದರೆ ತಮ್ಮ ಮುಖಂಡರು ನಾಮಪತ್ರಗಳನ್ನು ವಾಪಸು ಪಡೆಯಬೇಕೆಂದು ತಮಗೆ ಹೇಳಿಲ್ಲ ಎಂದು ಎರಡೂ ಪಕ್ಷಗಳ ಅಭ್ಯರ್ಥಿಗಳು ಹೇಳುತ್ತಿದ್ದಾರೆ!

✻✻✻

ಮಾಜಿ ತಾರೆ ಜಯಂತಿಯದ್ದು ಇಂತದ್ದೇ ಕಥೆ. ವಿಶ್ವಾಸಘಾತ ಈಗ ಅವರಿಗೆ ರಾಜಕೀಯದಲ್ಲೂ ಅನುಭವಕ್ಕೆ ಬರುತ್ತಿದೆಯಂತೆ. ಅವರು ಕೊರಟಗೆರೆಯಲ್ಲಿ ಮೈತ್ರಿಕೂಟದ ಅಧಿಕೃತ ಅಭ್ಯರ್ಥಿ. ಬಿಜೆಪಿಯವರೇ ತಮ್ಮ ಅತ್ಯುತ್ತಮ ಮಿತ್ರ ಎಂದು ಬೆನ್ನು ತಟ್ಟುವ ಹೆಗ್ಡೆಯವರ ಲೋಕಶಕ್ತಿಯ ಮಹಿಳಾ ವಿಭಾಗದ ರಾಜ್ಯ ಅಧ್ಯಕ್ಷರು ಇವರು. ಅವರ ಎದುರು ಕಮಲದ ಚಿಹ್ನೆಯೊಂದಿಗೆ ಬಿಜೆಪಿ ಬಂಡುಕೋರ ಅಭ್ಯರ್ಥಿ ಇದ್ದಾರೆ. ಅಷ್ಟೇ ಅಲ್ಲ ಜಯಂತಿ ಕಣದಿಂದ ಹಿಂದೆ ಸರಿದು ಬಿಜೆಪಿಯ ಅಭ್ಯರ್ಥಿಯನ್ನು ಬೆಂಬಲಿಸುತ್ತಿದ್ದಾರೆಂದು ಬಿಜೆಪಿಯವರು ಪ್ರಚಾರ ಮಾಡುತ್ತಿದ್ದಾರೆ. ಬಿಜೆಪಿ ಮುಖಂಡರಂತೂ ಪ್ರಚಾರಕ್ಕೆ ಬರುತ್ತಿಲ್ಲ, ಸ್ಥಳೀಯ ಲೋಕಶಕ್ತಿ ಮುಖಂಡರೂ ಬರುತ್ತಿಲ್ಲ, ಒಂಟಿಯಾಗಿ ವಿಶ್ವಾಸಘಾತದಿಂದ ನೊಂದಿರುವುದಾಗಿ ಜಯಂತಿ ಅಳಲು ತೋಡಿಕೊಂಡಿದ್ದಾರೆ.

✻✻✻

ಬೆಂಗಳೂರಿನ ಕೆಲವು ಇಂಜಿನಿಯರುಗಳು, ಡಾಕ್ಟರುಗಳು, ಪ್ರೊಫೆಸರುಗಳು, ಚಾರ್ಟರ್ಡ್ ಅಕೌಂಟೆಂಟರು ಇತ್ಯಾದಿಗಳು 'ಬಳ್ಳಾರಿ ಚಲೋ' ಮಾಡಿದ್ದಾರಂತೆ. ಏಕೆ? ವೈಯಕ್ತಿಕ ಟೀಕೆ-ಟಿಪ್ಪಣಿಗಳನ್ನು ಬದಿಗಿಟ್ಟು ಜನಗಳ ಸಮಸ್ಯೆಗಳ ಬಗ್ಗೆ ಈ ಚುನಾವಣೆಗಳಲ್ಲಿ ಚರ್ಚಿಸಿ ಎಂದು ನೆನಪಿಸಲೇ? ಅಲ್ಲ 'ವಿದೇಶಿ ಸೋನಿಯಾ' ವಿರುದ್ಧ ಪ್ರಚಾರ ಮಾಡಲು. ಇವರ ಸಂಘಟನೆಯ ಹೆಸರು 'ಸ್ವಾಭಿಮಾನಿ ಭಾರತೀಯರ ದನಿ' - ಕನ್ನಡದಲ್ಲಿ ಅಲ್ಲ - ಇಂಗ್ಲೀಷಿನಲ್ಲಿ VSRI. ಇವರು ಯಾವ ಪಕ್ಷಕ್ಕೂ ಸೇರಿದವರಲ್ಲವಂತೆ.

✻✻✻

"ನಮಗೆ ಸ್ವದೇಶಿ-ವಿದೇಶಿ ಮುಖ್ಯವಲ್ಲ, ನಮಗೆ ಕುಡಿಯುವ ನೀರು ಬೇಕು" ಎಂದು ಬಳ್ಳಾರಿ ನಗರದಿಂದ ಕೇವಲ 5. ಕಿ.ಮಿ. ದೂರದ ಕುರುಗೋಡಿನ ಜನರ ಬೇಡಿಕೆ ಪಾದಯಾತ್ರೆಯ ವೇಳೆಗೆ ಇವರ ಕಿವಿಗೂ ಬಿದ್ದಿರಬಹುದೇ? ಮಾನವ ಅಭಿವೃದ್ಧಿ

ಹೀಗನ್ನುತ್ತಿದ್ದಾರೆ

ಇವರು ಈಚೆಗೆ ಗೋಡೆಯ ಮೇಲಿನ ತಮ್ಮ ಹಣೆಬರಹ ಓದಿರಬೇಕು. ಆದ್ದರಿಂದ ಆರೆಸ್ಸೆಸ್, ಜನಸಂಘದ ನುಡಿಕಟ್ಟಿಗೆ ಇಳಿದಿದ್ದಾರೆ. ಇವರ ಅಬ್ಬರ, ಕೂಗಾಟ ಜಾಸ್ತಿ, ಓಟು ಸೊನ್ನೆ. ಹತ್ತಾರು ವರ್ಷ ಇದೇ ಸ್ಥಿತಿಯಲ್ಲಿದ್ದ ಬಿಜೆಪಿಗಳಿಗೆ ನೆಲೆ ದೊರಕಿಸಿಕೊಟ್ಟವರು ಜಾರ್ಜ್, ಹೆಗಡೆ, ಪಟೇಲ್ ತರದವರು. ಇವರನ್ನು ಜನ ಕ್ಷಮಿಸುವುದಿಲ್ಲ. ಯಾರ ಕ್ಷಮೆಯೂ, ಅನುಕಂಪೆಯೂ ಈ ಬಿಜೆಪಿಗಳಿಗೆ ಬೇಕಾಗಿಲ್ಲ. ಮೊನ್ನೆ ಒಬ್ಬರು ನನಗೆ ಫೋನ್ ಮಾಡಿ ಹೇಳಿದರು. "ನಿಮ್ಮ ಪತ್ರಿಕೆಯನ್ನು ಅಮೆರಿಕಾದ ನೆಟ್ ಟಿ.ವಿ.ಯನ್ನು ಓದುವವರಿದ್ದಾರೆ. ಅವರೆಲ್ಲರಿಗೆ ನೀವು ಬಿಜೆಪಿಯನ್ನು ಟೀಕಿಸುವುದನ್ನು ನೋಡಿ ಸಿಟ್ಟು ಬಂದಿದೆ"

ನಾನು ಅವರಿಗೆ ಓದಿ ಎಂದು ಹೇಳಿರಲಿಲ್ಲ. ಅವರು ಕೊಟ್ಟ ಹಣದಲ್ಲಿ ಇಲ್ಲಿಯ ಬಿಜೆಪಿಗಳು ಕೊಬ್ಬಿರುವುದು ಮಾತ್ರ ನಿಜ" ಅಂದೆ.

ಹಣ, ಅಧಿಕಾರ, ಹುಂಬರ ಬೆಂಬಲ-ಎಲ್ಲ ಇದ್ದಾಗ ಬಿಜೆಪಿಗಳು ಆತಂಕಗೊಳ್ಳುವುದಿಲ್ಲ. ಸುಳ್ಳುಗಳನ್ನು ಬೊಗಳುತ್ತಾ ಹೋಗುತ್ತಾರೆ. ಹಿಂದುತ್ವ, ರಾಮಮಂದಿರ, 370 ರ ರದ್ದು - ಯಾವುದು ಇಲ್ಲ. "ನಮ್ಮದು ಎಲ್ಲರೂ ಒಪ್ಪುವಂತಹ ರಾಜಕೀಯ ಪಕ್ಷ" ಅನ್ನುತ್ತಿದ್ದಾರೆ.

"ಆದರೆ ಆರೆಸ್ಸೆಸ್, ವಿಹೆಚ್‌ಪಿಗಳು ಈ ನಿಮ್ಮ ಮಾತನ್ನು ಒಪ್ಪುತ್ತಿಲ್ಲವಲ್ಲ?"

"ಒಪ್ಪುತ್ತಿದ್ದಾರೆ" ಎಂದು ಸುಳ್ಳುವ ಹೇಳುವ ಇವರು ತಮ್ಮ ನಿಗೂಢ ಅಜೆಂಡಾ ಬಿಟ್ಟುಕೊಡವು.

- ಪಿ.ಎಲ್.


"ಹಾಗೆಂದು ಕಾಂಗ್ರೆಸ್ಸೇನೂ ಪರಿಶುದ್ಧ ಶುಭ್ರ ಪಕ್ಷವೇನೂ ಅಲ್ಲ. ಅವರು ಅಧಿಕಾರಕ್ಕೆ ಬಂದರೆ ಮತ್ತದೇ ಭ್ರಷ್ಟಾಚಾರ, ಗುಂಪುಗುಳಿತನದ ಸುದ್ದಿಗಳ್ನು ಓದುವುದು ತಪ್ಪುವುದಿಲ್ಲ. ಆದರೆ ಸದ್ಯಕ್ಕೆ ಬೆಂಕಿ ಬಿದ್ದಿದೆ. ಅದನ್ನು ಆರಿಸುವವರೆಗೆ ಬೇರೆ ಕಡೆ ಚಿಂತೆ ಹರಿಯಲಾರದ ಇಕ್ಕಟ್ಟಿನಲ್ಲಿ ನಾವಿದ್ದೇವೆ.

ಅದಕ್ಕೇ ನಾಳೆ ನಾನು ಮತಗಟ್ಟೆಗೆ ಹೋಗಿ ಹಾಕುವ ವೋಟಿನ ಹಿಂದೆ ಬಿಜೆಪಿ ಸೋಲಲೇಬೇಕೆಂಬ, ಸೋನಿಯಾ ಗೆಲ್ಲಲೇಬೇಕೆಂಬ ಸರಳ ಆಯ್ಕೆಯಿದೆ. ರಾಜಕೀಯ ಜೀವನ್ಮರಣದ ಪ್ರಶ್ನೆಯಾಗುವುದು ಇಂಥ ಸಂದರ್ಭಗಳಲ್ಲೇ. ಯಾಕೆಂದರೆ ಇಂದಿನ ಆಯ್ಕೆಯಲ್ಲಿ ನನ್ನ ಹೊಟ್ಟೆ ಪಾಡು, ಮಾನ ಮರ್ಯಾದೆಯ ಪ್ರಶ್ನೆಯೂ ಅಡಗಿದೆ.

ಎನ್.ಎಸ್.ಶಂಕರ್



ಚುನಾವಣೆ-99



ಐಕ್ಯರಂಗ

ಸೂಚ್ಯಂಕದಲ್ಲಿ ಭಾರತದ್ದು 129ನೇ ಸ್ಥಾನ ಎಂದು ಆಗಲಾದರೂ ನೆನಪಾಗಿ ಈ ಜಾಣರ ಸ್ವಾಭಿಮಾನದ ದನಿ ಇನ್ನಷ್ಟು ತೀವ್ರಗೊಂಡಿತೇ ಗೊತ್ತಿಲ್ಲ.

***

ಬಿಜೆಪಿ ಮತ್ತು ಆರ್‌ಎಸ್‌ಎಸ್

ತಮಿಳುನಾಡಿನಲ್ಲಿ ಬಿಜೆಪಿ ಇಬ್ಭಾಗವಾಗಿದೆಯಂತೆ. ಹೊಸ ಪಕ್ಷದ ಹೆಸರು 'ತಮಿಳುನಾಡು ರಾಜ್ಯ ಭಾರತೀಯ ಜನತಾಪಕ್ಷ'. ಬಿಜೆಪಿ ಈಗ ಆರ್‌ಎಸ್‌ಎಸ್ ನಿಯಂತ್ರಣದಲ್ಲಿರುವುದೇ ಈ ವಿಭಜನೆಗೆ ಕಾರಣವಂತೆ.

***

ನಮ್ಮ ಹೆಗ್ಡೆಯವರು ಈ ಕಾರಣವನ್ನು ಒಪ್ಪಲಾರರು. ಏಕೆಂದರೆ ಹಾಗೆ ಆರ್‌ಎಸ್‌ಎಸ್ ಹಿಡಿತ ಬಂದರೆ ರಾಮಜನ್ಮಭೂಮಿ, 370ನೇ ಕಲಮು, ಸಮಾನ ನಾಗರಿಕ ಸಂಹಿತೆ ಇತ್ಯಾದಿ ಪ್ರಶ್ನೆಗಳು ಬರುತ್ತವೆ. ಹಾಗೆ ಬಂದರೆ ತಾನು ಮೊದಲು ಹೊರ ಬರುವುದಾಗಿ ಅವರು ಬೆದರಿಕೆ ಹಾಕಿದ್ದಾರೆ. ಅವರಿನ್ನೂ ಬಿಜೆಪಿ ಕೂಟದಲ್ಲೇ ಇದ್ದಾರಲ್ಲ!

***

ಈ ನಡುವೆ ಆರ್.ಎಸ್.ಎಸ್. ಪತ್ರಿಕೆ ಮುಖ್ಯ ಚುನಾವಣಾ ಆಯುಕ್ತ ಗಿಲ್‌ರನ್ನು ಕಾಂಗ್ರೆಸ್ ಪಕ್ಷಪಾತಿ ಎಂದು ಟೀಕಿಸಿದೆ. ಕಾರಣ ಚುನಾವಣೆಯಲ್ಲಿ ರಾಮನ ಮಾತಾಡುವಂತಿಲ್ಲ, ಕಾರ್ಗಿಲ್ ಮಾತಾಡುವಂತಿಲ್ಲ, ಹೆಂಗಸರನ್ನು ಹೀಗಳೆಯುವಂತಿಲ್ಲ - ಮತ್ತೆ ದಿಲ್ಲಿಯ ಗದ್ದುಗೆ ಹಿಡಿಯುವುದಾದರೂ ಹೇಗೆ? ಹೆಗ್ಡೆಯವರು ಏನನ್ನುತ್ತಾರೋ!

***

ರಾಜಸ್ಥಾನದಲ್ಲಿ ಜಾಟರಿಗೆ ಮೀಸಲಾತಿ

ರಾಜಸ್ಥಾನದಲ್ಲಿ ಜಾಟರು ಪ್ರಬಲ ಜಾತಿ. ಕೃಷಿಯಲ್ಲಿ ತೊಡಗಿರುವ ಈ ಜಾತಿಯಲ್ಲಿ ಪ್ರಬಲ ಭೂಮಾಲಿಕರಿಂದ ಸಣ್ಣ ರೈತರವರೆಗೆ ಎಲ್ಲರೂ ಇದ್ದರು. ಮಂಡಲ್ ಆಯೋಗದ ಪ್ರಕಾರ ಹಿಂದುಳಿದ ಜಾತಿಗಳಲ್ಲಿ ಇದು ಸೇರುವುದಿಲ್ಲ. ಕಾಂಗ್ರೆಸ್ ಇತ್ತೀಚಿನ ವಿಧಾನಸಭಾ ಚುನಾವಣೆಗಳಿಗಿಂತ ಮೊದಲು ಜಾಟರಿಗೆ ಮೀಸಲಾತಿ ಕೊಡಿಸುವುದಾಗಿ ಭರವಸೆ ಕೊಟ್ಟಿತ್ತಂತೆ. ಅದು ಜಾರಿ ಆಗಿಲ್ಲ. ಜಾಟರು ಕಾಂಗ್ರೆಸ್ ಮೇಲೆ ಸಿಟ್ಟಿಗೆದ್ದಿದ್ದಾರಂತೆ. ಜಾಟರ ಮಹಾಸಂಘ ಕಾಂಗ್ರೆಸ್ ವಿರುದ್ಧ ಮತ ನೀಡುವಂತೆ ಫರ್ಮಾನು ನೀಡಿದೆಯಂತೆ. ವಿಧಾನಸಭೆಯಲ್ಲಿ ನೆಲಕಚ್ಚಿದ ಬಿಜೆಪಿಗೆ ಇದು ಮುಳುಗುವವನಿಗೆ ಹುಲ್ಲುಕಡ್ಡಿ ಆಧಾರ ಎನ್ನುವಂತಾಗಿದೆ. ಈಗ ಜಾಟರಿಗೆ ಮೀಸಲಾತಿ ಕೊಡಿಸುವ ಭರವಸೆ ಬಿಜೆಪಿಯಿಂದ ಬಂದಿದೆ. ಸ್ವತಃ ಪ್ರಧಾನಮಂತ್ರಿಗಳೇ ಚುನಾವಣಾ ಸಭೆಯೊಂದರಲ್ಲಿ ಜಾಟರಿಗೆ ಮೀಸಲಾತಿ ಕೊಡುವುದಾಗಿ ಹೇಳಿದರಂತೆ. ಹೇಗಿದೆ ಎಲ್ಲಾ ಪಕ್ಷಗಳಿಗೆ ಜಾತಿ-ರಾಜಕೀಯ ಮಾಡುತ್ತಾರೆ ಎನ್ನುವ ಬಿಜೆಪಿಯ ಜಾತಿ-ರಾಜಕೀಯ ಮುಂದಿನ ಚುನಾವಣೆಯ ಹೊತ್ತಿಗೆ ಜಾಟ್ ಮಹಾಸಂಘ ಬಿಜೆಪಿಯ ವಿರುದ್ಧ ಮತ ನೀಡಿ ಎಂದರೆ ಆಶ್ಚರ್ಯ ಪಡಬೇಕಾಗಿಲ್ಲ!

***

ಸಿಪಿಐ(ಎಂ), ಗಣಶಕ್ತಿ ಕಛೇರಿ ವಶಪಡಿಸಿಕೊಳ್ಳುವ ಮಮತಾ

ಮಮತಾ ಮತ್ತು ತೃಣಮೂಲ ಕಾಂಗ್ರೆಸ್ ಅನ್ನು ಉದ್ಧಟತನ, ತಿಕ್ಕಲುತನ, ಧೂರ್ತತನ,

ಇಣುಕು-ನೋಟ

ಫ್ಯಾಸಿಸ್ಟ್ ಮನೋಭಾವದಲ್ಲಿ ಮೀರಿಸುವುದು ಯಾರಿಂದಲೂ ಸಾಧ್ಯವಿಲ್ಲ. ಶಿವಸೇನೆ ಬಾಳಾಠಾಕ್ರೆಯಿಂದಲೂ. ಇದೇನು ಗೊತ್ತಿದ್ದದ್ದೆ ಅಂದಿರಾ? ಮಮತಾಳ ನೂರಾರು ಧೂರ್ತತನವನ್ನು ಕಂಡವರು ಬೆಚ್ಚಿಬೀಳುವಂತೆ ಮಮತಾ ಮ್ಯಾನಿಫೆಸ್ಟೋ ಇದೆ.

ಮಮತಾ ತನ್ನ ತೃಣಮೂಲ ಕಾಂಗ್ರೆಸ್‌ನ ಮ್ಯಾನಿಫೆಸ್ಟೊದಲ್ಲಿ ಸಿಪಿಐ(ಎಂ) ರಾಜ್ಯ ಕಛೇರಿ ಮತ್ತು ಪಕ್ಷದ ಪ್ರಸಿದ್ಧ ದೈನಿಕ 'ಗಣಶಕ್ತಿ'ಯ ಕಚೇರಿಗಳನ್ನು ತಾನು ಗೆದ್ದು ಬಂದರೆ ಆಧುನಿಕ ಆಸ್ಪತ್ರೆಯಾಗಿ ಪರಿವರ್ತಿಸುವುದಾಗಿ 'ಭರವಸೆ' ಕೊಟ್ಟಿದ್ದಾಳಂತೆ. ಈ ಕಛೇರಿಗಳು ಅಗಾಧವಾಗಿ, ಭವ್ಯವಾಗಿವೆಯಂತೆ. ಇದಕ್ಕಿಂತ ಹೆಚ್ಚಿನ ಫ್ಯಾಸಿಸ್ಟ್ ಮನೋಭಾವಕ್ಕೆ ಉದಾಹರಣೆ ಬೇಕೆ? ತೃಣಮೂಲ ಕಾಂಗ್ರೆಸ್ ಬಿಜೆಪಿ ಪರಿವಾರ ಸೇರಿದಾಗ ಬಹಳ ಜನಕ್ಕೆ ಆಶ್ಚರ್ಯವಾಗಿತ್ತು. ಮಮತಾ ಸರಿಯಾದ ಫ್ಯಾಸಿಸ್ಟ್ ಕಂಪನಿಯಲ್ಲೇ ಇದ್ದರೆ ಯಾರು ಆಶ್ಚರ್ಯಪಡಬೇಕಾಗಿಲ್ಲ. ನಾನು ಎನ್.ಡಿ.ಎ ಭಾಗ ಅಲ್ಲ ಎಂದು ದಿನದಿನಕ್ಕೂ ತದ್ವಿರುದ್ಧ ಹೇಳಿಕೆ ನೀಡುತ್ತಿದ್ದ ಮಮತಾ ಈಗ ಎನ್.ಡಿ.ಎ ಸರ್ಕಾರ ರಚಿಸಿದರೆ ತಾನು, ತನ್ನ ಪಕ್ಷ ಸರ್ಕಾರದಲ್ಲಿ ಭಾಗಿಯಾಗುವುದಾಗಿ ಹೇಳಿದ್ದಾರಂತೆ. ಇದರಿಂದ ಸಂಘ ಪರಿವಾರದ ಜತೆ ಶಾಮೀಲಾಗಿಲ್ಲ ಎಂದು ಅಲ್ಪಸಂಖ್ಯಾತರ ಬೆಂಬಲ ಉಳಿಸಿಕೊಳ್ಳಲು ಮಮತಾ ಆಡುತ್ತಿದ್ದ ನಾಟಕದ ಕೊನೆಯ ಪರದೆ ಬಿದ್ದಿದೆ. ಇದಲ್ಲದೆ ಬಿಜೆಪಿ ತೃಣಮೂಲ ಅಧಿಕಾರಕ್ಕೆ ಬಂದರೆ ಪಶ್ಚಿಮ ಬಂಗಾಳದಲ್ಲಿ 2001ರ ಬದಲು ಒಂದು ವರ್ಷ ಮೊದಲೇ ಅಂದರೆ ಮುಂದಿನ ವರ್ಷ (2000)ದಲ್ಲೇ ಚುನಾವಣೆ ಮಾಡಲಾಗುವುದು ಎಂದು 'ಮಮತಾ' 'ಭರವಸೆ' ಕೊಟ್ಟಿದ್ದಾರೆ.

***

'ಹ್ಯಾಟ್-ಟ್ರಿಕ್' ಮಾಡಿದ ದಾರಾಸಿಂಗ್ ನಾಲಾಯಕ್ ಬಿಜೆಪಿ ಕಾಂಗ್ರೆಸ್ ಸರ್ಕಾರಗಳು

ದಾರಾಸಿಂಗ್ ಮತ್ತು ಆತನ ಸಂಘ ಪರಿವಾರದ ಭಸ್ಮಾಸುರರು ಗ್ರಹ ಸ್ಟುವರ್ಟ್ ಮತ್ತು ಆತನ ಕಂದಮ್ಮಗಳ ದಹನದಿಂದ ತೃಪ್ತಿಯಾಗಿಲ್ಲ. ಒಂದೇ ವಾರದೊಳಗೆ ಇಂತಹುದೇ ಎರಡು ಕೊಲೆ ಮಾಡಿ 'ಹ್ಯಾಟ್ರಿಕ್' ಹೊಡೆದಿದ್ದಾರೆ. ಕಳೆದ ವಾರ ಮುಸ್ಲಿಂ ವ್ಯಾಪಾರಿಯೊಬ್ಬನನ್ನು ಆತನ ಅಂಗಡಿಯಲ್ಲೇ ಜೀವಂತ ದಹನ ಮಾಡಲಾಯಿತು. ಈ ಕಗ್ಗೊಲೆ ಮಾಡಿದ್ದು ಸಹ ದಾರಾಸಿಗ್ ಮತ್ತು ಆತನ ಸಹಚರರು, ನೋಡಿದವರು ಇದ್ದಾರೆ ಎಂದು ವರದಿಯಾಗಿದೆ. ಪುನಃ ಇನ್ನೊಬ್ಬ ಪಾದ್ರಿಯನ್ನು ಕೊಲೆ ಮಾಡಲಾಗಿದೆ. ದಾರಾಸಿಂಗ್‌ನ ನೇರ ಕೈವಾಡದ ಮೇಲಾಗಿ ಈವರೆಗೆ ಸಿಕ್ಕಿಲ್ಲವಾದರೂ, ಇದೂ ಆತನದೇ ಕುಕೃತ್ಯ ಎನ್ನಲಾಗಿದೆ. ಈ ಮೂರು ಪ್ರಕರಣಗಳಲ್ಲಿ ಯಾವುದೇ ತುರ್ತು ಕ್ರಮ ಕೈಗೊಳ್ಳಲಾಗಿಲ್ಲ. ಈ ಪ್ರಕರಣಗಳಿಗೆ ಜವಾಬ್ದಾರಿಯಾದ ಯಾರನ್ನೂ ಒರಿಸ್ಸಾ ಕಾಂಗ್ರೆಸ್ ಸರ್ಕಾರ ಬಂಧಿಸಿಲ್ಲ. ಸಿಬಿಐ ಬಳಿ ದಾರಾಸಿಂಗ್‌ನ ರಾಜಕೀಯ ಬೆಂಬಲಿಗರ ಬಗ್ಗೆ ಸ್ಪಷ್ಟ ದಾಖಲೆ ಇದೆ ಎಂದು ವರದಿಯಾಗಿದೆ. ಬಿಜೆಪಿಗೆ ದಾರಾಸಿಂಗ್ ಸಿಗದ ಹಾಗೆ ಮಾಡುವುದರಲ್ಲಿ ಪಟ್ಟಭದ್ರ ಹಿತಾಸಕ್ತಿ ಇದೆ. ಕಾಂಗ್ರೆಸ್ ದಾರಾಸಿಂಗ್‌ನನ್ನು ಹಿಡಿಯಲಾಗದಿದ್ದಕ್ಕೆ ಅದರ ನಾಲಾಯಕ್‌ತನ ಮಾತ್ರ ಕಾರಣ. ಕೋಮುವಾದದ ವಿರುದ್ಧ ಕಾಂಗ್ರೆಸ್ ದೃಢವಾಗಿ ನಿಲ್ಲುವುದು ಎಂಬ ಭರವಸೆಯನ್ನಂತೂ ಇದು ಯಾರಿಗೂ ಕೊಡುವುದಿಲ್ಲ.

***

ಕಾಶ್ಮೀರದಲ್ಲಿ ನೇಶನಲ್ ಕಾನ್ಫರೆನ್ಸ್‌ಗೆ ವಿರೋಧ ಪಕ್ಷಗಳ ಸವಾಲು

ಕಾಶ್ಮೀರದಲ್ಲಿ ರಾಜ್ಯ ಸರ್ಕಾರ ನಡೆಸುತ್ತಾ ಬಿಜೆಪಿ ಜತೆ ಅಪವಿತ್ರ ಮೈತ್ರಿಗೆ ಇಳಿದಿದ್ದ ನ್ಯಾಶನಲ್ ಕಾನ್ಫರೆನ್ಸ್‌ಗೆ ವಿರೋಧ ಪಕ್ಷಗಳು ತೀವ್ರ ಸವಾಲು ಒಡ್ಡಿವೆ. ಶ್ರೀನಗರದಲ್ಲಿ ಮುಖ್ಯವಾಗಿ ಫರೋಕ್ ಅಬ್ದುಲ್ಲಾ ಮಗ

ಪುಟ 11ಕ್ಕೆ

ಚುನಾವಣಾ ಸಮೀಕ್ಷೆಗಳನ್ನು ನಂಬಬೇಡಿ!

ಹೀಗೆಂದು ಹೇಳಿದ್ದು ನಾವಲ್ಲ, ಎನ್‌ಡಿಎಯ ಸ್ಟಾರ್‌ನ್ಯೂಸ್‌ನ ಖ್ಯಾತಿಯ ಪ್ರಣಯ್ ರಾಯ್, ಸೆಪ್ಟೆಂಬರ್ 2 ರ 'ಚುನಾವಣಾ ಕಣ'ದಲ್ಲಿ ಎಂಬ ಕಾರ್ಯಕ್ರಮದಲ್ಲಿ. ಸೆಪ್ಟೆಂಬರ್ 3 ರಿಂದ ಅಕ್ಟೋಬರ್ 3 ರವರೆಗೆ ಚುನಾವಣಾ ಸಮೀಕ್ಷೆಗಳನ್ನು ಚುನಾವಣಾ ಆಯೋಗ ನಿಷೇಧಿಸಿದೆ. ಆದ್ದರಿಂದ ಇಂದಿನದ್ದು ಕೊನೆಯ ಸಮೀಕ್ಷೆ. ಸಮೀಕ್ಷೆಗಳು ಎಲ್ಲಾ ಉಲ್ಟಾಪಲ್ಟಾ ಆಗುತ್ತವೆ. ಅಲ್ಲದೆ ಇನ್ನೂ ಒಂದು ತಿಂಗಳಲ್ಲಿ ಚುನಾವಣಾ ಪ್ರಚಾರ ಕಾವೇರುತ್ತಿದ್ದಂತೆ ಪ್ರತಿಕ್ಷೇತ್ರದಲ್ಲಿ ಚುನಾವಣಾ ಸಮರದ ಹುರಿಯಾಳುಗಳು, ಪಕ್ಷಗಳ ನಿಲುವು ಸ್ಪಷ್ಟವಾಗುತ್ತಿದ್ದಂತೆ ಜನಾಭಿಪ್ರಾಯ ದೊಡ್ಡ ರೀತಿಯಲ್ಲಿ ಬದಲಾಗಬಹುದು ಅಂತ ಅವರ ಕೊನೆಯ ಎಚ್ಚರಿಕೆ. ಇದು ನಿಜವಾದ ಎಚ್ಚರಿಕೆಯೇ? ಇಲ್ಲವೇ ತಮ್ಮ ನಂಬಿಕಸ್ಥಿಕೆ ಉಳಿಸಿಕೊಳ್ಳುವ ಪ್ರಯತ್ನವೇ. ಅದೇನೇ ಇರಲಿ, ಚುನಾವಣೆ ಪ್ರಕ್ರಿಯೆ ಆರಂಭವಾದಂದಿನಿಂದ ಎಲ್ಲ ಪತ್ರಿಕೆ, ರೇಡಿಯೋ, ಟಿ.ವಿ. ಮಾಧ್ಯಮಗಳಲ್ಲಿ ಚುನಾವಣಾ ಸಮೀಕ್ಷೆ ಮಾಡಿದ್ದೇ ಮಾಡಿದ್ದು. ಚುನಾವಣಾ ಸಮೀಕ್ಷೆಗಳು ಎಲ್ಲಾ ಬಿಜೆಪಿ ಕೂಟ ಗೆಲ್ಲುತ್ತದೆ ಎಂದು ಹೇಳಿದ್ದೇ ಹೇಳಿದ್ದು. ಚುನಾವಣಾ ಸಮೀಕ್ಷೆಗಳು ಅರ್ಥಹೀನ, ಅವು ಯಾವಾಗಲೂ ಸರಿಯಾಗಿರಲು ಸಾಧ್ಯವಿಲ್ಲ ಎಂದಲ್ಲ. ಪ್ರಾಮಾಣಿಕವಾಗಿ ಸಾಕಷ್ಟು ವಿಸ್ತೃತ ಸ್ಯಾಂಪಲ್ ತೆಗೆದುಕೊಂಡು ಸರಿಯಾದ ಪ್ರಶ್ನೆಗಳನ್ನು ಕೇಳಿದರೆ ತಪ್ಪಿನ ಪ್ರಮಾಣ ಕನಿಷ್ಠ ಇರುವ ಸಾಧ್ಯತೆ ಇದೆ. ಆದರೆ ಈ ಸಮೀಕ್ಷೆಗಳು ಪ್ರಾಮಾಣಿಕ ಪ್ರಯತ್ನಗಳಲ್ಲ. ಸಂಘ ಪರಿವಾರ ತನ್ನ ಕಾಣದ ಬೆಂಬಲಿಗರ ಸಹಾಯದಲ್ಲಿ ನಡೆಸುತ್ತಿರುವ ಚುನಾವಣಾ ಪ್ರಚಾರದ, ಇನ್ನೊಂದು ವೈಖರಿ ಅಷ್ಟೇ.

ಮರುಳು ಮಾಡುವ ಪ್ರಯತ್ನ

ಇದಕ್ಕೆ ಸ್ಟಾರ್ ನ್ಯೂಸ್‌ನಲ್ಲಿ 'ಚುನಾವಣಾ ಕಣ'ದಲ್ಲಿ ಎಂಬ ಕಾರ್ಯಕ್ರಮದಲ್ಲಿ ಪ್ರಣವ್ ರಾಯ್‌ರವರು ಮತ್ತು ಕಂಪನಿ ಮಾಡುತ್ತಿದ್ದ ಸಮೀಕ್ಷೆ, ವಿಶ್ಲೇಷಣೆಯ ಉದಾಹರಣೆ. ಇದರಲ್ಲಿ ಅತ್ಯಂತ ಹಾಸ್ಯಾಸ್ಪದ ಮತ್ತು ಜನರನ್ನು ತಪ್ಪು ದಾರಿಗೆಳೆಯುವ ಗಂಭೀರ ಪ್ರಯತ್ನ 'ವಾಜಪೇಯಿ ಜನಪ್ರಿಯತೆ' ಸಮೀಕ್ಷೆ ಬಗ್ಗೆ. ಯಾವ ರಾಜ್ಯದಲ್ಲೂ ವಾಜಪೇಯಿಗೆ ಶೇಕಡಾ 50 ಕ್ಕಿಂತ ಕಡಿಮೆ ರೇಟಿಂಗ್ ಬರಲೇ ಇಲ್ಲವಂತೆ. 'ವಾಜಪೇಯಿ ನಿಮಗೆ ಇಷ್ಟವೇ?' ಎಂಬ ಪ್ರಶ್ನೆಯೇ ಹಾಸ್ಯಾಸ್ಪದವಲ್ಲವೇ? ಕೇರಳದಲ್ಲಿ ವಾಜಪೇಯಿ ಜನಪ್ರಿಯತೆ ಶೇಕಡಾ 47 ಅಂತೆ. ಅಲ್ಲಿ ಬಿಜೆಪಿಗೆ ಶೇಕಡಾ 8 ಮತ ಹಿಂದಿನ ಚುನಾವಣೆಗಳಲ್ಲಿ. ಸಮೀಕ್ಷೆಯಲ್ಲೂ ಅದೇ ರೀತಿ ದೆಹಲಿಯಲ್ಲಿ ವಾಜಪೇಯಿ ರೇಟಿಂಗ್ ಶೇಕಡಾ 81! ಆದರೆ ಇತ್ತೀಚೆಗಷ್ಟೇ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ನೆಲಕಚ್ಚಿದೆ. ಇದು ಜನಮರುಳು ಪ್ರಯತ್ನವಲ್ಲದೆ ಇನ್ನೇನು? ಈ ಕಾರ್ಯಕ್ರಮದಲ್ಲಿ ಪ್ರಣಯ ರಾಯ್ ಮತ್ತು ಕಂಪನಿ ಪಶ್ಚಿಮ ಬಂಗಾಳ, ಕೇರಳಗಳಲ್ಲೂ ವಾಜಪೇಯಿ ಜನಪ್ರಿಯತೆಯಿಂದ ಎಡಪಕ್ಷಗಳಿಗೆ ಹಾನಿಯಾಗಲಿದೆ ಎಂದು ಬಿಂಬಿಸಲು ಭಾರೀ ತಿಪ್ಪರಲಾಗ ಹಾಕಿದರು.

ಇನ್ನೊಂದು ಸಮೀಕ್ಷೆ 'ಔಟ್‌ಲುಕ್'ನಲ್ಲಿ ಮಹಾರಾಷ್ಟ್ರದಲ್ಲಿ ಬಿಜೆಪಿ-ಶಿವಸೇನೆ ಸರ್ಕಾರ ಪುನಃ ಬರುತ್ತದೆ ಎಂದು ಹೇಳುವ ಸಮೀಕ್ಷೆಯದ್ದು. ಆ ಸಮೀಕ್ಷೆಯಲ್ಲಿ ಇನ್ನೊಂದು ಪ್ರಶ್ನೆಯಿದೆ. ನಿಮ್ಮ ಮುಖ್ಯಮಂತ್ರಿ ಆಯ್ಕೆ ಯಾರು? ಅಂತ ಅದರಲ್ಲಿ ಶರದ್‌ಪವಾರ್‌ಗೆ ಶೇಕಡಾ 31% ಅವರು ಮುಖ್ಯಮಂತ್ರಿ ಆಯ್ಕೆಯು ಮೊದಲಿಗರು. ಎರಡನೆಯ ಸ್ಥಾನದಲ್ಲಿರುವ ಗೋಪಿನಾಥ ಮುಂಡೆ ಕೇವಲ 15 ಶೇಕಡಾ. ಆದರೆ ಪವಾರರ ಕಾಂಗ್ರೆಸ್ಸಿಗೆ ಸಮೀಕ್ಷೆಯ ಪ್ರಕಾರ ಮತ ಶೇಕಡಾ 23.1. ಇದರ ಅರ್ಥವೇನು? ಜನ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವುದಿಲ್ಲ. ಕೆಲವು ವ್ಯಕ್ತಿಗಳನ್ನು ಮುಂದಿಟ್ಟು ಹುಚ್ಚು ಹುಚ್ಚು ಪ್ರಶ್ನೆ ಕೇಳಿ ಬಂದಿರುವ ಫಲಿತಾಂಶದ ವಿಶ್ಲೇಷಣೆ ಮನ ಬಂದಂತೆ ಮಾಡಿ ಜನರ ದಾರಿ ತಪ್ಪಿಸುವ ಪ್ರಯತ್ನವಲ್ಲವೇ? ಇದೇ ಸಮೀಕ್ಷೆಯ ಇನ್ನೊಂದು ಪ್ರಶ್ನೆ ಬಿಜೆಪಿ ಶಿವಸೇನೆ ಜತೆ ಒಕ್ಕೂಟ ರಚಿಸಿರುವುದು ನಿಮಗೆ ಇಷ್ಟವೇ? ಅಂತ, ಈ ಪ್ರಶ್ನೆಯಲ್ಲಿಯೂ ಈ ಕೂಟದಲ್ಲಿ ಬಿಜೆಪಿ ಒಳ್ಳೆ ಪಕ್ಷ, ಶಿವಸೇನೆಯಂತಹ ಪಕ್ಷದ ಜತೆ ಸೇರಿರುವುದರಿಂದ ಅವರ ಇಮೇಜ್ ಹಾಳಾಗಿದೆ ಎಂಬ ಧೋರಣೆ ಅಡವಾಗಿಲ್ಲವೇ?

ಇನ್ನು ಸ್ಟಾರ್‌ನ್ಯೂಸ್‌ನ 'ಚುನಾವಣಾ ಕಣ'ದಲ್ಲಿ ಸಮೀಕ್ಷೆಗೆ ಹಿಂತಿರುಗೋಣ. ಪಶ್ಚಿಮ ಬಂಗಾಳದ ಸಮೀಕ್ಷೆಯಲ್ಲಿ ಇನ್ನೊಂದು ಪ್ರಶ್ನೆ. ನಿಮ್ಮ ಆಯ್ಕೆ ಪ್ರಧಾನಮಂತ್ರಿಗೆ ವಾಜಪೇಯಿಯವರೇ, ಜ್ಯೋತಿಬಸುವೋ ಅಂತ. ವಾಜಪೇಯಿಗೆ ಶೇಕಡಾ 54 ಮತ, ಜ್ಯೋತಿಬಸುಗೆ ಶೇಕಡಾ 31 ಅಂತೆ. ಈ ಪ್ರಶ್ನೆಗೆ ಏನಾದರೂ ಅರ್ಥವಿದೆಯೇ? ಜ್ಯೋತಿಬಸು ಲೋಕಸಭೆ ಚುನಾವಣೆಗೆ ಸ್ಪರ್ಧಿಸಿಲ್ಲ. ಪ್ರಧಾನಮಂತ್ರಿಯನ್ನು ಜನರು ನೇರವಾಗಿ ಆಯ್ಕೆ ಮಾಡುವುದಿಲ್ಲ. ಪಶ್ಚಿಮ ಬಂಗಾಳದಲ್ಲಿ ಎಡರಂಗ ಗಳಿಸುವ ಮತ 47.52% ಬಿಜೆಪಿ ಗಳಿಸಿರುವ ಮತ ಶೇಕಡಾ 8.10. ಈ ಹಿನ್ನೆಲೆಯಲ್ಲಿ ಉತ್ತರಗಳ ವಿಶ್ಲೇಷಣೆಗೆ ಏನಾದರೂ ಅರ್ಥವಿದೆಯೇ?

ಕಿಡಿಗೇಡಿತನದ ಪ್ರಶ್ನೆಗಳು

ಈ ಎಲ್ಲಾ ಸಮೀಕ್ಷೆಗಳಲ್ಲಿ ಕಾರ್ಗಿಲ್, ಸೋನಿಯಾ ವಿದೇಶಿ ಮೂಲ ಬಿಟ್ಟರೆ ಸರ್ಕಾರದ ನಿಜವಾದ ಸಾಧನೆ, ವೈಫಲ್ಯಗಳ ಬಗ್ಗೆ ಪ್ರಶ್ನೆ ಇದ್ದಿದ್ದು ಅಪರೂಪ. ಬೆಲೆ ಏರಿಕೆ ಬಗ್ಗೆ ಅಲ್ಲೊಂದು, ಇಲ್ಲೊಂದು ಪ್ರಶ್ನೆ ಇರುತ್ತಿತ್ತು. ಅದರಲ್ಲೂ ಕಿಡಿಗೇಡಿತನದ ಪ್ರಶ್ನೆಗಳು. ಬೆಲೆ ಏರಿಕೆಗೆ, ಭ್ರಷ್ಟಾಚಾರಕ್ಕೆ ಕೇಂದ್ರ ಸರ್ಕಾರ ಕಾರಣವೇ? ರಾಜ್ಯ ಸರ್ಕಾರ ಕಾರಣವೇ? ಅಂತ. ಹೆಚ್ಚಿನ ಕಡೆ ರಾಜ್ಯ ಸರ್ಕಾರ ಕಾರಣ ಅಂತ ಉತ್ತರ. ಈಗ ಬಿಜೆಪಿ ಅತ್ಯಂತ ಕನಿಷ್ಠ ರಾಜ್ಯ ಸರ್ಕಾರಗಳಲ್ಲಿ ಇರುವುದರಿಂದ ಈ ಪ್ರಶ್ನೆಯೆ? ಕೆಲವು ತಿಂಗಳುಗಳ ಹಿಂದೆ ನಡೆದ ಐದು ವಿಧಾನಸಭೆ ಚುನಾವಣೆಗಳಲ್ಲಿ ಇದ್ದಬದ್ದದ್ದನ್ನು ಕಳೆದುಕೊಂಡು ಬಿಜೆಪಿಯ ವೈಫಲ್ಯವನ್ನು ಸಾಧನೆಯಾಗಿ ತೋರಿಸುವ ಪ್ರಯತ್ನವಲ್ಲವೇ?

ಇನ್ನೊಂದು ಪ್ರಶ್ನೆ ಈ ಸಮೀಕ್ಷೆಗಳ ಬಗ್ಗೆ ಮೂಡುವುದು- ಒಂದು ಸಮೀಕ್ಷೆಗಳು ಇನ್ನೊಂದು ಸಮೀಕ್ಷೆಗೂ ಇರುವ ಅಗಾಧ ವ್ಯತ್ಯಾಸ. ಒಂದು ಸಮೀಕ್ಷೆ ಬಿಜೆಪಿ ಕೂಟಕ್ಕೆ 350 ಸೀಟು ಕೊಟ್ಟಿದೆ. ಇನ್ನೊಂದು ಸಮೀಕ್ಷೆ 250 ಸೀಟು ಕೊಡುತ್ತದೆ. ಯಾವ ಸಮೀಕ್ಷೆಯನ್ನು ನಂಬೋಣ. ಎರಡೂ ವೈಜ್ಞಾನಿಕವಾದರೆ ಇದು ಹೇಗೆ ಸಾಧ್ಯ? ಇದರರ್ಥ ಎರಡೂ ಬೋಗಸ್ ಅಂತಲ್ಲವೇ?

ಅಂದರೆ ಭಾರತದಂತಹ ದೊಡ್ಡ ದೇಶದ ಸಮೀಕ್ಷೆಯ ವೈಜ್ಞಾನಿಕ ರೀತಿ, ಕ್ರಮದ ಬಗ್ಗೆ ಸಂದೇಹ ಒಂದು ಕಡೆಯಾದರೆ, ಸಮೀಕ್ಷಕರ ಪ್ರಾಮಾಣಿಕತೆಯ ಮೇಲೆಯೇ ಸಂದೇಹ ಇನ್ನೊಂದು ಕಡೆ. ಮೇಲೆ ಹೇಳಿದಂತ ಪ್ರಶ್ನೆಗಳು ಸಮೀಕ್ಷೆಯನ್ನು ಪೂರ್ಣ ಸಂದೇಹಾಸ್ಪದ ಮಾಡುತ್ತವೆ. ಹೇಗೋ ಮಾಡಿ ತಮಗೆ ಬೇಕಾದ ಉತ್ತರ ಒದಗಿಸುವ ಪ್ರಶ್ನೆಗಳನ್ನು ತಮಗೆ ಬೇಕಾದವರ ಹತ್ತಿರ ಕೇಳಿ ಅದನ್ನು ತಮಗೆ ಬೇಕಾದ ಹಾಗೆ ವಿಶ್ಲೇಷಣೆ ಮಾಡುವ ಆಟದಲ್ಲಿ ಇವರು ತೊಡಗಿದ್ದಾರೆ.

'ಅನಾಗರಿಕ ಪಕ್ಷ'ದ ಮುಖಂಡರ ಅನಾಗರಿಕ ಉದ್ಗಾರಗಳು

ಸುಮಾರು ಒಂದು ವರ್ಷದ ಹಿಂದೆ ಜ್ಯೋತಿಬಸುರವರು ಬಿಜೆಪಿಯನ್ನು ಅನಾಗರಿಕ ಪಕ್ಷ ಎಂದಿದ್ದರು-ಚುನಾವಣಾ ಪ್ರಚಾರದ ಸಮಯದಲ್ಲಲ್ಲ-ಆ ಪಕ್ಷದ ಆಳ್ವಿಕೆಯಲ್ಲಿ ಅನಾಗರಿಕ ಬೆಳವಣಿಗೆಗಳು ಎಲ್ಲರ ಕಣ್ಮುಂದೆ ನಲಿಯಲಾರಂಭಿಸುವ ಮುನ್ನ. ಇದನ್ನು ಕೇಳಿ ಪ್ರಧಾನ ಮಂತ್ರಿ ವಾಜಪೇಯಿಯವರಿಗೆ ಬೇಸರವಾಗಿತ್ತಂತೆ. ಹಾಗೆ ಏಕೆ ಹೇಳಿದಿರಿ ಎಂದು ಜ್ಯೋತಿಬಸುರವರನ್ನು ಕೇಳಿಯೂ ಕೇಳಿದರಂತೆ. ಬಹುಶಃ ಈ ಬಾರಿಯ ಚುನಾವಣಾ ಪ್ರಚಾರದಲ್ಲಿ ಅವರ ನೆಚ್ಚಿನ ಸಹಯೋಗಿಗಳಿಬ್ಬರ ವರ್ತನೆಯನ್ನು ನೋಡಿದ ಮೇಲಂತೂ ಹೀಗೆ ಕೇಳುವುದಕ್ಕೂ ಅವರಿಗೆ ಮುಜುಗರವಾಗಬೇಕು.

ಒಂದು ರೀತಿಯಲ್ಲಿ ಇದು ಈ ಕೂಟದ ಆಳ್ವಿಕೆಯಲ್ಲಿ ಕಳೆದ ಒಂದು ವರ್ಷದಲ್ಲಿ ದೇಶ ಕಂಡ ದುರಂತಗಳ - ಗುಜರಾತ್‌ನಲ್ಲಿ ಬಡ ಬುಡಕಟ್ಟು ಕ್ರೈಸ್ತರ ಮನೆ, ಗುಡಿಸಲುಗಳ, ಚರ್ಚುಗಳ ಮೇಲೆ ಧಾಳಿ, ಅವರ ಮಹಿಳೆಯರ ಮೇಲೆ ಅತ್ಯಾಚಾರ, ಸ್ಟೈನ್ಸ್ ಹತ್ಯೆ, ಇತ್ತೀಚೆಗೆ ಅದೇ ದಾರಾಸಿಂಗ್‌ನಿಂದ ಒಬ್ಬ ಮುಸ್ಲಿಂ ವ್ಯಾಪಾರಿ ಹಾಗೂ ಮೊನ್ನೆ-ಮೊನ್ನೆ ಇನ್ನೊಬ್ಬ ಪಾದ್ರಿಯ ಕೊಲೆ, ಈ ಕೊಲೆಗೆ ಕಾರಣನೆನಿಸಿದ ದಾರಾಸಿಂಗ್‌ನನ್ನು ಹಿಡಿದುಕೊಡಲು ಒರಿಸ್ಸಾ ಸರಕಾರಕ್ಕೆ ನೆರವು ನೀಡುವ ಬದಲು ದಾರಾಸಿಂಗ್ ಭಜರಂಗದಳಕ್ಕೆ ಸೇರಿದವನೆಂದು ಹೇಳಲು ಏನೂ ಪುರಾವೆಯಿಲ್ಲ ಎಂಬ ವಾಧ್ವಾ ಆಯೋಗದ ಅಭಿಪ್ರಾಯಕ್ಕೆ ಸಂತಸ ವ್ಯಕ್ತಪಡಿಸುವುದೇ ಮುಖ್ಯವಾಗಿರುವ ಕೇಂದ್ರ ಗೃಹಮಂತ್ರಿಗಳು. ಈ ಮಾಲಿಕೆಯಲ್ಲಿಯೇ ಇಲ್ಲವೇ ಸೋನಿಯಾ ಕುರಿತಂತೆ ಕೇಂದ್ರ ಸುದ್ದಿ ಮಂತ್ರಿ ಪ್ರಮೋದ್ ಮಹಾಜನ್ ರವರ ಹಾಗೂ ಕೇಂದ್ರ ರಕ್ಷಣಾ ಮಂತ್ರಿ ಫರ್ನಾಂಡೀಸ್‌ರ ಅಸಭ್ಯ ಮಾತುಗಳು?

ಪ್ರಮೋದ್ ಮಹಾಜನ್ ತಾನು ಹೊರಹಾಕಿದ ಹೊಲಸನ್ನು ಹೇಳಿಯೇ ಇಲ್ಲ ಎಂದು ಸಾಧಿಸುವ ಭರದಲ್ಲಿ ಹಾಗೆ ಹೇಳಿದ್ದನ್ನು ತಾನೇ ಸಾಬೀತುಪಡಿಸಿದ್ದಾರೆ. ಇಲ್ಲವಾದರೆ ಚುನಾವಣಾ ಸಭೆಯೊಂದರಲ್ಲಿ ಸೋನಿಯಾ ಗಾಂಧಿಯವರ ಹೆಸರಿನ ಜೊತೆಯಲ್ಲಿ ಮೋನಿಕಾ ಲೆವಿನ್ಸ್‌ಕಿಯ ಹೆಸರೂ ಬರುವ ಅಗತ್ಯವಾದರೂ ಏನಿತ್ತು? ಪೋಖ್ರಾನ್ ಸ್ಫೋಟ ಮಾಡಿದಾಗ ದೇಶಕ್ಕೆ ತಿಳಿಸದೆಯೇ ಅಮೆರಿಕಾದ ಅಧ್ಯಕ್ಷನಿಗೆ ಸಮಜಾಯಿಷಿ ಕೊಡುವ ಹೇಡಿತನ ತೋರಿದ ಸರಕಾರದ ಮಂತ್ರಿಯ ಬಾಯಿಂದ ಈ ಮಾತಂತೂ ಶುದ್ಧ ಅಸಂಬದ್ಧ. ಏಕೆಂದರೆ ಪ್ರಧಾನಿ ಯಾರಿಗೆ ಜವಾಬ್ದಾರರಾಗಿದ್ದಾರೆ-'ಸ್ವದೇಶಿ' ಭಾರತೀಯರಿಗೋ ಅಥವಾ ವಿದೇಶಿ ಕ್ಲಿಂಟನ್‌ಗೋ ಎಂಬ ಸಂದೇಹ ಎಲ್ಲರಿಗೂ ಕಾಡುತ್ತಿತ್ತು. ಬಹುಶಃ ಕ್ಲಿಂಟನ್ ಜೊತೆ ಸತತ ಜೀಹುಜೂರಿಕೆಯಿಂದಾಗಿ ಲೆವೆನ್‌ಸ್ಕಿಯ ಹೆಸರು ತಂತಾನೇ ಹೊರಬಿದ್ದಿರಬೇಕು.

ಫರ್ನಾಂಡೀಸ್‌ರವರು ಮಾತ್ರ ತಾನು ಹೇಳಿದ್ದನ್ನು ಹೇಳಿಲ್ಲ ಎಂದು ಹೇಳಿಲ್ಲ, ಮತ್ತೆ ಮತ್ತೆ ಹೇಳುವುದಾಗಿ ಹೇಳಿದ್ದಾರೆ - ತಮ್ಮ ನೆಚ್ಚಿನ ಪ್ರಧಾನಿಗಳ ತಾಕೀತನ್ನು ಉಲ್ಲಂಘಿಸಿ, ಮುಖ್ಯ ಚುನಾವಣಾ ಆಯುಕ್ತರ ಛೀಮಾರಿಯನ್ನು ಬದಿಗೊತ್ತಿ.



ಬಿ.ಜೆ.ಪಿ.ಯ ಹದಿಮೂರು ಸುಳ್ಳುಗಳು

ಸುಳ್ಳು 1 ಬಿಜೆಪಿ ಸರಕಾರವನ್ನು ಉರುಳಿಸಲು ವಿರೋಧ ಪಕ್ಷಗಳು ಒಟ್ಟು ಸೇರಿ ಪಿತೂರಿ ನಡೆಸಿದರಂತೆ!

ವಾಜಪೇಯಿ ಸರಕಾರ ಬಿದ್ದದ್ದು ಹಲವು ತಿಂಗಳಿಂದ ಬುಸುಗುಡುತ್ತಿದ್ದ ಅದರ ಮಿತ್ರ ಪಕ್ಷ ಎಐಡಿಎಂಕೆ ಕೊನೆಗೂ ತನ್ನ ಬೆಂಬಲ ಹಿಂತೆಗೆದುಕೊಂಡಿರುವುದಾಗಿ ರಾಷ್ಟ್ರಪತಿಗಳಿಗೆ ಲಿಖಿತ ಮೂಲಕ ತಿಳಿಸಿದ ನಂತರ. ರಾಷ್ಟ್ರಪತಿಗಳು ಹಿಂದೆ ದೇವೇಗೌಡರು, ಐ.ಕೆ.ಗುಜ್ರಾಲ್‌ರವರಿಗೆ ಹೇಳಿದಂತೆ ವಾಜಪೇಯಿಯವರಿಗೂ ವಿಶ್ವಾಸಮತ ಕೇಳಲು ಹೇಳಿದರು. ವಿಶ್ವಾಸಮತದಲ್ಲಿ ಸರಕಾರ ಸೋತು ಹೋಯಿತು - ಇದು ಎಲ್ಲರಿಗೂ ತಿಳಿದಿರುವ ಸತ್ಯ.

ವಾಜಪೇಯಿಯವರು ವಿಶ್ವಾಸಮತ ಕೇಳಿದ್ದರು. ವಿರೋಧ ಪಕ್ಷಗಳು ಅದನ್ನು ವಿರೋಧಿಸಿದ್ದು ತಪ್ಪೇ? ಸಂಸದೀಯ ಪ್ರಜಾಪ್ರಭುತ್ವದಲ್ಲಿ ಸರಕಾರವನ್ನು ಉಳಿಸಿಕೊಳ್ಳುವ ಜವಾಬ್ದಾರಿ ಆಳುವ ಪಕ್ಷದ್ದೇ, ವಿರೋಧ ಪಕ್ಷದ್ದೇ?

● ಬಿಜೆಪಿ ವಿರೋಧ ಪಕ್ಷದಲ್ಲಿದ್ದಾಗ ಏನು ಮಾಡಿತ್ತು ನೆನಪಿದೆಯೇ? 1977 ರಿಂದ ಪ್ರತಿಯೊಂದು ಕಾಂಗ್ರೆಸ್ಸೇತರ ಸರಕಾರ ಪತನಕ್ಕೆ ಬಿಜೆಪಿಯೇ ಹೊಣೆ ಎಂಬುದನ್ನು ವಾಜಪೇಯಿ ಮರೆತಿದ್ದಾರೆಯೇ?

● 1979 ರಲ್ಲಿ ಮೊರಾರ್ಜಿ ದೇಸಾಯಿ ನೇತೃತ್ವದ ಮೊದಲ ಕಾಂಗ್ರೆಸ್ಸೇತರ ಕೇಂದ್ರ ಸರ್ಕಾರದ ಪತನವಾದದ್ದು ಜನತಾ ಪಕ್ಷದೊಳಗಿದ್ದ ಈಗಿನ ಬಿಜೆಪಿ ಸದಸ್ಯರ 'ದ್ವಿಸದಸ್ಯತ್ವ'ದ ಪ್ರಶ್ನೆಯಲ್ಲಿ.

● 1989 ರಲ್ಲಿ ವಿ.ಪಿ.ಸಿಂಗ್ ಸರಕಾರ ಬಿದ್ದದ್ದು ಅಡ್ವಾಣಿಯವರ ಕುಖ್ಯಾತ ರಥಯಾತ್ರೆಯ ಪ್ರಶ್ನೆಯ ಮೇಲೆ. ಆ ಪತನದಲ್ಲಿ ಬಿಜೆಪಿ ಕಾಂಗ್ರೆಸ್ಸಿನೊಂದಿಗೆ ಕೈಮಿಲಾಯಿಸಿತ್ತು

● 1996-98 ರಲ್ಲಿ ದೇವೇಗೌಡರ ಮತ್ತು ಗುಜ್ರಾಲ್ ಸರಕಾರಗಳ ಪತನವಾದದ್ದು ಬಲವಾದ ಕಾರಣವಿಲ್ಲದೆ ಕಾಂಗ್ರೆಸ್ ತನ್ನ ಬೆಂಬಲ ಹಿಂತೆಗೆದುಕೊಂಡಾಗ. ಬಿಜೆಪಿ ನೀತಿಬಾಹಿರವಾಗಿ ಕೈಮಿಲಾಯಿಸಿತು.

ತನ್ನ ಮಿತ್ರಕೂಟವನ್ನು ಸಂಭಾಳಿಸಲಾಗದ ಅಸಮರ್ಥತೆ ಯಿಂದಾಗಿ ಬಿಜೆಪಿ ದೇಶವನ್ನು ಅಸ್ಥಿರತೆಯ ಕೂಪಕ್ಕೆ ತಳ್ಳಿದ್ದು ಎಂಬುದೇ ಕಟುವಾಸ್ತವ.

ಸುಳ್ಳು 2 ವಾಜಪೇಯಿ ಸರಕಾರಕ್ಕೆ ಜನಾದೇಶವಿತ್ತು ಅಧಿಕಾರ ದಾಹದಿಂದಾಗಿ ವಿರೋಧಿ ಪಕ್ಷಗಳು ಅದನ್ನು ತಡೆದವು!

1998 ರ ಚುನಾವಣೆಗಳಲ್ಲಿ ಬಿಜೆಪಿಗೆ ದೊರೆತ ಮತ 25.59% ಮಿತ್ರ ಪಕ್ಷಗಳೆಲ್ಲದರ ಮತಗಳನ್ನು ಸೇರಿಸಿದರೂ 37%. ಅಂದರೆ 63% ಜನ ಅವರ ವಿರುದ್ಧ ಮತ ಹಾಕಿದರು. ಸೀಟುಗಳ ಲೆಕ್ಕದಲ್ಲೂ ಸ್ಪಷ್ಟ ಜನಾದೇಶಕ್ಕೆ ಬೇಕಾದ ಸ್ಥಾನಗಳಾದ 90 ಸ್ಥಾನಗಳು ಕಮ್ಮಿಯಿತ್ತು. ತಾನು 'ಜನಾದೇಶ' ಪಡೆದ ಚುನಾವಣಾ ಪ್ರಣಾಳಿಕೆಯನ್ನು ಬದಿಗಿಟ್ಟು, ಟಿಡಿಪಿಗೆ ಸ್ಪೀಕರ್ ಆಮಿಷ ತೋರಿಸಿ, ತನ್ನ ವಿರುದ್ಧ ಸ್ಪರ್ಧಿಸಿದ್ದವರನ್ನು ಸೇರಿಸಿಕೊಂಡು, 11ನೇ ಲೋಕಸಭೆಯಲ್ಲಿ ಮಹಾ ಭ್ರಷ್ಟ ಎಂದು ತಾವೇ ಬಲವಾಗಿ ತರಾಟೆಗೆ ತಗೊಂಡಿದ್ದ ಸುಖ್‌ರಾಂನ್ನು ತಬ್ಬಿಕೊಂಡು ಹೇಗೋ ಸರಕಾರ ರಚಿಸಿ ಅಧಿಕಾರದಾಹದ ನಗ್ನ ಪ್ರದರ್ಶನ ನಡೆಸಿದವರು ಯಾರು?

ಸುಳ್ಳು 3 ಪರ್ಯಾಯ ಸರಕಾರದ ಯೋಜನೆಯಿಲ್ಲದೆ ಬಿಜೆಪಿ ಸರಕಾರವನ್ನು ಉರುಳಿಸಲಾಯಿತಂತೆ!.

1979, 1989 ಹಾಗೂ 1998 ರಲ್ಲಿ ಬಿಜೆಪಿ ಕಾಂಗ್ರೆಸ್ಸೇತರ ಸರಕಾರಗಳನ್ನು ಉರುಳಿಸುವಲ್ಲಿ ಪಾಲುಗೊಂಡಾಗ ಅವರ ಬಳಿ ಪರ್ಯಾಯ ಸರಕಾರದ ಯೋಜನೆಯಿತ್ತೆ? ಸರಕಾರ ಬೀಳದೆ ಪರ್ಯಾಯ ಸರಕಾರದ ಪ್ರಶ್ನೆ ಎಲ್ಲಿ ಬರುತ್ತದೆ? ಬಹಳ ಕಮ್ಮಿ ಬಹುಮತದಿಂದ ಆಡಳಿತ ಮಾಡಿದ್ದ ಸರಕಾರ ಬಹಳ ಸಣ್ಣ ಅಂತರದಲ್ಲಿ ಸೋತ ಹಿನ್ನೆಲೆಯಲ್ಲಿ ವಿರೋಧ ಪಕ್ಷಗಳು ಸರಕಾರ ರಚಿಸಲಾಗಿಲ್ಲ, ಆದ್ದರಿಂದ ತಮ್ಮ ವಿರುದ್ಧ ಮತಹಾಕಿದ್ದಾರೆ ಎಂದು ಬೊಬ್ಬೆ ಹೊಡೆಯುವುದರಲ್ಲಿ ಏನು ಅರ್ಥವಿದೆ?

ಇಲ್ಲಿ ಗಮನಿಸಬೇಕಾದ ಇನ್ನೊಂದು ಮುಖ್ಯ ಸಂಗತಿಯೆಂದರೆ ಒಂದು ಪರ್ಯಾಯ ಸರಕಾರ ರಚನೆಯಾಗದಂತೆ ತಡೆಯುವ ಪ್ರಬಲ ಶಕ್ತಿಗಳು ಕಾರ್ಯೋನ್ಮುಖವಾಗಿದ್ದವು. ಆ ಶಕ್ತಿಗಳೆಂದರೆ ಸಾಮ್ರಾಜ್ಯಶಾಹಿ ಮತ್ತು ದೇಶಿ ದೊಡ್ಡ ಬಂಡವಾಳಿಗರು. ತಮ್ಮ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ವಾಜಪೇಯಿ ಸರಕಾರವೇ ಪರಿಣಾಮಕಾರಿ ಸಾಧನ ಎಂದು ಕಂಡುಕೊಂಡಿದ್ದ ಇವರಿಬ್ಬರು ಹೊರಗಿನಿಂದ ಎಡಪಕ್ಷಗಳ ಬೆಂಬಲವಿರುವ ಮೂರನೇ ಪರ್ಯಾಯ ಮೂಡದಂತೆ ನೋಡಿಕೊಂಡರು. ಬಿಜೆಪಿ ಮತ್ತೆ-ಮತ್ತೆ ಈ ಬಗ್ಗೆ ಹೇಳುತ್ತಿರುವುದರ ಹಿಂದಿರುವ ವಾಸ್ತವಾಂಶವಿದು.

ಸುಳ್ಳು 4 ಪರ್ಯಾಯವಿಲ್ಲದಿದ್ದರೆ ಬಿಜೆಪಿ ಸರಕಾರವನ್ನು ಮುಂದುವರೆಯಲು ಬಿಡುವುದು ಒಳ್ಳೆಯದಿತ್ತು!

ಇದನ್ನು ತಮ್ಮ ಅಸಮರ್ಥತೆಯಿಂದ ಅಧಿಕಾರ ಕಳಕೊಂಡವರು ಮಾತ್ರವೇ ಹೇಳಲು ಸಾಧ್ಯ. ಈ ಹಿಂದಿನ 13 ತಿಂಗಳಲ್ಲಿ ತಾನೊಂದು ನೈತಿಕತೆಯಿಲ್ಲದ, ಸಂಕುಚಿತ ಹಣ ಲಾಭಕ್ಕಾಗಿ, ರಾಜಕೀಯ ಮುನ್ನಡೆಗಾಗಿ ದೇಶದ ಹಿತಾಸಕ್ತಿಗಳನ್ನು ಮಾರಲೂ ಹೇಸದ ಪಕ್ಷ ಎಂಬುದನ್ನು ತೋರಿಸಿ ಕೊಂಡ ಹಿನ್ನೆಲೆಯಲ್ಲಿ ಈ ಸರಕಾರ ಬಿದ್ದಾಗ ಜನ ಪೀಡೆ ತೊಲಗಿತು ಎಂದು ನಿಟ್ಟುಸಿರು ಬಿಡುವಂತಾಯಿತು.

ಸುಳ್ಳು 5 13ನೇ ಲೋಕಸಭೆಯಲ್ಲಿ ಬಿಜೆಪಿ ನೇತೃತ್ವದಲ್ಲಿ ಎನ್‌ಡಿಎ ಮಾತ್ರವೇ ಒಂದು ಸ್ಥಿರ ಸರ್ಕಾರ ನೀಡಬಲ್ಲದು!

ಇದು ಇನ್ನೊಂದು ತಂತ್ರ. ಬಿಜೆಪಿ ಈ ಚುನಾವಣೆ ಮೊದಲು ಎನ್‌ಡಿಎ ರಚನೆಯಾಗಿದೆಯೆಂದು ಪ್ರಕಟಿಸಿತು. ತನ್ನ ಪ್ರತ್ಯೇಕ ಪ್ರಣಾಳಿಕೆಯಿಲ್ಲ ಎಂದಿತು. ಆದರೆ ತೆಲುಗುದೇಶಂ, ತೃಣಮೂಲ ಕಾಂಗ್ರೆಸ್, ನ್ಯಾಶನಲ್ ಕಾನ್ಫರೆನ್ಸ್ ಈ 'ಮೈತ್ರಿಕೂಟ'ವನ್ನು ಸೇರಲು ನಿರಾಕರಿಸಿರುವಾಗ 'ಸ್ಥಿರತೆ'ಯ ಮಾತು ಹೇಗೆ ಸಾಧ್ಯ? ಕಳೆದ 13 ತಿಂಗಳ ಅನುಭವವೇ ಸಾಲದೇ?

ಬಿಜೆಪಿಗೆ ಇಂತಹ ತಂತ್ರ ಹೊಸದೇನಲ್ಲ. 1948 ರಲ್ಲಿ ಗಾಂಧೀಜಿ ಹತ್ಯೆಯ ಹಿನ್ನೆಲೆಯಲ್ಲಿ ಆರ್.ಎಸ್.ಎಸ್. ಮೇಲಿನ ನಿಷೇಧ ತೆಗೆಸಲು ತಾನೊಂದು 'ಸಾಂಸ್ಕೃತಿಕ ಸಂಘಟನೆ' ಮಾತ್ರ ಎಂದು ಮುಚ್ಚಳಿಕೆ ನೀಡಿತು. ಆದರೆ ಶೀಘ್ರವೇ ತನ್ನ ರಾಜಕೀಯ ಚಟುವಟಿಕೆಗಳಿಗೆ 'ಜನಸಂಘ' ರಚಿಸಿತು. ನಂತರ ಹೇಗಾದರೂ ರಾಜಕೀಯದಲ್ಲಿ ಮುನ್ನಡೆ ಸಾಧಿಸಲು ಜನಸಂಘವನ್ನು ವಿಸರ್ಜಿಸಿ ಜನತಾಪಾರ್ಟಿಯಲ್ಲಿ ಸೇರಿಕೊಂಡು ಮೊತ್ತ ಮೊದಲ ಬಾರಿಗೆ ಅಧಿಕಾರದ ಸ್ಥಾನಗಳ ರುಚಿಕಂಡಿತು. ನಂತರ ಆರ್.ಎಸ್.ಎಸ್. ಸದಸ್ಯತ್ವದ ಪ್ರಶ್ನೆಯಲ್ಲಿ ಜನತಾಪಾರ್ಟಿಯನ್ನು ಅಸ್ತವ್ಯಸ್ತಗೊಳಿಸಿ ಹೊಸ ಮುಖವಾಡ ಧರಿಸಿತು - ಬಿಜೆಪಿ ಯ ಹೆಸರಿನಲ್ಲಿ. ಬಿಜೆಪಿ ಮೊದಲು 'ಎಡ'ಮುಖವಾಡ ಹಾಕಿಕೊಂಡು ಗಾಂಧೀ ಸಮಾಜವಾದ ತನ್ನ ಸಿದ್ಧಾಂತ ಎಂದಿತು. ಅದರಿಂದ ಜನಬೆಂಬಲ ಸಿಗದಾದಾಗ ಅದನ್ನು ಕೈ ಬಿಟ್ಟು ನೇರವಾಗಿ ಕೋಮುವಾದಿ ಅಜೆಂಡಾವನ್ನೇ ಕೈಗೆತ್ತಿಕೊಂಡಿತು. ಅಯೋಧ್ಯಾಯಾತ್ರೆಯ ಮೊದಲು ಹಲವು ಯಾತ್ರೆಗಳು, ಪೂಜೆಗಳು, ಇದರಿಂದ ವಿ.ಪಿ.ಸಿಂಗ್ ಸರಕಾರವನ್ನು ಉರುಳಿಸಿದ್ದು, ನಂತರ ಬಾಬ್ರಿ ಮಸೀದಿ ಧ್ವಂಸ ಇದರದ್ದೇ ದುಷ್ಫಲಗಳು - ಸಾವಿರಾರು ಮುಗ್ಧರನ್ನು ಬಲಿತೆಗೆದುಕೊಂಡ ಕೋಮುವಾದಿ ಅಜೆಂಡಾವನ್ನು ಈಗ ಕೈಬಿಟ್ಟಿರುವುದಾಗಿ ಎನ್‌ಡಿಎ ಅಜೆಂಡಾವೇ ತನ್ನ ಅಜೆಂಡಾ ಎಂದು ಹೇಳುತ್ತಿದೆ. ಆದರೆ ಇದು ಬಿಜೆಪಿಯ ಇನ್ನೊಂದು ಆಟ ಎಂಬುದು ಸ್ಪಷ್ಟ.

ಸುಳ್ಳು 6 ನೀತಿಬದ್ಧ ರಾಜಕಾರಣದ ಆಧಾರದಲ್ಲಿ ಒಂದು ಯಶಸ್ವಿ ಸಮಿಶ್ರ ಸರಕಾರ ಬಿಜೆಪಿಯಿಂದ ಮಾತ್ರವೇ ಸಾಧ್ಯವಂತೆ!

13 ತಿಂಗಳ ಅನುಭವವೇನು? ಪರಸ್ಪರರನ್ನು ದೂಷಿಸುತ್ತಿದ್ದ ಮಂಡಲ, ಕಮಂಡಲಗಳು ಈಗ ಒಂದಾಗಿರುವುದು, ಕಮಂಡಲದ ತೊಡೆಯಲ್ಲಿ ಮಂಡಲ ಕೂತಿರುವುದು, ಈ ಹಿಂದೆ ಆರ್‌ಎಸ್‌ಎಸ್ ಪತ್ರಿಕೆಯಿಂದ ರಾವಣರ ಶಿಷ್ಯರೆಂದು ಕರೆಸಿಕೊಂಡವರೊಡನೆ ರಾಮನ ಉತ್ತರಾಧಿಕಾರಿಗಳೆನಿಸಿಕೊಂಡವರು ಪರಸ್ಪರ ತಬ್ಬಿಕೊಂಡಿರುವುದು - ಬಿಜೆಪಿಯ ನೀತಿಬಾಹಿರ, ಸಮಯಸಾಧಕತನ ಇಷ್ಟಕ್ಕೇ ನಿಂತಿಲ್ಲ. ಆಂಧ್ರಪ್ರದೇಶ, ತಮಿಳುನಾಡು, ಹರ್‍ಯಾಣಗಳಲ್ಲಿ ಕಳೆದ ಬಾರಿ ತಾವು ಬಲವಾಗಿ ವಿರೋಧಿಸಿದವರೇ ಈ ಬಾರಿ ಅದರ ಮಿತ್ರರು! ಎಲ್ಲ ರಾಜ್ಯಗಳಲ್ಲಿ ಕಳೆದ ಬಾರಿ ತನ್ನೊಂದಿಗಿದ್ದವರನ್ನು ಕೈ ಬಿಟ್ಟಿದ್ದಾರೆ. ಕರ್ನಾಟಕದಲ್ಲೂ ಕಳೆದ ಐದು ವರ್ಷಗಳಿಂದ ಯಾರನ್ನು ಸತತವಾಗಿ ದೂಷಿಸಿಕೊಂಡು ಬಂದಿದ್ದರೋ ಅವರೊಡನೆಯೇ ಕೈಜೋಡಿಸಿದ್ದಾರೆ. ಇಂತಹ ನೀತಿ ಬಾಹಿರ ಸಮಯಸಾಧಕ ಕೂಟ ಎಂತಹ ಸ್ಥಿರ ಸಮಿಶ್ರ ಸರಕಾರ ನೀಡಬಲ್ಲದು? ಕಳೆದ ಬಾರಿ ತಮ್ಮ ಮಿತ್ರರನ್ನು ಜತೆಗಿಟ್ಟುಕೊಳ್ಳಲಾರದೆ ಪತನಗೊಂಡವರು ಈ ಬಾರಿ ಮತ್ತೆ ಅಧಿಕಾರಕ್ಕೆ ಬಂದರೆ ಅಸ್ಥಿರತೆಯ ಸಾಧ್ಯತೆ ಕಳೆದ ಬಾರಿಗಿಂತ ಕನಿಷ್ಟ ಐದು ಪಟ್ಟು ಹೆಚ್ಚಾಗುತ್ತದೆ.

ಸುಳ್ಳು 7 ಪೋಖ್ರಾನ್-2 ವಿಶ್ವದಲ್ಲಿ ಭಾರತದ ಘನತೆ ಹೆಚ್ಚಿಸಿ ದೇಶದ ಭದ್ರತೆಯನ್ನು ಬಲಪಡಿಸಿತಂತೆ!

ಇದೊಂದು ಮಹಾಸುಳ್ಳು. ಭಾರತ ಇದುವರೆಗೆ ಪರಮಾಣು ಬಾಂಬ್ ತಯಾರಿಸುವ ಸಾಮರ್ಥ್ಯ ಹೊಂದಿದ್ದು ಅದನ್ನು ತಯಾರಿಸದೆ ಅಂತರ್ರಾಷ್ಟ್ರೀಯ ರಂಗದಲ್ಲಿ ಪರಮಾಣು ಶಸ್ತ್ರಾಸ್ತ್ರಗಳನ್ನು ನಿರ್ಮೂಲಮಾಡುವ ಪ್ರಯತ್ನದಲ್ಲಿ ಅಪಾರ ನೈತಿಕ ಅಧಿಕಾರ ಹೊಂದಿತ್ತು. ಅದೀಗ ವಾಜಪೇಯಿ ಸರಕಾರದಿಂದಾಗಿ ನಾಶವಾಗಿದೆ. ಈಗ ಪೋಖ್ರಾನ್ ನಂತರ ತನ್ನ ಚಗ್ಯಾ ಪರೀಕ್ಷಣೆಗಳ ಮೂಲಕ ಅಂತರ್ರಾಷ್ಟ್ರೀಯ ರಂಗದಲ್ಲಿ ಪಾಕಿಸ್ತಾನ ಭಾರತದ ಸಮವಮಟ್ಟಕ್ಕೆ ಬರುವಂತಾಯಿತು. ಪಾರಂಪರಿಕ ಶಸ್ತ್ರಾಸ್ತ್ರಗಳಲ್ಲಿ ಭಾರತದ ಪ್ರಾಬಲ್ಯವನ್ನು ಅಳಿಸಿ ಹಾಕಿದ್ದೇ ವಾಜಪೇಯಿ ಸರಕಾರದ ಸಾಧನೆ. ಜತೆಗೆ ಚೀಣಾದೊಂದಿಗೆ ಸುಧಾರಿಸುತ್ತಿದ್ದ ಸಂಬಂಧಗಳಿಗೂ ಸಂಚಕಾರ ತಂದಿತು. ಉಸ್ತುವಾರಿ ಸರಕಾರ ಪ್ರಕಟಿಸಿದ ಪರಮಾಣು ಸಿದ್ಧಾಂತವಂತೂ ಈ ಉಪಖಂಡದಲ್ಲಿ ಪರಮಾಣು ಶಸ್ತ್ರಾಸ್ತ್ರ ಸ್ಪರ್ಧೆ ನಡೆಯುವ ಅಪಾಯವನ್ನು ಸೃಷ್ಟಿಸಿದೆ. ಇಷ್ಟೇ ಅಲ್ಲ, ಪೋಖ್ರಾನ್ ಸ್ಫೋಟದ ನಂತರ ಭಾರತವನ್ನು ಅಮೆರಿಕನ್ ಸಾಮ್ರಾಜ್ಯಶಾಹಿಯ ಅಡಿಯಾಳಾಗಿಸಿದೆ. ಭಾರತ ಇದುವರೆಗೆ ನಿರಾಕರಿಸಿಕೊಂಡು ಬಂದಿದ್ದ ಸಿ.ಟಿ.ಬಿ.ಟಿ. ಗೆ ಸಹಿ ಹಾಕಲು ಒಪ್ಪಿಕೊಂಡು ಭಾರತದ ಸ್ಥಾನಮಾನವನ್ನು ಕೆಳಗಿಳಿಸಿದೆ. ಭಾರತದ ಭದ್ರತೆ ಇವೆಲ್ಲದರಿಂದ ಬಲಗೊಳ್ಳಲಿಲ್ಲ, ಬದಲಾಗಿ ಅಪಾಯಕ್ಕೀಡಾಗುತ್ತಿದೆ ಎಂಬುದನ್ನು ಕಾರ್ಗಿಲ್ ಕದನ ಸ್ಪಷ್ಟವಾಗಿ ಬಯಲಿಗೆಳೆದಿದೆ.

ಸುಳ್ಳು 8 ಬಿಜೆಪಿ ಸರಕಾರ ಭಾರತದ ಭದ್ರತೆಗೆ ಮೊದಲ ಆದ್ಯತೆ ನೀಡಿತಂತೆ!

ಕಾರ್ಗಿಲ್ ಕದನ ಹೇಳುವ ಕಥೆಯೇ ಬೇರೆ. ದೇಶದ ಗಡಿಗಳನ್ನು ರಕ್ಷಿಸುವ ಪ್ರಾಥಮಿಕ ಜವಾಬ್ದಾರಿಯನ್ನೂ ನಿರ್ವಹಿಸುವಲ್ಲಿ ಕೂಡಾ ಈ ಸರಕಾರ ವಿಫಲಗೊಂಡಿತು. ತಿಂಗಳಾನುಗಟ್ಟಲೆ ಅತಿಕ್ರಮಣಕೋರರು ಭಾರತೀಯ ಪ್ರದೇಶದೊಳಗೆ ಬಂದು ಭಾರತೀಯ ಸೈನಿಕರೇ ಕಟ್ಟಿದ ಬಂಕರುಗಳನ್ನು ಆಕ್ರಮಿಸಿಕೊಂಡು ನಮ್ಮ 400 ಕ್ಕೂ ಹೆಚ್ಚು ಸೈನಿಕರನ್ನು ಬಲಿತೆಗೆದುಕೊಳ್ಳುವಂತಾಯಿತೆಂದರೆ ಈ ಸರ್ಕಾರ ನೀಡಿದ ಆದ್ಯತೆಯಾದರೂ ಎಂತದ್ದು?

ಅಡ್ಮಿರಲ್ ಭಾಗವತ್‌ರ ಅಭೂತಪೂರ್ವ ವಜಾ, ಅವರು ಮಾಡಿರುವ ಆಪಾದನೆಗಳು, ಸಶಸ್ತ್ರ ಪಡೆಗಳ ರಾಜಕೀಯ ತಟಸ್ಥತೆಯನ್ನು ಹಾಳು ಗೆಡಹುವ ಪ್ರಯತ್ನ, ಇವೆಲ್ಲಕ್ಕೂ ಮಿಗಿಲಾಗಿ ಬೇರೆ ದೇಶಗಳ

ಗ್ರಗಾಮಿಗಳಿಗೆ ಶಸ್ತ್ರಾಸ್ತ್ರಗಳ ರೈಕೆಯಲ್ಲಿ ಶಾಮೀಲಾಗಿರುವಾತನೇ ಕಾ ಮಂತ್ರಿಯಾಗಿ ಒಂದು ದೇಶದ ತೆಯನ್ನು ಕಾಪಾಡಬಲ್ಲದೇ? ಜಪೇಯಿ ಸರಕಾರ ದೇಶದ ದ್ರತೆಯನ್ನೇ ಹೆಚ್ಚಿಸಿದೆ.

ಸುಳ್ಳು 9 ಬಿಜೆಪಿ ಸರಕಾರ ಗಲಭೆ ಮುಕ್ತ ಸರಕಾರ ನೀಡಿದೆಯಂತೆ!

ಕಳೆದ ಒಂದು ವರ್ಷದ ಘಟನೆಗಳನ್ನು ದೊಂದಾಗಿ ನೆನಪಿಸಿಕೊಳ್ಳಿ. ಸುಪ್ರೀಂ ೋರ್ಟ್‌ನ ತೀರ್ಪಿಗೆ ಕಾಯದೆ ಯೋಧ್ಯೆಯಲ್ಲಿ ಕಟ್ಟಬೇಕೆಂದಿರುವ ವಸ್ಥಾನದ ಕಂಬಗಳ ಸಿದ್ಧತೆಯ ಭಾರೀ ಟುವಟಿಕೆ, ಆ ಬಗ್ಗೆ ಯಾವುದೇ ಕ್ರಮ ೊಳ್ಳಲಿಲ್ಲ. ಅದರ ಬೆನ್ನ ಹಿಂದೆಯೇ ಶನರಿಗಳ ಚಟುವಟಿಕೆಗಳನ್ನು ನಿಲ್ಲಿಸಲು ೇಶಭಕ್ತ' ಯುವಕರಿಗೆ ತರಬೇತಿ ಡುವುದಾಗಿ ಭಜರಂಗ ದಳ ಪ್ರಕಟಣೆ: ವೇ ವಾರದೊಳಗೆ ಮಿಶನರಿಗಳ ಮೇಲೆ ್ಯಪಕ ಹಲ್ಲೆಗಳು - ಜಬುವಾದಲ್ಲಿ ಕ್ರೈಸ್ತ ್ಯಾಸಿನಿಯರ ಮಾನಭಂಗದಿಂದ ಹಿಡಿದು ಿಸ್ಸಾದಲ್ಲಿ ಸ್ಟೈನ್ಸ್-ಹತ್ಯೆಯವರೆಗೆ; ರ್ನಾಟಕದಲ್ಲಿ ಬಾಬಾ ಬುಡನ್‌ಗಿರಿ ಮೋಚನೆ'ಯ ಹೆಸರಲ್ಲಿ ಭಾವೋದ್ರೇಕ; ದರ ಬೆನ್ನ ಹಿಂದೆಯೇ ಸುರತ್ಕಲ್ ಗಲಭೆ; ್ರೃಷ್ಣ ಆಯೋಗದ ವರದಿ ಮೂಲೆಗೆ; ರಸ್ವತಿ ವಂದನೆಯ ವಿವಾದ ಸೃಷ್ಟಿ; ಕಿಸ್ತಾನೀ ಕ್ರಿಕೆಟ್ ತಂಡದ ವಿರುದ್ಧ ವಸೇನೆಯ ವಿಷ ಪ್ರಚಾರ ನಡೆದಾಗ ಕೇಂದ್ರ ಹಮಂತ್ರಿ ಶಿವಸೇನೆಯ ಮುಖ್ಯಸ್ಥರ ಕಾಲು ಡಿದದ್ದು; 'ಫೈರ್' ಚಿತ್ರ ಪ್ರದರ್ಶನಕ್ಕೆ ತಡೆ; .ಎಫ್.ಹುಸೇನ್ ಮೇಲೆ ಧಾಳಿ; ಗುಲಾಂ ಲಿ ಸಂಗೀತ ಕಾರ್ಯಕ್ರಮಕ್ಕೆ ಅಡ್ಡಿ; ಾಂಗ್ಲಾದೇಶಿಯರೆಂಬ ಹೆಸರಲ್ಲಿ ಮುಂಬೈಯ ಂಗಾಳೀ ಮುಸ್ಲಿಮರ ಮೇಲೆ ಧಾಳಿ; ಉಚ್ಚ ಂಶೋಧನಾ ಸಂಸ್ಥೆಗಳಲ್ಲಿ ಮೂಗು ತೂರಿಸಿ ರ್.ಎಸ್.ಎಸ್. ಬೆಂಬಲಿಗರ ನೇಮಕ; ಠ್ಯ ಕ್ರಮ ಬದಲಿಸಿ ಕೋಮುವಾದಿ ಂಶಗಳ ಸೇರ್ಪಡೆ; ದಿಲೀಪ್ ಕುಮಾರ್ ರುದ್ಧ ಅಪಪ್ರಚಾರ; ಕಾರ್ಗಿಲ್ ನೆಪದಲ್ಲಿ ಹಮದಾಬಾದಿನಲ್ಲಿ ದಂಗೆ-ಈ ಪಟ್ಟಿ ನಪಿಸಿಕೊಂಡ ಮೇಲೆ ಗಲಭೆ-ಮುಕ್ತ ರಕಾರ ಎಂದರೆ ಏನು ಎಂದು ಕೇಳಬೇಕಾಗು ದೆ. ದೇಶದಲ್ಲಿ ಈಗ ಎಲ್ಲಾ ಅಲ್ಪಸಂಖ್ಯಾತ ೂ ಹಿಂದೆಂದೂ ಕಾಣದ ಅಭದ್ರತೆಯ ಾವನೆಯಿಂದ ಪೀಡಿತರಾಗಿದ್ದಾರೆ.

ಸುಳ್ಳು 10 'ಸ್ವದೇಶಿ' ಆರ್ಥಿಕ ನೀತಿಗಳು ಆರ್ಥಿಕವನ್ನು ಸುಧಾರಿಸಿದವು!

ವಾಜಪೇಯಿ ಸರಕಾರದ ೃಪೆಯಿಂದ ಈಗ ಫೋರ್ಡ್-ಮಹೀಂದ್ರ ಕಂಪನಿ ಫೋರ್ಡ್-ಇಂಡಿಯಾ ಆಗಿಬಿಟ್ಟಿದೆ; ಪ್ರೀಮಿಯರ್ ಆಟೋ ಮೊಬೈಲ್ಸ್ ಫಿಯಟ್ ಇಂಡಿಯಾ ವಾಗಿದೆ; ಹಿರೋಹೋಂಡಾವನ್ನು ಬದಿಗೆ ತಳ್ಳಿ ಜಪಾನಿನ ಹೊಂಡಾ ಕಂಪನಿ ತನ್ನ ಒಂದು ಸ್ವತಂತ್ರ ಘಟಕವನ್ನು ತೆರೆದಿದೆ. ಸ್ವದೇಶಿ ಕಂಪನಿಗಳು ಈಗ ಸಂಪೂರ್ಣ ವಿದೇಶಿ ಕೈಗಳಿಗೆ ಹೋಗಲು ಅವಕಾಶ ನೀಡಿದ ಆರ್ಥಿಕ ನೀತಿಗಳು ಸುಧಾರಿಸಿದ್ದೇನು? ಪೇಟೆಂಟ್ ಕಾನೂನಿನ ತಿದ್ದುಪಡಿ, ವಿಮಾ ಖಾಸಗೀಕರಣದ ಮೂಲಕ ವಿದೇಶಿ ವಿಮಾ ಕಂಪನಿಗಳಿಗೆ ಪ್ರವೇಶ ಇವೆಲ್ಲಾ ಏನನ್ನು ಸೂಚಿಸಿವೆ?

ಈ ಸರಕಾರದ ಹಣಕಾಸು ಮಂತ್ರಿ ಮೊದಲ ಅಧಿಕಾರಾವಧಿಯಲ್ಲಿ ದೇಶದ ಚಿನ್ನವನ್ನು ಒತ್ತೆಯಿಟ್ಟಿದ್ದರು. ಈಗ ದೇಶವನ್ನೇ ಒತ್ತೆಯಿಟ್ಟಿದ್ದಾರೆ. ದೇಶ ಈಗ ಸಾಲದ ಬಲೆಯಲ್ಲಿ ಸಿಲುಕಿದೆ ಎಂದು ಪರೋಕ್ಷವಾಗಿ ಹಣಕಾಸು ಮಂತ್ರಿಗಳೇ ಈಗ ಒಪ್ಪಿಕೊಂಡಿದ್ದಾರೆ. ಆರ್ಥಿಕವನ್ನು ಸುಧಾರಿಸಿದ ಬಗೆಯಿದು!

ಸುಳ್ಳು 11 ಬಿಜೆಪಿ ಆಳ್ವಿಕೆಯಲ್ಲಿ ಆರ್ಥಿಕದ ಮೂಲಭೂತ ಅಂಶಗಳು ಬಲಿಷ್ಠಗೊಂಡಿವೆ!

ವಾಜಪೇಯಿಯವರು ಕೆಂಪು ಕೋಟೆಯ ಭಾಷಣದಲ್ಲಿ 1. ಆಹಾರ ದಾನ್ಯ ಉತ್ಪಾದನೆ ದಾಖಲೆ ಸ್ಥಾಪಿಸಿದೆ 2. ಹಣದುಬ್ಬರ ಅತ್ಯಂತ ಕಮ್ಮಿಯಾಗಿದೆ ಹಾಗೂ 3) ವಿದೇಶಿ ವಿನಿಮಯ ಈಗ 30 ಶತಕೋಟಿ ಡಾಲರು ದಾಟಿವೆ ಎಂದರು.

ನಿಜ ಸಂಗತಿಯೇನು?

● ಆಹಾರ ಧಾನ್ಯ ಉತ್ಪಾದನೆ 1990 ವರೆಗೆ ಸರಾಸರಿ ವಾರ್ಷಿಕ 3% ದರದಲ್ಲಿ ಹೆಚ್ಚಿತ್ತು. 1991 ರಿಂದ ಅದು 1.5% ದರದಲ್ಲಿ ಹೆಚ್ಚಿದೆ. ವಾಜಪೇಯಿ ಸರಕಾರ ಇದಕ್ಕೆ ಕಾರಣವಾದ 1991 ರಿಂದ ಆರಂಭವಾದ ನೀತಿಗಳನ್ನೇ ಮುಂದುವರಿಸಿದೆ. 1980 ರ ದಶಕದ ಲೆಕ್ಕದಲ್ಲಿ ಆಹಾರ ಉತ್ಪಾದನೆ ಎಂದೋ 200 ಕೋಟಿ ಟನ್ ದಾಟಬೇಕಿತ್ತು. ಅದು ಈಗ ದಾಟಿದೆಯಷ್ಟೇ. ಇದರಲ್ಲಿ ಬಿಜೆಪಿ ಸರಕಾರದ ಸಾಧನೆಯಂತೂ ಏನೂ ಇಲ್ಲ.

● ಹಣದುಬ್ಬರ ದರ ಇಳಿದಿರುವುದು ಬೆಲೆ ಇಳಿಕೆಗಳಿಂದಾಗಿ ಅಲ್ಲ. ಬಿಜೆಪಿ ಆಳ್ವಿಕೆಯ ಆರಂಭದ ತಿಂಗಳಲ್ಲಿ ಬೆಲೆಗಳು ವಿಪರೀತ ಏರಿದ್ದರ ಪರಿಣಾಮವಾಗಿ ಆದರ ಏರಿಕೆಯಲ್ಲಿ ಈ ವರ್ಷ ಹಣದುಬ್ಬರ ಕಮ್ಮಿಯಾಗಿದೆಯೇ ಹೊರತು ಬೆಲೆಗಳ ಏರಿಕೆ ನಿಂತಿಲ್ಲ. ವಾಸ್ತವವಾಗಿ ರೇಶನ್‌ನಲ್ಲಿ ಆಹಾರ ಧಾನ್ಯಗಳ ಬೆಲೆ 40 ರಿಂದ 60 ಶೇ ಹೆಚ್ಚಿದೆ.

● ಕಳೆದ ವರ್ಷ ಮೂಲರಚನೆಗಳಲ್ಲಿ ತೊಡಗಿಸಲೆಂದು ಈ ಸರಕಾರ ರಿಸರ್ಜೆಂಟ್ ಬಾಂಡುಗಳನ್ನು ಮಾರಾಟ ಮಾಡಿತ್ತು. ಅದರ ಮೂಲಕ ಬಹಳಷ್ಟು ವಿದೇಶಿ ವಿನಿಮಯ ಬಂದಿದೆ ನಿಜ. ಆದರೆ ದೇಶ ಈ ಬಾಂಡ್‌ಗಳ ಮೇಲೆ ಭಾರಿ ಬಡ್ಡಿ ತೆರುತ್ತಿದೆ. ಇದನ್ನು ದೇಶದ ಅಭಿವೃದ್ಧಿಗೆ ಉಪಯೋಗಿಸಲಾಗುತ್ತಿಲ್ಲ. ಏಕೆಂದರೆ ಹಾಗೆ ಉಪಯೋಗಿಸಲು ಹೋದರೆ ಈ ಹಣ ವಾಪಸು ಹೋಗುತ್ತದೆ - ಮೆಕ್ಸಿಕೋ, ಮಲೇಶ್ಯಾಗಳಲ್ಲಿ ಆದಂತೆ.

ಸುಳ್ಳು 12 ಬಿಜೆಪಿ ಹಗರಣ ಮುಕ್ತ ಸರಕಾರ ನೀಡಿದೆಯಂತೆ?

ಇದಂತೂ ಶತಮಾನದ ಜೋಕು. ಈ ರಂಗದಲ್ಲಂತೂ ಬೇರೆಯವರು 5 ವರ್ಷಗಳಲ್ಲಿ ಮಾಡಲಾಗದ್ದನ್ನು ಕೇವಲ13 ತಿಂಗಳುಗಳಲ್ಲಿ ಮಾಡಿದ್ದು ನಿಜಕ್ಕೂ ಬಿಜೆಪಿಯ ವಿಕ್ರಮ.

ಸುಳ್ಳು 13 ನಮ್ಮ ಬಳಿ ಮಾತ್ರವೇ ಒಬ್ಬ ಸಮರ್ಥ ಪ್ರಧಾನಮಂತ್ರಿ ಅಭ್ಯರ್ಥಿ ಇದ್ದಾರೆ!

ಎಂತಹ ಅಭ್ಯರ್ಥಿ! . 1942 ರ ಕ್ವಿಟ್ ಇಂಡಿಯಾ ಆಂದೋಲನದಲ್ಲಿ ತನ್ನ ಪಾತ್ರದ ಬಗ್ಗೆ ಈ ಮನುಷ್ಯ ಇನ್ನೂ ಸರಿಯಾದ ಉತ್ತರ ಕೊಟ್ಟಿಲ್ಲ ಎಂಬುದನ್ನು ನೆನಪಿಸಿಕೊಳ್ಳಿ

● ಮೇ 1995 ರಲ್ಲಿ ಬರೆದ ಲೇಖನದಲ್ಲಿ ಭಾರತದ ಮುಸ್ಲಿಮರ 'ಪರಿಷ್ಕಾರ' ಆಗಬೇಕು ಎಂದ ವ್ಯಕ್ತಿ ಈತ. ದೇಶದ 12% ಜನಸಂಖ್ಯೆಯ 'ಪರಿಷ್ಕಾರ' ಮಾಡಲು ಈತನಿಗೆ ಜನಾದೇಶ ದೊರೆತಿದೆಯೇ?

● ಆಡಳಿತವೆಂಬುದು ವ್ಯಕ್ತಿಗಳಿಗಿಂತ ಹೆಚ್ಚಾಗಿ ಧೋರಣೆಗಳನ್ನು ಅವಲಂಬಿಸಿದೆ. ವಾಜಪೇಯಿ ಆಳ್ವಿಕೆಯ 13 ತಿಂಗಳಂತೂ ಒಮ್ಮೆ ಕೈಗೊಂಡ ನಿರ್ಣಯವನ್ನು ಬದಲಿಸಿದ ಪ್ರಕರಣಗಳಿಂದಲೇ ತುಂಬಿದೆ. ಇದರಿಂದಾಗಿ ರೋಲ್‌ಬ್ಯಾಕ್ ಸರಕಾರ ಎಂಬ ಅಡ್ಡ ಹೆಸರನ್ನು ಗಳಿಸಿದ ಸರಕಾರ ಇದು.

● ಭಾರತಕ್ಕೆ ಬೇಕಾಗಿರುವುದು ಜನ-ಪರ ಧೋರಣೆಗಳನ್ನು ಅನುಸರಿಸಲು ಶಕ್ತರಾದ ಪ್ರಧಾನಮಂತ್ರಿ, ಜನಗಳ ಜೀವನ ಪರಿಸ್ಥಿತಿ ಯನ್ನು ಸುಧಾರಿಸಬಲ್ಲ ನಿರ್ಣಯಗಳನ್ನು, ಧರ್ಮನಿರಪೇಕ್ಷ ಪ್ರಜಾಪ್ರಭುತ್ವ ಸಾಂವಿಧಾನಿಕ ತಳಪಾಯವನ್ನು ಬಲಪಡಿಸುವ ನಿರ್ಣಯ ಗಳನ್ನು ದೇಶದ ವೈವಿಧ್ಯತೆಯನ್ನು ಬಹುಮುಖತೆಯನ್ನು ರಕ್ಷಿಸಿ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡುವ ನಿರ್ಣಯಗಳನ್ನು ಕೈಗೊಳ್ಳಬಲ್ಲ ಪ್ರಧಾನಮಂತ್ರಿ ಬೇಕಾಗಿದೆ.

● ಬಾಬ್ರಿ ಮಸೀದಿ ಧ್ವಂಸವಾಗುತ್ತಿದ್ದಾಗ ಮುಖ ಬೇರೆಡೆ ತಿರುಗಿಸಿ ಕವನ ಬರೆಯುವ -

ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲೆ ಧರ್ಮಾಂಧ ಹಿಂದೂಗಳು ಅಮಾನುಷ ದಾಳಿ ಮಾಡುತ್ತಿದ್ದಾಗ ಮತಾಂತರದ ಬಗ್ಗೆ ಚರ್ಚೆ ನಡೆಯಲಿ ಎನ್ನುವ -

ಸ್ವದೇಶಿ ಮಂತ್ರ ಹೇಳುತ್ತಾ ಎಲ್ಲಾ ಸೈದ್ಧಾಂತಿಕ ಆಧಾರಗಳನ್ನು, ರಾಜಕೀಯ ನೈತಿಕತೆಯನ್ನು ಗಾಳಿಗೆ ತೂರಿ ಹೇಗಾದರೂ ಅಧಿಕಾರದಲ್ಲಿರಲು ಮೈತ್ರಿಕೂಟ ಬೆಸೆಯುವ -

ಶಿಕ್ಷಣವನ್ನು ಕೋಮುಗ್ರಸ್ತ ಗೊಳಿಸಲು, ಇತಿಹಾಸವನ್ನು ತಿರುಚಲು ಅವಕಾಶ ಕೊಡುವ -

ಬಸ್ ಪ್ರಯಾಣದಲ್ಲಿ ಮೈಮರೆತು ನಮ್ಮ ಗಡಿಯಲ್ಲಿ ಎಚ್ಚರವನ್ನು ಮರೆಯುವ -

ಎಲ್ಲಕ್ಕೂ ಮಿಗಿಲಾಗಿ ಆರ್.ಎಸ್.ಎಸ್. ದೇಶದ ಅಧಿಕಾರದ ಮೇಲೆ ಹತೋಟಿ ಪಡೆಯಲು ಕೇವಲ ಮುಖವಾಡವಾಗಿ ಕೆಲಸ ಮಾಡುವ -

ಇಂತಹ ಪ್ರಧಾನ ಮಂತ್ರಿ ನಮಗೆ ಬೇಕಿಲ್ಲ.



ಚುನಾವಣಾ ಜಾಹೀರಾತು ಯುದ್ಧ

ಚುನಾವಣಾ ಬಿಸಿ ಜೋರಾದಂತೆ ಪ್ರಮುಖ ಬೂರ್ಜ್ವ ಪಕ್ಷಗಳ ಜಾಹೀರಾತು ಯುದ್ಧ ಆರಂಭವಾಗಿದೆ. ಚುನಾವಣಾ ಕಮೀಶನ್ ಇಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಚುನಾವಣಾ ಜಾಹೀರಾತು ನಿಷೇಧ ಮಾಡಿದ್ದರಿಂದ ಅವರ ಬಳಿ ಇದ್ದೆಲ್ಲಾ ಕಪ್ಪ ಕಪ್ಪ ಹಣವನ್ನು ಪತ್ರಿಕಾ ಜಾಹೀರಾತುಗಳಿಗೆ ಸುರಿಯುತ್ತಿವೆ. 'ಪ್ರಜಾವಾಣಿ' ಯಲ್ಲಿ ಈ ವರೆಗೆ (ಶನಿವಾರ ಸೆಪ್ಟೆಂಬರ್ 4) ಬಂದ ಜಾಹೀರಾತುಗಳನ್ನು ಗಮನಿಸಿದರೆ ಇದರಲ್ಲಿ ಸಿಂಹಪಾಲು ಬಿಜೆಪಿಯದ್ದೇ - ಒಟ್ಟು ಎಂಟು. ಎರಡು ಜಾಹೀರಾತುಗಳು ಸಂಯುಕ್ತ ಜನಾತಾದಳ; ಬಿಜೆಪಿ ಮೈತ್ರಿಕೂಟದ್ದು ಆರು ಸಂಯುಕ್ತ ಜನತಾದಳದ್ದು ; ನಾಲ್ಕು ಕಾಂಗ್ರೆಸ್‌ದ್ದು ; ಎರಡು ಜಾತ್ಯಾತೀತ ಜನತಾದಳದ್ದು.

ಬಿಜೆಪಿ ಜಾಹೀರಾತು: *'ಸಮರ-ಶಾಂತಿಯಲ್ಲಿ ನೆಚ್ಚಬಹುದಾದ ಜನನಾಯಕನ ಡಂಗುರ'*

ಬಿಜೆಪಿಯ ಜಾಹೀರಾತುಗಳಲ್ಲಿ ಐದು ಕೇಂದ್ರದ್ದು ಎರಡು ರಾಜ್ಯದ್ದು. ಕೇಂದ್ರದ ಜಾಹೀರಾತುಗಳಲ್ಲಿ ವಾಜಪೇಯಿಯ ದೊಡ್ಡ ಚಿತ್ರಗಳೊಂದಿಗೆ 'ಮುಖವಾಡ'ವನ್ನು ಬಳಸುತ್ತಿರುವ ರೀತಿ ವಾಕರಿಕೆ ತರುವಂತದ್ದು. ತನ್ನ ಏಕಮಾತ್ರ ನಾಯಕರನ್ನು - ಇಂದಿರಾ, ರಾಜೀವ್, ಈಗ ಸೋನಿಯಾರನ್ನು ಎತ್ತಿ ಹಿಡಿದು ಡಂಗೂರ ಸಾರುತ್ತಿದ್ದ ಕಾಂಗ್ರೆಸ್ ಕೂಡಾ ನಾಚಿಕೊಳ್ಳುವಂತಿದೆ. ಕಾರ್ಗಿಲ್‌ನ್ನು ನೇರವಾಗಿ ಹೆಸರಿಸದಿದ್ದರೂ ಕಾರ್ಗಿಲ್ ಅವರ ಬಂಡವಾಳ. ಸೋನಿಯಾ ವಿದೇಶಿ ಅರಚಾಟ ಬೇರೆ ಎಲ್ಲಾದರಲ್ಲೂ.

ಬಿಜೆಪಿ ಜಾಹೀರಾತು ತಲೆಬರಹಗಳನ್ನು ನೋಡಿ.

ಕಳೆದ 17 ತಿಂಗಳುಗಳಲ್ಲಿ ಅವರು ಆರ್ಥಿಕ ಹಿನ್ನಡೆಯನ್ನು ಬೆಳವಣಿಗೆಯಾಗಿ ಪರಿವರ್ತಿಸಿದರು. ಅವರೇನಾದರೂ 5 ವರ್ಷ ಅಧಿಕಾರದಲ್ಲಿದ್ದರೆ ಏನು ಮಾಡುತ್ತಿದ್ದರು, ಊಹಿಸಿ.

ಸಮರ-ಶಾಂತಿಯಲ್ಲಿ ನೆಚ್ಚಬಹುದಾದ ಜನನಾಯಕ ಖಂಡಿತ

ದೇಶವನ್ನು ಪೂರ್ತಿ ಕುಲಗೆಡಿಸುತ್ತಿದ್ದರೂ ಆ ಮೇಲೆ ಈ ಭಾರೀ ಹಿನ್ನಡೆಯನ್ನೇ ಬೆಳವಣಿಗೆಯೆಂದು ನಿಮಗೆ ಟೋಪಿ ಹಾಕುತ್ತಿದ್ದಾರೆ. ದೊಡ್ಡ ಪ್ರಮಾದವಾದ ಕಾರ್ಗಿಲನ್ನೇ ತಮ್ಮ ವಿಜಯ ಎನ್ನುತ್ತಿಲ್ಲವೇ ಹಾಗೆ?

ನಿಮ್ಮ ಓಟು ಯಾರಿಗೆ ? ನಿಷ್ಕಳಂಕ, ನಿಸ್ವಾರ್ಥ, ಪ್ರಾಮಾಣಿಕ ಮೂರ್ತಿಗೋ? ಅಥವಾ ಭ್ರಷ್ಟಾಚಾರವನ್ನೇ ಕಾಯಕವಾಗಿ ಕೊಂಡ ಇಲಿ ಹೆಗ್ಗಣಗಳಿಗೋ.

ಶಾಂತಿ ಸಮೃದ್ಧಿಯ ಹರಿಕಾರ, ಜಯದ ರೂವಾರಿ ಅಟಲ್ ಬಿಹಾರಿ

ಎಂತಹ ಭಂಡತನ! ಶತಕದ 50 ಸಾವಿರ ಕೋಟಿ ಟೆಲಿಕಾಂ ಹಗರಣವನ್ನು ನುಂಗಿ ನೀರು ಕುಡಿಯುವ ರೀತಿ ನೋಡಿ! ನಮ್ಮ ಓಟು ಪ್ರಾಮಾಣಿಕ ಜಾತ್ಯಾತೀತ ಅಭ್ಯರ್ಥಿಗಳಿಗೆ, ಭ್ರಷ್ಟಾಚಾರಿ ಬಿಜೆಪಿಗಲ್ಲ.

ಭಾರತದ ಸುಪುತ್ರನಿಗೆ ಮತ ನೀಡಿದರೆ ಮಹಾಪರಾಧವಾದೀತೇ? ಇವರಿಗೆ ಅಲ್ಲದೆ ಮತ್ತಾರಿಗೆ ಮತ ಹಾಕಲು ನಿಮ್ಮ ಮನ ಒಪ್ಪೀತು' ಯಾಕೆಂದರೆ ತಾವು ಅಪ್ಪಟ ಭಾರತೀಯ ತಾನೆ?

ಸಮರ-ಶಾಂತಿಯಲ್ಲಿ ನೆಚ್ಚಬಹುದಾದ ಜನನಾಯಕ

ಇದುವರೆಗೆ ಹಿಂದೂಗಳಲ್ಲದವರು ಬಾಬರಿ ಮಸೀದಿ ಒಡೆಯುವುದನ್ನು ವಿರೋಧಿಸಿದವರು ಭಾರತೀಯರಲ್ಲ ಅನ್ನುತ್ತಿದ್ದರು. ಇನ್ನು ಬಿಜೆಪಿಗೆ ಮತ ನೀಡುವವರು ಮಾತ್ರ ಅಪ್ಪಟ ಭಾರತೀಯರು. ಉಳಿದವರೆಲ್ಲಾ ಖೋಟಾ ಭಾರತೀಯರು ಎಂದಾರೆ?

ಅನುಭವೀ ನೇತಾರ ಅಥವಾ ಅನುಭವಶೂನ್ಯ ನೇತೃತ್ವ ಇಂತಹ ಕಠಿಣ ಪರಿಸ್ಥಿತಿಗಳಲ್ಲಿ ದೇಶದ ಚುಕ್ಕಾಣಿ ಯಾರ ಕೈಗೆ ಒಪ್ಪಿಸುವಿರಿ? ಸಮರ-ಶಾಂತಿಯಲ್ಲಿ ನೆಚ್ಚಬಹುದಾದ ಜನನಾಯಕ

ಆಡಳಿತದ ಅನುಭವವೇ ಮಾನದಂಡವಾದರೆ ಬಹುಶಃ ಇತರ ಎಲ್ಲಾ ಪಕ್ಷಗಳಲ್ಲಿ ಒಟ್ಟಾರೆ ಹೆಚ್ಚು ಅನುಭವವಿದೆ. ಮಾತ್ರವಲ್ಲ ಬಿಜೆಪಿ ಅನುಭವ ಯಾವುದರಲ್ಲಿ? ರಥಯಾತ್ರೆ, ಕೋಮುಗಲಭೆ, ಮಸೀದಿ ಒಡೆಯುವುದರಲ್ಲಿ? ಇಂತಹ ಅನುಭವ ನಮಗೆ ಬೇಕಾಗಿಲ್ಲ.

ಇನ್ನು ರಾಜ್ಯ ಮಟ್ಟದ ಬಿಜೆಪಿ ಜಾಹೀರಾತುಗಳು- ಎಲ್ಲರಿಗೂ ಎಲ್ಲವನ್ನೂ ಕೊಡುವ ಭರವಸೆಗಳ ಮಹಾಪೂರ.

ಜನಪರ ಹೋರಾಟದಿಂದ, ಜನಪರ ಆಡಳಿತದತ್ತ!
ಸ್ವಾಭಿಮಾನಿ ಭಾರತ - ಸಮೃದ್ಧ ಕರ್ನಾಟಕ!
ಹೊಸ ದಿಕ್ಕು ಹೊಸದಾರಿ!
ಬಿಜೆಪಿ ಈ ಬಾರಿ.

ಪುಟ 11 ಕ್ಕೆ

1991ರ ಸಾರ್ವತ್ರಿಕ ಚುನಾವಣೆಗಳಿಗೆ ಸಿಪಿಐ(ಎಂ) ಕೇಂದ್ರ ಸಮಿತಿ 10 ವಿಶೇಷ ಕಿರುಪುಸ್ತಕಗಳನ್ನು ಪ್ರಕಟಿಸಿದೆ 13+4 ತಿಂಗಳ ಬಿಜೆಪಿಯ ದುರಾಡಳಿತದ ಬಗ್ಗೆ ಬೆಳಕು ಚೆಲ್ಲುವುದು ಇದರ ಉದ್ದೇಶ. 1998 ಬಿಜೆಪಿ ನೇತೃತ್ವದ ಕೂಟ ದೇಶದಲ್ಲಿ ಭಯ, ಭೂಖ್(ಹಸಿವು) ಹಾಗೂ ಭ್ರಷ್ಟಾಚಾರವನ್ನು ನಿರ್ಮೂಲ ಮಾಡುವುದಾಗಿ ಹೇಳಿತ್ತು. ಭಾರತದ ಭದ್ರತೆಯನ್ನು ಬಲಪಡಿಸುವುದಾಗಿ ಹೇಳಿತ್ತು. ಆದರೆ ಮಾಡಿದ್ದು ತದ್ವಿರುದ್ಧ. ವಿವಿಧ ರಂಗಗಳಲ್ಲಿ ಬಿಜೆಪಿ ಮಾಡಿದ್ದೇನು ಎಂಬುದನ್ನು ನೆನಪಿಸುವ ಕಿರುಹೊತ್ತಿಗೆಗಳು ಇವು. ಅವುಗಳ ವಿವರ ಹೀಗಿದೆ -



1. ನಿಲ್ಲದ ಕೋಮುವಾದಿ ಧಾಳಿ: ಕಾವಿಪಡೆಗಳಡಿ ಕರಾಳ ದಿನಗಳು.
2. ಶಿಕ್ಷಣದ ಕೋಮುವಾದೀಕರಣ: ಇತಿಹಾಸದ ತಿರುಚುವಿಕೆ
3. ವಾಜಪೇಯಿ ಮತ್ತು ಕಾರ್ಗಿಲ್
4. ರಾಷ್ಟ್ರೀಯ ಭದ್ರತೆ - ಪ್ರಮುಖ ಹಿನ್ನಡೆ
5. ಪೋಖ್ರಾನ್‌ನಿಂದ ಕಾರ್ಗಿಲ್ - ಬಿಜೆಪಿಯ ಅಮೆರಿಕಾ ಪರ ವಿದೇಶಾಂಗ ನೀತಿ
6. ಏಕೆ ಈ ಚುನಾವಣೆಗಳು? ಬಿಜೆಪಿಯ 13 ಸುಳ್ಳುಗಳು.
7. ಗ್ರಾಮೀಣ ಜನಗಳಿಗೆ ಕೊಟ್ಟಿದ್ದೇನು? ಹದಗೆಟ್ಟ ಪರಿಸ್ಥಿತಿ
8. ದುಡಿಯುವ ಜನಗಳಿಗೆ ಕೊಟ್ಟಿದ್ದೇನು? ಶೋಚನೀಯ ಬದುಕು
9. ಸ್ವದೇಶಿಯ ಹೆಸರಲ್ಲಿ ವಿದೇಶಿ
10. ಮಹಾ ಟೆಲಿಕಾಂ ಲೂಟಿ ಮತ್ತಿತರ ಹಗರಣಗಳು

ಈ ವಿವಿಧ ಕಿರುಪುಸ್ತಕಗಳಲ್ಲಿನ ಮಾಹಿತಿಗಳನ್ನು ವಿಭಿನ್ನ ರೂಪಗಳಲ್ಲಿ 'ಐಕ್ಯರಂಗ'ದಲ್ಲಿ ನಮ್ಮ ಓದುಗರ ಮುಂದಿಟ್ಟಿದೆ. ಬಿಜೆಪಿಯ ಹದಿಮೂರು ಸುಳ್ಳುಗಳನ್ನು ಕುರಿತಾದ ಕಿರು ಹೊತ್ತಿಗೆಯಲ್ಲಿರುವ ಅಂಶಗಳನ್ನು ಈ ಪುಟದಲ್ಲಿ ಕೊಡಲಾಗಿದೆ.

ಅನಂತಕುಮಾರ್‌ರವರ ಉಸ್ತುವಾರಿಯಲ್ಲಿ ಏರ್‌ಲೈನ್ಸ್‌ನಲ್ಲಿ ಏನು ನಡೆದಿತ್ತು ಗೊತ್ತೆ?

ಇತ್ತೀಚಿನ ದಿನಗಳಲ್ಲಿ ಭಾರತದ ರಾಷ್ಟ್ರೀಯ ವಿಮಾನ ಯಾನ ಸಂಸ್ಥೆಗಳಾದ ಇಂಡಿಯನ್ ಏರ್‌ಲೈನ್ಸ್ ಮತ್ತು ಏರ್‌ಇಂಡಿಯಾ ಕಷ್ಟದಲ್ಲಿದೆ. 90 ರ ದಶಕದ ಮಧ್ಯಭಾಗದವರೆಗೆ ಲಾಭ ಗಳಿಸುತ್ತಿದ್ದ ಸಾರ್ವಜನಿಕ ವಲಯದ ಕಂಪನಿಗಳು ಇವು. ನಂತರ ಈ ಕಂಪನಿಗಳು ನಷ್ಟ ಅನುಭವಿಸಲು ಕಾರಣ ಸರಕಾರದ 'ಮುಕ್ತ ಆಕಾಶ' ನೀತಿ ಎಂದರೆ ಖಾಸಗಿಯವರಿಗೆ ಅವಕಾಶ ನೀಡುವ ಧೋರಣೆ, ವಿಮಾನ ಅಪಘಾತವೊಂದರ ನಂತರ ಏರ್‌ಬಸ್ 320 ರ ಹಾರಾಟ ನಿಲ್ಲಿಸಿದ್ದು, ಈಶಾನ್ಯ ಭಾರತ ಮುಂತಾದೆಡೆ ವಾಣಿಜ್ಯ ದೃಷ್ಟಿಯಿಂದ ಲಾಭಕರವಲ್ಲದಿದ್ದರೂ ಅಗತ್ಯವಾಗಿರುವ ವಿಮಾನ ಯಾನವನ್ನು ನಡೆಸಬೇಕಾದ್ದು, ವಿಮಾನಗಳು ಹಳೆಯದಾಗುತ್ತಿದ್ದು, ಅವನ್ನು ಬದಲಿಸದಿರುವುದು ಇತ್ಯಾದಿ. ಆದರೆ ಇತ್ತೀಚೆಗೆ ಈ ಸಂಸ್ಥೆಗಳ ಆಡಳಿತ ಮತ್ತು ನೌಕರರ ದೃಢ ಪ್ರಯತ್ನಗಳಿಂದ ಇವು ಸುಧಾರಿಸಲಾರಂಭಿಸಿದ್ದವು. ಇಂಡಿಯನ್ ಏರ್‌ಲೈನ್ಸ್‌ನಲ್ಲಿ ಇದು ಈಗಾಗಲೇ ಸ್ಪಷ್ಟವಾಗಿ ಎದ್ದು ಕಾಣುತ್ತಿದೆ. ವಾಜಪೇಯಿ ಸರಕಾರ ಬರುವ ಮೊದಲೇ ವಿಜಯ್ ಕೇಳ್ಕರ್‌ರವರ ಅಧ್ಯಕ್ಷತೆಯಲ್ಲಿ ಒಂದು ಪರಿಣತರ ಸಮಿತಿಯನ್ನು ಇವನ್ನು ಮತ್ತೆ ಲಾಭಕರಗೊಳಿಸುವ ಬಗ್ಗೆ ಅಧ್ಯಯನ ಮಾಡಲು ರಚಿಸಲಾಗಿತ್ತು. ಇಂಡಿಯನ್ ಏರ್‌ಲೈನ್ಸ್ ಕುರಿತಂತೆ ಶಿಫಾರಸುಗಳನ್ನು ಈ ಸಮಿತಿ ನೀಡಿತ್ತು. ಏರ್‌ಇಂಡಿಯಾದ ಬಗ್ಗೆ ವರದಿ ತಯಾರಿ ಹಂತದಲ್ಲಿತ್ತು. ಆದರೆ ವಾಜಪೇಯಿ ಸರಕಾರ ಈ ಸಮಿತಿಯನ್ನೇ ವಿಸರ್ಜಿಸಿತು.

ಇಂಡಿಯನ್ ಏರ್‌ಲೈನ್ಸ್‌ನಲ್ಲಿ 350 ಕೋಟಿ ರೂ. ತೊಡಗಿಸಿ ಅದರ ಹಣಕಾಸು ಪುನರ್ರಚನೆಗೆ ನೆರವಾಗಬೇಕೆಂದು ಕೇಳ್ಕರ್ ಸಮಿತಿ ಶಿಫಾರಸು ಮಾಡಿತ್ತು. ಅಲ್ಲದೆ ವಾಣಿಜ್ಯ ದೃಷ್ಟಿಯಿಂದ ಪ್ರಯೋಜನಕಾರಿಯಲ್ಲದ ರೂಟ್ ಗಳಲ್ಲಿ ಆಗುತ್ತಿರುವ ಹಾನಿ ಗಳನ್ನು ಬಜೆಟ್ ನಿಂದ ಭರ್ತಿ ಮಾಡಿಕೊಡಬೇಕು ಎಂದೂ ಅದು ಶಿಫಾರಸು ಮಾಡಿತ್ತು. ಆದರೆ ಹಿಂದಿನ ಸರಕಾರಗಳಾಗಲೀ, ವಾಜಪೇಯಿ ಸರಕಾರಗಳಾಗಲೀ ಆ ಬಗ್ಗೆ ಏನೂ ಮಾಡಲಿಲ್ಲ.

ಇದ್ದಕ್ಕಿದ್ದಂತೆ ಡಿಸೆಂಬರ್ 12, 1998 ರಂದು ಸುದ್ದಿ ಬಂತು - ಈ ಎರಡೂ ಕಂಪನಿಗಳ ಆಡಳಿತ ಮಂಡಳಿಗಳನ್ನು ವಿಸರ್ಜಿಸಲಾಗಿದೆ ಎಂದು. ಈ ಮಂಡಳಿಗಳಲ್ಲಿ ಹೊರಗಿನ ವಿವಿಧ ರಂಗಗಳ ವೃತ್ತಿ ಪರಿಣತರೂ ಇದ್ದರು. ಈ ಕ್ರಮಕ್ಕೆ ಸರಕಾರ ಕೊಟ್ಟ ಕಾರಣ ಈ ಮಂಡಳಿಗಳು ಸರಕಾರಕ್ಕೆ ತಿಳಿಸದೆಯೇ ಒಂದು ಹೋಲ್ಡಿಂಗ್ ಕಂಪನಿ ರಚಿಸಿ ಇವೆರಡೂ ಕಂಪನಿಗಳನ್ನು ಅದರ ಅಂಗ ಕಂಪನಿಗಳಾಗಿಸುವ ಪ್ರಯತ್ನ ನಡೆಸುತ್ತಿದ್ದರು, ಇದರಿಂದ ಈ ಎರಡು ಕಂಪನಿಗಳ ನಡುವೆ ಸಮನ್ವಯಕ್ಕೆ ಅಡ್ಡಿ ಬರುತ್ತಿತ್ತಂತೆ.

ಆದರೆ ಸರಕಾರದ ಈ ವಾದಕ್ಕೆ ಆಧಾರಗಳಿರಲಿಲ್ಲ. ನಾಗರಿಕ ವಿಮಾನಯಾನ ಇಲಾಖೆಯ ಹಲವು ಅಧಿಕಾರಿಗಳು ಈ ಬಗ್ಗೆ ನಡೆದ ದೀರ್ಘ ಚರ್ಚೆಗಳಲ್ಲಿ ಭಾಗವಹಿಸಿದ್ದರು, ಸ್ವತಃ ಇಲಾಖೆಯ ಕಾರ್ಯದರ್ಶಿಗೂ ಇದರ ಅರಿವಿತ್ತು ಎಂದು ದಾಖಲೆಗಳಿಂದ ತಿಳಿದು ಬಂದಿದೆ.

ಹಾಗಿದ್ದರೆ ಈ ಮಂಡಳಿಗಳನ್ನು ವಿಸರ್ಜಿಸುವ ಸರಕಾರದ ಕ್ರಮಕ್ಕೆ ನಿಜವಾದ ಕಾರಣವೇನು? ಸ್ವಲ್ಪ ದಿನಗಳ ನಂತರ ಬೆಳಕಿಗೆ ಬಂದ ವಿವರಗಳು ದಂಗುಬಡಿಸುವಂತದ್ದು. ಲೋಕಸಭೆಯ ವಿಸರ್ಜನೆಯ ನಂತರ ನಾಗರಿಕ ವಿಮಾನಯಾನ ಮಂತ್ರಿ ಅನಂತಕುಮಾರ್‌ರವರ ವೈಯಕ್ತಿಕ ಮುತುವರ್ಜಿಯಿಂದ ಒಂದು ಪ್ರಸ್ತಾವವಿಡಲಾಯಿತು. ಕೇಳ್ಕರ್ ಸಮಿತಿ 350 ಕೋಟಿ ರೂ. ಇಂಡಿಯನ್ ಏರ್‌ಲೈನ್ಸ್‌ಗೆ ಕೊಡಬೇಕು ಎಂದು ಹೇಳಿತ್ತು ತಾನೇ? 50 ಸೀಟುಗಳಿರುವ ಎಟಿಆರ್-42.500 ಎಂಬ ಹೆಸರಿನ ಆರು ವಿಮಾನಗಳನ್ನು ಖರೀದಿಸಲು ಇದನ್ನು ಏಕೆ ಕೊಡಬಾರದು? ಈ ಖರೀದಿಯ ಮೌಲ್ಯ 439.61 ಕೋಟಿ ರೂ.



ಆದರೆ ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಸೆಪ್ಟೆಂಬರ್ 1998 ರಲ್ಲೇ ಇಂಡಿಯನ್ ಏರ್‌ಲೈನ್ಸ್‌ನ ಮಂಡಳಿ ಈ ವಿಮಾನಗಳ ಖರೀದಿಯ ಬಗ್ಗೆ ಚರ್ಚಿಸಿತ್ತು. ಈ ವಿಮಾನದ ಬಳಕೆಯಿಂದ ಪ್ರತಿವರ್ಷ 78 ಕೋಟಿ ರೂ. ಗಳ ನಷ್ಟವಾಗುತ್ತದೆ ಎಂಬ ತೀರ್ಮಾನಕ್ಕೆ ಆಗ ಬರಲಾಗಿತ್ತು. ಏಕೆಂದರೆ ಈ ವಿಮಾನ ಬಳಕೆ ಹಣಕಾಸಿನ ದೃಷ್ಟಿಯಿಂದ ಪ್ರಯೋಜನಕಾರಿಯಾಗ ಬೇಕಾಗಿದ್ದರೆ 50 ಸೀಟಿನ ವಿಮಾನ ಬಳಸುವ ಎಲ್ಲಾ ರೂಟ್‌ಗಳಲ್ಲಿ ಪ್ರಯಾಣ ದರವನ್ನು 104% ಏರಿಸಬೇಕಾಗುತ್ತಿತ್ತು. ಅಥವಾ, ಕೇವಲ ಹೊಸ ರೂಟ್‌ಗಳಲ್ಲೇ ಅವನ್ನು ಹಾರಿಸುವುದಾದರೆ 156% ಏರಿಸಬೇಕಾಗುತ್ತಿತ್ತು.

ಇಂತ' [illegible] ಏರಿ [illegible] ಸಾಧ್ಯವಿಲ್ಲವಾದ್ದರಿಂ[illegible] ಈ ವಿಮಾನಗ[illegible] ಖರೀದಿ ಬೇಡವೆಂದ[illegible] ಮಂಡಳಿ ಅಭಿಪ್ರಾಯ[illegible] ಪಟ್ಟಿತ್ತು.

ಆದರೆ ಈಗ ವಿಮಾನಯಾ[illegible] ಖಾತೆ ಇಂಡಿಯನ್ ಏರ್‌ಲೈನ್ಸ್[illegible] ಹಣಕಾಸು ಪುನರ್ರಚನೆಗೆಂದು ಶಿಫಾರಸ[illegible] ಮಾಡಿದ 350 ಕೋಟಿ ರೂ. ಗಳಿಗೂ ಈ[illegible] ವಿಮಾನಗಳ ಖರೀದಿಗೂ ತಳುಕ[illegible] ಹಾಕಿರುವುದು ಆಘಾತಕಾರಿ ಸಂಗತಿಯಾಗಿತ್ತು[illegible] ನಿಜ, ಇದರ ವಿರುದ್ಧ ಎದ್ದ ಸಾರ್ವಜನಿಕ ಬೊಬ್[illegible] ಹಾಗೂ ಸ್ವತಃ ರಾಷ್ಟ್ರಪತಿಗಳೇ ಈ ಬಗ್ಗೆ ವಿವ[illegible] ಕೇಳಿದ್ದರಿಂದ ವಾಜಪೇಯಿ ಸರಕಾರ ಈ[illegible] ಯೋಜನೆಯನ್ನು ಕೈ ಬಿಡಬೇಕಾಗಿ ಬಂತು. ಅದೇನ[illegible] ಇರಲಿ, ಸರಕಾರ ಎಂತಹ ಹೀನ ಕೃತ್ಯಕ್ಕೆ ಕೈಹಾಕಿತ[illegible] ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಈ ವಿಮಾ[illegible] ತಯಾರಕರಿಂದ ಪಡೆಯುವ ಕೆಲವು ಕೋಟಿ[illegible] ರೂಪಾಯಿಗಳ ಲಂಚಕ್ಕಾಗಿ ಕಷ್ಟದಲ್ಲಿರುವ[illegible] ಇಂಡಿಯನ್ ಏರ್‌ಲೈನ್ಸ್‌ನ್ನೇ ಧರಾಶಾಯಿ[illegible] ಮಾಡುವ ದುಷ್ಟ ಪ್ರಯತ್ನವಲ್ಲದೆ ಮತ್ತೇನಿದು?

(- ಸಿಪಿಐ(ಎಂ) ಪ್ರಕಟಿಸಿ[illegible] "The Great Telecom Robbary an[illegible] other murky deals of the Vajpaye[illegible] Government" ನಿಂ[illegible]

ವಿದ್ಯುತ್ ಯೋಜನೆಗಳಲ್ಲಿ ಹಗರಣ - ಎನ್ರೋನ್‌ನಿಂದ ಹಿಂದೂಜಾವರೆಗೆ

ಎನ್ರೋನ್-ವಿದ್ಯುತ್ ವಲಯದಲ್ಲಿ ಉದಾರೀಕರಣದ, ಖಾಸಗೀಕರಣ ಮತ್ತು ಜಾಗತೀಕರಣದ ಮೊದಲ ಪ್ರತೀಕ. ಈ ಯೋಜನೆಯ ವಿರುದ್ಧ ಎತ್ತಿದ್ದ ಮುಖ್ಯ ಆಕ್ಷೇಪ ಈಗ ಸಾಬೀತಾಗಿದೆ. ಮುಂಬೈಯ ವಿದ್ಯುತ್ ಬಳಕೆದಾರರು ಈಗ ಮೂರು ಪಟ್ಟು ಹೆಚ್ಚು ತೆರುವಂತಹ ಪರಿಸ್ಥಿತಿ ಬಂದಿದೆ.

1993 ರಲ್ಲಿ ಶರದ್ ಪವಾರ್ ಮಹಾರಾಷ್ಟ್ರದ ಕಾಂಗ್ರೆಸ್ ಮುಖ್ಯಮಂತ್ರಿಯಾಗಿದ್ದಾಗ ಈ ಯೋಜನೆಯ ಮಾತುಕತೆ ಆರಂಭವಾಯಿತು. ಇದನ್ನು ವಿರೋಧಿಸುವಲ್ಲಿ ಇತರ ಹಲವು ಸಾಮೂಹಿಕ ಸಂಘಟನೆಗಳು ಹಾಗೂ ಎಡಪಕ್ಷಗಳೊಂದಿಗೆ ಬಿಜೆಪಿ, ಶಿವಸೇನೆಗಳೂ ಸೇರಿದ್ದವು. ಏಕೆಂದರೆ ಅವು ಆಗ ಅಧಿಕಾರದಲ್ಲಿರಲಿಲ್ಲ. ಆದರೆ ಅದನ್ನು ಅರಬ್ಬೀ ಸಮುದ್ರಕ್ಕೆ ಎಸೆಯುತ್ತೇವೆ ಎಂದು ಹೇಳಿದ್ದವರು ಅಧಿಕಾರಕ್ಕೆ ಬಂದ ಕೂಡಲೇ ತಿಪ್ಪರಲಾಗ ಹಾಕಿದರು. ಇನ್ನೂ ಮುಂದೆ ಹೋಗಿ ಎರಡನೇ ಹಂತದ ಯೋಜನೆಯ ಮಾತುಕತೆಗಳನ್ನೂ ನಡೆಸಿದರು. ಇವರ ವಿಶ್ವಾಸಘಾತ ಯಾವ ಮಟ್ಟ ತಲುಪಿತೆಂದರೆ 13 ದಿನಗಳ ವಾಜಪೇಯಿಯವರ ನೀತಿಬಾಹಿರ ಸರಕಾರದ ವಿಶ್ವಾಸಮತದ ಮೇಲೆ ಚರ್ಚೆ ನಡೆಯುತ್ತಿರುವಾಗಲೇ, ತನ್ನ ಸೋಲು ಖಚಿತ ಎಂದು ತಿಳಿದಿದ್ದಾಗಲೇ ಈ ಯೋಜನೆಗೆ ಬೇಕಾದ ಕೇಂದ್ರ ಸರ್ಕಾರದ ಪ್ರತಿ-ಗ್ಯಾರಂಟಿ ನೀಡಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಹೀಗೆ ಪ್ರತಿ ಗ್ಯಾರಂಟಿ ನೀಡಿದ ಆಗಿನ ಹಣಕಾಸು ಮಂತ್ರಿ ಜಸ್ವಂತ್ ಸಿಂಗ್ ಹಿಂದೆ ವಿದ್ಯುತ್ತಿನ ಮೇಲಿನ ಸಂಸತ್ತಿನ ಸ್ಥಾಯೀ ಸಮಿತಿಯ ಅಧ್ಯಕ್ಷರಾಗಿ ಇಂತಹ ಪ್ರತಿ-ಗ್ಯಾರಂಟಿಗಳನ್ನು ವಿರೋಧಿಸಿದ್ದರು ಎಂಬುದನ್ನೂ ಈಗ ನೆನಪಿಸಿಕೊಳ್ಳಬೇಕು.

ದರ ಮೂರು ಪಟ್ಟು

ಮೇ 1999 ರಲ್ಲಿ ಈ ಯೋಜನೆಯ ಮೊದಲ ಹಂತ ಕಾರ್ಯಾರಂಭ ಮಾಡಿದೆ. ಜೂನ್ 1999 ರಲ್ಲಿ ನಿಬಂಧನೆಗಳ ಪ್ರಕಾರ ಮಹಾರಾಷ್ಟ್ರ ರಾಜ್ಯ ವಿದ್ಯುತ್ ಮಂಡಳಿ (ಎಂ.ಎಸ್.ಇ.ಬಿ) 236 ಕೋಟಿ ಯೂನಿಟ್‌ಗಳಷ್ಟು ವಿದ್ಯುತ್ತನ್ನು ಖರೀದಿಸಿತು. ಅದಕ್ಕೆ ತೆರಬೇಕಾಗಿ ಬಂದ ಬೆಲೆ ಪ್ರತಿ ಯೂನಿಟ್ಟಿಗೆ ರೂ. 4.96. ಈಗ ಮುಂಬೈಗೆ ವಿದ್ಯುತ್ ಒದಗಿಸುತ್ತಿರುವ ಟಾಟಾ ಇಲೆಕ್ಟ್ರಿಕ್ ಕಂಪನಿಗೆ ಪ್ರತಿಯೂನಿಟ್‌ಗೆ [illegible] ತೆರುವ ಬೆಲೆ ರೂ. 2.00. ಮಹಾರಾಷ್ಟ್ರ [illegible] ಎನ್.ಟಿ.ಪಿ.ಸಿ. ಯಿಂದ ಪಡೆಯುವ ವಿದ್ಯುತ್ತಿಗೆ ಅದು ತೆರುವ ಬೆಲೆ ರೂ. 1.25.

ಸಮಸ್ಯೆ ಇಷ್ಟು ಮಾತ್ರವೇ ಇಲ್ಲ. ಎನ್ರೋನ್‌ನ ಈ ದಬೋಲ್ ವಿದ್ಯುತ್ ಕಂಪನಿಯಲ್ಲಿ ಎಂಎಸ್‌ಇಬಿ 30% ಪಾಲು ಹೊಂದಿದೆ. ಬಿಜೆಪಿ-ಶಿವಸೇನೆ ಸರಕಾರ ಒಪ್ಪಿದ, ವಾಜಪೇಯಿಯ 13 ದಿನಗಳ ಸರಕಾರ ನೀಡಿದ ಪ್ರತಿ ಗ್ಯಾರಂಟಿಯ ನಿಬಂಧನೆಗಳ ಪ್ರಕಾರ ಎಂ.ಎಸ್.ಇ.ಬಿ. ಮೊದಲು ಈ ಎನ್ರೋನ್ ಕಂಪನಿಯಿಂದಲೇ ವಿದ್ಯುತ್ ಖರೀದಿಸಬೇಕು. ಈ ವಿದ್ಯುತ್ ಸಾಲದಿದ್ದರೆ ಮಾತ್ರವೇ ಇದಕ್ಕಿಂತ ಅಗ್ಗ ದರದಲ್ಲಿ ಈಗ ವಿದ್ಯುತ್ ಪೂರೈಸುತ್ತಿರುವ ಎನ್.ಟಿ.ಪಿ.ಸಿ. ಮತ್ತು ಟಾಟಾ ಇಲೆಕ್ಟ್ರಿಕ್ ಕಂಪನಿಯಿಂದ ವಿದ್ಯುತ್ ಖರೀದಿಸಬಹುದು. ಈ ಎರಡು ಅಪಾಯಗಳ ಬಗ್ಗೆ ಈ ಯೋಜನೆಯ ವಿರೋಧಿಗಳು ಮೊದಲೇ ಎಚ್ಚರಿಸಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಇದರಿಂದಾಗಿ ಈಗ ಮುಂಬೈ ವಿದ್ಯುತ್ ಬಳಕೆದಾರ ಈಗ ತೆರುತ್ತಿರುವ ರೂ. 2.35 ದರದ ಬದಲು ರೂ. 6.50 ತೆರಬೇಕಾಗಿ ಬರಬಹುದು ಎಂದು ಶಂಕಿಸಲಾಗುತ್ತಿದೆ. ಈಗ ವಿಧಾನಸಭಾ ಚುನಾವಣೆ ನಡೆಯುತ್ತಿರುವುದರಿಂದ ಸದ್ಯಕ್ಕೆ ಈ ಹೊರೆ ಇನ್ನೂ ಬಳಕೆದಾರನ ತಲೆಯ ಮೇಲೆ ಬಿದ್ದಿಲ್ಲ.

'ಸ್ವದೇಶಿ'ಗೆ ಮತ್ತೊಂದು ಹೊಡೆತ

ಕೇವಲ ಎನ್ರೋನ್ ಯೋಜನೆಯಿಂದಲೇ ವಿದ್ಯುತ್ ಪಡೆಯಲು, ಅಗ್ಗದರದ ಇತರ ಮೂಲಗಳಿಂದ ವಿದ್ಯುತ್ ಪಡೆಯದಿರಲು ಈಗಾಗಲೇ ಬಿಜೆಪಿ-ಶಿವಸೇನೆ ಸರಕಾರ ನಾಟಕ ಆರಂಭಿಸಿದೆ. ಎನ್.ಟಿ.ಪಿ.ಸಿ. ಘಟಕಗಳಲ್ಲಿ ರಿಪೇರಿ ಕೆಲಸದಲ್ಲಿ ಇರುವುದರಿಂದ ಅಲ್ಲಿಂದ ವಿದ್ಯುತ್ ಖರೀದಿಸುತ್ತಿಲ್ಲ ಎಂದು ಸರಕಾರ ಹೇಳುತ್ತಿದೆ. ಆದರೆ ವಾಸ್ತವವಾಗಿ ಅಲ್ಲಿ ರಿಪೇರಿ ಕೆಲಸಗಳನ್ನು ಬೇಕೆಂದೇ [illegible] ಎಂದು ತಿಳಿದು ಬಂದಿದೆ. [illegible] ಟಾಟಾ ಇಲೆಕ್ಟ್ರಿಕ್ ಕಂಪನಿಗೆ ವಿದ್ಯುತ್ ಉತ್ಪಾದನೆಯನ್ನು 200 ಮೆಗಾವಾಟ್‌ನಷ್ಟು ಕಮ್ಮಿ ಮಾಡಿ ಎಂದು ಹೇಳಲಾಗಿದೆ.

ಇದೀಗ ಉದಾರೀಕರಣದ ಹೂರಣ - ಹೆಚ್ಚು ದರದ ವಿದ್ಯುತ್ ಪಡೆಯಲು ಅಗ್ಗ ದರದ ವಿದ್ಯುತ್ ಉತ್ಪಾದನೆಯನ್ನು ಇಳಿಸಬೇಕು! 'ಸ್ವದೇಶಿ' ಮುಖವಾಡ ಇಲ್ಲಿ ಇನ್ನೊಮ್ಮೆ ಕಳಚಿ ಬಿದ್ದಿದೆ - ಏಕೆಂದರೆ ವಿದೇಶಿ ಎನ್ರೋನ್‌ನ ವಿದ್ಯುತ್ ಖರೀದಿಗಾಗಿ ಅಗ್ಗ ದರದ ಸ್ವದೇಶಿ ವಿದ್ಯುತ್ ಉತ್ಪಾದನೆಯನ್ನು ಕಡಿತಗೊಳಿಸಬೇಕು!

ಈ ಹಿನ್ನೆಲೆಯಲ್ಲಿ ಹಿಂದೆ ಈ ಯೋಜನೆಯ ಮಾತುಕತೆಗಳನ್ನಾರಂಭಿಸಿದ್ದ ಶರದ್ ಪವಾರ್‌ರವರ ಎನ್.ಸಿ.ಪಿ. ಪ್ರಣಾಳಿಕೆ ಈ ಯೋಜನೆಯ ಮರು ಮಾತುಕತೆಗಳ ಬಗ್ಗೆ ತನಿಖೆ ನಡೆಸುವ ಆಶ್ವಾಸನೆ ನೀಡಿದೆ! ಆದರೆ ಉದಾರೀಕರಣಕ್ಕಾಗಿ ಇವರ ನಡುವಿನ ಸ್ಪರ್ಧೆಗೆ ಭಾರೀ ಬೆಲೆ ತೆರಬೇಕಾದವರು ಮಾತ್ರ ಸಾಮಾನ್ಯ ಬಳಕೆದಾರರು.

ತನ್ನ 13 ದಿನಗಳ ಅಧಿಕಾರಾವಧಿಯಲ್ಲಿ ವಿದೇಶಿ ಎನ್ರೋನ್‌ಗೆ ತರಾತುರಿಯಿಂದ ಅನುಮೋದನೆ ನೀಡಿದ ವಾಜಪೇಯಿ ಸರಕಾರದ ಚಾಳಿ 13 ತಿಂಗಳ ಅಧಿಕಾರಾವಧಿಯಲ್ಲಿ ಮುಂದುವರೆಯಿತು. ಈ ಬಾರಿ ಸ್ವದೇಶಿ 'ಹಿಂದೂಜಾ'ಗೆ ನೀಡಿದ ವಿಶೇಷ ಸವಲತ್ತಿಗೆ ಪ್ರತಿಯಾಗಿ ಈ ಬಿಜೆಪಿ ನೇತೃತ್ವದ ಸರಕಾರಕ್ಕೆ ಸಿಕ್ಕಿದ್ದೆಷ್ಟು ಎಂದು ಕೇಳುವಂತಾಗಿದೆ.

ಹಗರಣದ ವಾಸನೆ

1995 ರಲ್ಲಿ ಮಹಾರಾಷ್ಟ್ರದಲ್ಲಿ ವಿಧಾನಸಭಾ ಚುನಾವಣೆಗಳು ನಡೆದವು. ಅಧಿಕಾರಕ್ಕೆ ಬಂದ ಶಿವಸೇನೆ-ಬಿಜೆಪಿ ಸರಕಾರ ಈ ಯೋಜನೆಯ ಕಂಟ್ರಾಕ್ಟ್ ಬಗ್ಗೆ ತನಿಖೆಗೆ ಉಪಸಮಿತಿ ರಚಿಸಿತು. ಇದರ ಶಿಫಾರಸ್ಸಿನ ಆಧಾರದ ಮೇಲೆ ಆಗಸ್ಟ್ 1995 ರಲ್ಲಿ ಈ ಯೋಜನೆಯನ್ನು ರದ್ದು ಪಡಿಸಿರುವುದಾಗಿ ಆಗಿನ ಶಿವಸೇನಾ ಮುಖ್ಯಮಂತ್ರಿ ಮನೋಹರ ಜೋಶಿ ಸಾರಿದರು. ಕೆಲವು ದಿನಗಳ ನಂತರ ಇನ್ನೊಂದು ಪ್ರಕಟಣೆ ಬಂತು. ಯಾರಾದರೂ ಈ ನಿರ್ಣಯದ ಮರು ಪರಿಶೀಲನೆಗೆ ಮನವಿ ಮಾಡಿಕೊಳ್ಳಬಹುದು ಎಂದು. ತಕ್ಷಣ ಎನ್ರೋನ್‌ನ ಅಧಿಕಾರಿಣಿ ರೆಬೆಕ್ಕಾ ಮಾರ್ಕ್ ವಿಮಾನದಲ್ಲಿ ಹಾರಿ ಬಂದು [illegible] ಮಾಡಿದ್ದು ಯಾರನ್ನು ಗೊತ್ತೆ? ಶಿವಸೇನಾ ಮುಖ್ಯಸ್ಥ ಬಾಳಾ ಠಾಕ್ರೆಯನ್ನು! ಈ ಹುಚ್ಚು [illegible] ನಡೆಯಿತೋ, ನವೆಂಬರ್ 1995 ರಲ್ಲಿ ಶಿವಸೇನಾ-ಬಿಜೆಪಿ ಸರಕಾರ ಈ[illegible] ಯೋಜನೆಗೆ ಪುನರುಜ್ಜೀವನದ ಸಾಧ್ಯತೆಗಳನ್ನು ಪರಿಶೀಲಿಸುವುದಾಗಿ ಹೇಳಿತು. ಅದಕ್ಕೂ ಒಂದು ಸಮಿ[illegible] ರಚನೆಯಾಯಿತು. ಹತ್ತೆ ದಿನಗಳಲ್ಲಿ ಅದರ ವರದಿಯ[illegible] ಬಂತು. ಮರುಮಾತುಕತೆ ಆರಂಭವಾಯಿತು. ಎನ್ರೋನ[illegible] ಪ್ರಾಜೆಕ್ಟ್ ಖರ್ಚನ್ನು ಇಳಿಸಿದೆ ಎಂದು ಹೇಳಲಾಯಿತು[illegible] ಆದರೆ ಅದರ ಫಲ ಅಥವಾ ದುಷ್ಫಲ ಈಗ ಮಹಾರಾಷ್ಟ್ರ[illegible] ವಿದ್ಯುತ್ ಬಳಕೆದಾರರ ಮುಂದಿದೆ. ಚುನಾವಣೆಗಳ ನಂತ[illegible] ಅದರ ಪೂರ್ಣ ಚಿತ್ರ ಅವರಿಗೆ ದೊರೆಯಲಿದೆ.

ಇದರ ನಂತರವೂ ವಿದ್ಯುತ್ ಯೋಜನೆಗಳಿಗೆ ಕೇಂದ್[illegible] ಸರಕಾರ ಪ್ರತಿ-ಗ್ಯಾರಂಟಿ ಕೊಡುವ ಅಗತ್ಯವಿಲ್ಲ, ಏಕೆಂದ[illegible] ಖಾಸಗಿಯವರು ಇತಂಹ ಗ್ಯಾರಂಟಿಯಿಲ್ಲದೆ ವಿದ್ಯುತ[illegible] ವಲಯದಲ್ಲಿ ಹಣ ಹೂಡಲು ಸಿದ್ಧರಿದ್ದಾರೆ ಎಂದು ಸ್ವತ[illegible] ಬಿಜೆಪಿಯ ಜಗಮೋಹನ್ 4.3.97 ರಂದು ಸಲ್ಲಿಸಿದ[illegible] ವರದಿಯಲ್ಲಿ ಹೇಳಲಾಗಿದ್ದರೂ, ವಾಜಪೇಯಿಯ ಈ[illegible] ಬಾರಿಯ 13 ತಿಂಗಳ ಸರಕಾರ ಹಗರಣವನ್ನು[illegible] ಮುಂದುವರೆಸಿದೆ. ಅದೇ ಜಗಮೋಹನ್‌ರನ್ನು[illegible] ಮಂತ್ರಿಯಾಗುಳ್ಳ ವಾಜಪೇಯಿ ಸಂಪುಟ ಮೂರು[illegible] ತ್ವರಿತಗತಿಯ ವಿದ್ಯುತ್ ಯೋಜನೆಗಳಿಗೆ ಎನ್ರೋನ್‌ಗ[illegible] ನೀಡಿದಂತೆ ಪ್ರತಿಗ್ಯಾರಂಟಿ ನೀಡಿದೆ. ಈ ಮೂರು[illegible] ಯೋಜನೆಗಳೆಂದರೆ ಹಿಂದುಜಾಗಳ ವಿಶಾಖಪಟ್ಟಣ[illegible] ವಿದ್ಯುತ್ ಸ್ಥಾವರ, ಮಿತ್ತಲ್‌ಗಳ ಭದ್ರಾಮತಿ ತಾಪ ವಿದ್ಯುತ[illegible] ಯೋಜನೆ ಹಾಗೂ ಶರದ್ ಟಾಕ್‌ನ ಲಿಗ್ನೈಟ್ ಆಧಾರಿತ[illegible] ನೈವೇಲಿ ತಾಪ ವಿದ್ಯುತ್ ಯೋಜನೆ.

ಈ ಮೂರು ಯೋಜನೆಗಳಲ್ಲಿ ಎನ್ರೋನ್‌ನಂತ[illegible] ಹಗರಣದ ವಾಸನೆಯಂತೂ ಹೊಡೆಯುತ್ತಿದೆ. ಆದರ[illegible] ಅತ್ಯಂತ ದುರ್ವಾಸನೆ ಬರುತ್ತಿರುವುದು ಹಿಂದುಜಾಗಳ[illegible] ಯೋಜನೆಯಲ್ಲಿ. ಇಲ್ಲಿ ಉರುವಲು ಪೂರೈಕೆಗೆ ಹಾಗೂ[illegible] ಮಹಾನದಿ ಕೋಲ್ ಫೀಲ್ಡ್‌ನಿಂದ ಅದರ ಸಾಗಾಣಿಕೆ[illegible] ಕೂಡಾ ಭಾರತ ಸರಕಾರ ಪ್ರತಿ ಗ್ಯಾರಂಟಿ ನೀಡಿದೆ. ಇದು[illegible] ಕಾಂಗ್ರೆಸ್ಸನ್ನೂ ಮೀರಿಸಿದ ಬಿಜೆಪಿಯ ವಿಕ್ರಮ. ಮಹಾನದಿ[illegible] ಕೋಲ್‌ಫೀಲ್ಡ್ಸ್ ಕಂಪನಿಯ ಗ್ಯಾರಂಟಿ ಹಿಂದೂಜಾಗಳಿಗ[illegible] ಸಾಲಲಿಲ್ಲವಂತೆ, ಭಾರತ ಸರಕಾರ ಗ್ಯಾರಂಟಿಯ ಬಗ್[illegible] ಗ್ಯಾರಂಟಿ ಕೊಡಬೇಕು ಎಂದು ಹಿಂದೂಜಾ ಪಟ್ಟು[illegible] ಹಿಡಿದನಂತೆ. ಹೀಗೆ ಮಾಡಿದರೆ ನಾವೆಲ್ಲಾ ಜೈಲಿಗ[illegible] ಹೋಗಬೇಕಾದೀತು ಎಂದು ಹಣಕಾಸು ಇಲಾಖೆಯವರು[illegible] ಹೇಳುತ್ತಿದ್ದರಂತೆ. ಆದರೆ ಕೊನೆಗೂ ಪ್ರಧಾನ ಮಂತ್ರಿಗಳು[illegible] ಪ್ರತಿಗ್ಯಾರಂಟಿಯನ್ನು ಕೊಡಿಸಿದರು. ನಿಜ, ಯಾರೂ ಜೈಲಿಗೆ[illegible] ಹೋಗುವ ಬಗ್ಗೆ ಮಾತಾಡುತ್ತಿಲ್ಲ. [illegible]

ತಂತ್ರ್ಯ ಬಂದು 50 ವರ್ಷಗಳು ಕಳೆದುಹೋದರೂ ತ್ತರ ಕನ್ನಡದ ಜನ ಒಬ್ಬ ಸಮರ್ಥ ಸಂಸದನನ್ನು ಸಿಕೊಳ್ಳದಿರುವುದು ಅವರ ದೌರ್ಭಾಗ್ಯ ಎನ್ನಬೇಕೆ? ವಳಿಕೆಯ ಕೊರತೆ ಎನ್ನಬೇಕೆ? ಅಥವಾ ಇಲ್ಲಿ ರ್ಥಿಗಳಿಗೆ ಟಿಕೆಟ್ ಕೊಡುವ ರಾಜಕೀಯ ಪಕ್ಷಗಳ ಾಳಿತನ ಎನ್ನಬೇಕೆ? ಯೋಚಿಸುವಂತೆ ಮಾಡಿದೆ. ಷ್ಟು ಬೇಗ ಉತ್ತರ ಕಂಡುಕೊಳ್ಳಬೇಕಾಗಿದೆ.

ತ್ತರ ಕನ್ನಡದ 6 ವಿಧಾನಸಭಾ ಕ್ಷೇತ್ರ ಮತ್ತು ಗಾವಿ ಜಿಲ್ಲೆಯ 2 ವಿಧಾನಸಭಾ ಕ್ಷೇತ್ರವನ್ನು ಗೊಂಡು 'ಕೆನರಾ'ಲೋಕಸಭಾ ಕ್ಷೇತ್ರವಾಗಿದೆ. ಟ್ಟು 13 ತಾಲೂಕುಗಳು ಈ ಕ್ಷೇತ್ರದ ವ್ಯಾಪ್ತಿಗೆ ುತ್ತವೆ.

ಕಾಂಗ್ರೆಸ್‌ನ ವಿಫಲತೆ ಬಿಜೆಪಿಗೆ ಲಾಭ

ಕಾಂಗ್ರೆಸ ಭದ್ರಕೋಟೆ ಎನ್ನಲಾಗಿದ್ದ ಕೆನರಾ ತ್ರವನ್ನು ಸತತ ನಾಲ್ಕುಬಾರಿ ದೇವರಾಜನಾಯ್ಕ ್ದಕೊಂಡಿದ್ದರು. ಕ್ಷೇತ್ರಕ್ಕೆ ಹೆಚ್ಚಿನ ಹಣತರುವುದು ಟ್ಟಿಗಿರಲಿ ಬಂದ ಹಣವನ್ನು ಕೂಡ ಸರಿಯಾಗಿ ಯೋಗಿಸಿಕೊಳ್ಳಲಿಲ್ಲ. ಒಬ್ಬ ಸಂಸದನ ಕಾರ್ಯವ್ಯಾಪ್ತಿ ು ಎನ್ನುವುದೇ ಈ ಮಹಾಶಯರಿಗೆ ತಿಳಿದಿರಲಿಲ್ಲ. ಹೀಗೆ ನಾಲ್ಕು ಬಾರಿ ಆಯ್ಕೆಯಾದರೂ ಒಮ್ಮೆ ಖನೋಡಲಾರದ ದೇವರಾಜ ನಾಯ್ಕರಿಗೆ ಲಾಗಿ ಬೇರೊಬ್ಬರನ್ನು ಆಯ್ಕೆ ಮಾಡಬೇಕೆಂಬ ಕ್ತಿಯಲ್ಲಿ ಜನ ಇರುವಾಗ ತಾವೇ ಸೃಷ್ಟಿಸಿದ ೀಮುಗಲಭೆಯ ಲಾಭಪಡೆದು ಮತ್ತು ಕಾಂಗ್ರೆಸ ್ಯರ್ಥಿ ಆರ್.ಎನ್. ನಾಯ್ಕ ತೀರಾ ದುರ್ಬಲ ರುವುದರ ಲಾಭ ಪಡೆದು ಬಿಜೆಪಿಯ ಂತಕುಮಾರ ಹೆಗಡೆ 1996ರಲ್ಲಿ ಆಯ್ಕೆಯಾದರು. ್ಯ ಮೇಲಿನ ದ್ವೇಷ ಕೋಮುಗಲಭೆ, ಈದ್ಗಾದಲ್ಲಿ ಹಾರಿಸಿದ ಪ್ರಕರಣ, ಚಿತ್ತರಂಜನ ಕೊಲೆ.... ಗೆ ಇವರ ಗೆಲುವಿನ ಬೆಂಬಲಕ್ಕೆ ಹಲವಾರು ಣಗಳು ಸಹಾಯಕವಾಗಿವೆಯೇ ಹೊರತು ಜನ ಪಿಯ ತತ್ವವನ್ನು ಒಪ್ಪಿಕೊಂಡದ್ದಲ್ಲ ಎನ್ನುವುದು ಸಮೀಕ್ಷೆ ತೋರಿಸಿಕೊಟ್ಟಿದೆ.

1996ರಿಂದ ಎಂ.ಪಿ.ಯಾಗಿರುವ ಅನಂತಕುಮಾರ ಡೆ ಜಿಲ್ಲೆಯಲ್ಲಿ ಮಾಡಿದ್ದೇನು? ಎನ್ನುವ ಪ್ರಶ್ನೆಗೆ ಎರಡು ಉತ್ತರ ಕೊಡುತ್ತಾರೆ.

ಉಕ್ಕಿನ ಕಾರ್ಖಾನೆಗೆ ಕಲ್ಲುಹಾಕಿದ ಎಂ.ಪಿ.

ಉ.ಕ. ಜಿಲ್ಲೆಯಲ್ಲಿ ಸ್ಥಾಪನೆ ಆಗಬೇಕಾಗಿರುವ ಕ್ಕಿನ ಕಾರ್ಖಾನೆಯನ್ನು ನಿಲ್ಲಿಸಿದ್ದು ತಾನು ಎಂದು ೀಚೆಗೆ ಪತ್ರಿಕಾಗೋಷ್ಠಿಯಲ್ಲಿ ಘಂಟಾಘೋಷವಾಗಿ ಿದ್ದಾರೆ. ಈ ಜಿಲ್ಲೆಯಲ್ಲಿ 1999ರ ಆಗಸ್ಟ್ ವೇಳೆಗೆ 468 ಜನ ಉದ್ಯೋಗಕ್ಕಾಗಿ ಕಾದಿದ್ದಾರೆ. ಂದಾಯಿಸಿದ ನಿರುದ್ಯೋಗಿಗಳ ಸಂಖ್ಯೆ ಬೇರೆ. ಗಿರುವಾಗ ಸಂಸದ ಪ್ರಯತ್ನ ಮಾಡಿ ಇಂಥ ರ್ಖಾನೆ ತರುವಬದಲು ಬಂದಿದ್ದಕ್ಕೆ ಕಲ್ಲು ಿದ್ದಾರೆ. ಎಲ್ಲರಿಗೂ ಉದ್ಯೋಗ ಸಿಕ್ಕಿದರೆ ಮಸೀದಿ ಯುವವರು ಯಾರು? ಅಂಗಡಿಗಳನ್ನು ಲೂಟಿ ಡುವವರು ಯಾರು? ಎನ್ನುವ ಕಾರಣಕ್ಕಾಗಿ ಬಹುದೆ? ಅಥವಾ "ಅಖಂಡ ಭಾರತ ಕಿಸ್ತಾನ, ಬಾಂಗ್ಲಾ, ಶ್ರೀಲಂಕಾ ಇತ್ಯಾದಿ ಸೇರಿ) ಣ ಆಗುವವರೆಗೆ ನಮ್ಮ ಹೋರಾಟ

ಉತ್ತರಕನ್ನಡದ ಎಂ.ಪಿ. ಮಾಡಿದ್ದೇನು?

ಗಲಭೆ ಹುಟ್ಟಿಸುವ ಭಾಷಣ; ಈಡೇರದ ಆಶ್ವಾಸನೆ

ಮುಂದುವರಿಯುತ್ತದೆ" ಪಾಕಿಸ್ತಾನವನ್ನು, ಕಾಶ್ಮೀರವನ್ನು ನೆನೆಸಿಕೊಂಡಾಗೆಲ್ಲಾ ಕೈಯಲ್ಲಿ ಖಡ್ಗಬರುತ್ತದೆ" ಎಂದು ಭಾಷಣ ಮಾಡಿದಾಗ ಚಪ್ಪಾಳೆ ಹೊಡೆಯುವವರು ಯಾರು? ಎನ್ನುವ ಕಾರಣಕ್ಕಿರಬಹುದೆ?

'ಸಂಸದರ ನಿಧಿಯನ್ನು ಬಳಸಲೇ ಇಲ್ಲ'

ಈ ನಿಧಿ ತನ್ನಿಂದ ತಾನೆ ಬರುವುದು, ಇದಕ್ಕೆ ವಿಶೇಷ ಪ್ರಯತ್ನ ಮಾಡಬೇಕಾಗಿಲ್ಲ. ಹಿಂದೆ ನರಸಿಂಹರಾವ್ ಅಲ್ಪ ಮತದ ಸರ್ಕಾರದ ಪ್ರಧಾನಿ ಆಗಿದ್ದಾಗ ಸಂಸದರ ನಿಧಿಯನ್ನು ಜಾರಿಗೆ ತಂದರು. ಒಂದು ರೀತಿಯಲ್ಲಿ ಇದು ಎಂ.ಪಿ.ಗಳಿಗೆ ಭಕ್ಷೀಸು. ನಿರುಪಯೋಗಿ (ಪಾರ್ಲಿಮೆಂಟಿ ನಲ್ಲಿ ನಿದ್ರಿಸುವ ಮತ್ತು ಕೇಳಿದಾಗ ಕೈ ಎತ್ತುವ) ಸಂಸದರ ರಕ್ಷಣೆಗಾಗಿ ನರಸಿಂಹರಾಯರು ತಂದ ಯೋಜನೆ ಇದು. ಆಗ ಒಂದು ಕೋಟಿರೂಗಳನ್ನು ಕ್ಷೇತ್ರದ ಅಭಿವೃದ್ಧಿಗೆ ಕೊಡುತ್ತಿದ್ದರು. ನಂತರ 2 ಕೋಟಿಗೆ ಇದನ್ನು ಏರಿಸಲಾಯಿತು.

ಈ ಹಣವನ್ನು ಬಹುತೇಕ ಎಂ.ಪಿ.ಗಳು ತಮ್ಮ ಸಂಬಂಧಿಕರಿಗೆ, ತನ್ನನ್ನು ಬೆಂಬಲಿಸುವ ಕಾರ್ಯಕರ್ತರೇ ಹೆಚ್ಚಿದ್ದ ಪ್ರದೇಶಕ್ಕೆ, ತನ್ನ ಬಾಲಂಗೋಚಿಗಳು ಸೂಚಿಸಿದ ಸ್ಥಳಕ್ಕೆ ಇದನ್ನು ಉಪಯೋಗಿಸುತ್ತಿದ್ದಾರೆಯೇ ಹೊರತು ನಿಜವಾಗಿ ಕ್ಷೇತ್ರದ ಅಭಿವೃದ್ಧಿ ಆಗುತ್ತಿಲ್ಲ. ಎಂ.ಪಿ.ಗಳ ಅಭಿವೃದ್ಧಿ ಅಂತೂ ಇದರಿಂದ ಸಾಧ್ಯ.

1996ರಲ್ಲಿ ಕೆನರಾ ಕ್ಷೇತ್ರದ ಎಂ.ಪಿ. ಆಗಿರುವ ಅನಂತಕುಮಾರ ಅವರಿಗೆ 1999ರವರೆಗೆ 4 ಕೋಟಿ ರೂಪಾಯಿ ಬರಬೇಕಾಗಿತ್ತು. ಆದರೆ ಈ ಎಂ.ಪಿ. ಎಷ್ಟು ನಿಷ್ಕ್ರಿಯ ಎಂದರೆ ನ್ಯಾಯವಾಗಿ ಬರಬೇಕಾಗಿದ್ದ 1998-99ನೇ ಸಾಲಿನ 2 ಕೋಟಿ ರೂಪಾಯಿ ಬರಲೇ ಇಲ್ಲ. ಹಣಬರದಿದ್ದಾಗ ಅಭಿವೃದ್ಧಿಯ ಪ್ರಶ್ನೆ ಎಲ್ಲಿಯದು? ಉದ್ರೇಕಕಾರಿ ಭಾಷಣ ಮಾಡಲು ಸಾಕಷ್ಟು ಸಮಯ ಇದೆಯೇ ಹೊರತು ಹಣದ ಬಳಕೆಗೊಂದು ಕ್ರಿಯಾ ಯೋಜನೆಯನ್ನು ತಯಾರಿಸಲು ಸಮಯ ಇರಲಿಲ್ಲವೇ? ಎಂದು ಜಿಲ್ಲೆಯ ಜನ ಪ್ರಶ್ನಿಸುತ್ತಿದ್ದಾರೆ. 2 ಕೋಟಿ ರೂಗಳ ವಿನಿಯೋಗವನ್ನು ಈ ಜಿಲ್ಲೆಯಲ್ಲಿ ಹೇಗೆ ಮಾಡುವುದೆಂದು ಒಂದು ಕ್ರಮಬದ್ಧ ಯೋಜನೆ ತಯಾರಿಸಿ ಕೊಟ್ಟಿದ್ದರೆ ಆ ಹಣ ಜಿಲ್ಲೆಯನ್ನು ಸೇರುತ್ತಿತ್ತು.

2 ಕೋಟಿ ರೂಪಾಯಿಗಳೆಂದರೆ ಒಂದು ಜಿಲ್ಲೆಯ ಸಂದರ್ಭದಲ್ಲಿ ಸಣ್ಣ ಮೊತ್ತವೇನಲ್ಲ. ಎಷ್ಟೊಂದು ಸೇತುವೆ ಕಟ್ಟಬಹುದಾಗಿತ್ತು. ಎಷ್ಟೊಂದು ಶಾಲೆ ಕಟ್ಟಡ, ಗ್ರಂಥಾಲಯ, ಆಸ್ಪತ್ರೆ, ಸಮಾಜ ಮಂದಿರ, ಕುಡಿವ ನೀರಿನ ಯೋಜನೆ... ನಿರ್ಮಿಸಬಹುದಾಗಿತ್ತು. ಒಂದು ಕಡೆ ಶಾಶ್ವತ ಕೆಲಸ, ಇನ್ನೊಂದು ಕಡೆ ಅಷ್ಟೊಂದು ಉದ್ಯೋಗದ ಸೃಷ್ಟಿ ಒಟ್ಟೊಟ್ಟಿಗೆ ಆಗುತ್ತಿತ್ತು. ಉಳಿದ ಜಿಲ್ಲೆಗೆ ಈ ಹಣ ಸಿಗುತ್ತಿದ್ದಾಗ ನಮ್ಮ ಜಿಲ್ಲೆಗೆಂದು ಅನ್ಯಾಯ ಆಗುತ್ತಿರುವುದು ಮತದಾರರನ್ನು ಯೋಚನೆಗೀಡು ಮಾಡುವಂಥದ್ದು, ಬರುವ ದುಡ್ಡನ್ನೇ ಉಪಯೋಗಿಸಿಕೊಳ್ಳಲಾರದವರು ಇನ್ನು ಹೊಸ ಯೊಜನೆ ತರುತ್ತಾರೆಯೇ ಎಂದು ಎ.ಪಿ.ಗಳು ಹೊದಲ್ಲೆಲ್ಲಾ ಕೊಟ್ಟ ಆಶ್ವಾಸನೆಗಳೆಲ್ಲ ಈಡೇರದೆ ಹಾಗೇ ಇದ್ದುದನ್ನು ಕಂಡ ಜನ ಹೇಳುವ ಮಾತಿಗೂ ಒಂದು ಅರ್ಥ ಇದೆ ಅಲ್ಲವೆ?

ಬಿಡುಗಡೆ ಆದ ಬಹುಪಾಲನ್ನು ಇವರು ರಸ್ತೆಗಳಿಗೆ ಹಾಕಿದ್ದಾರೆ. ಸಾಮಾನ್ಯವಾಗಿ ಇದರಲ್ಲಿ 'ಮಾರ್ಜಿನ್' ಹೆಚ್ಚು ಎಂದು ಕಂಟ್ರಾಕ್ಟರ್ ಹೇಳುತ್ತಾರೆ. ಸಾಮಾನ್ಯವಾಗಿ ಈತರದ ಎಂ.ಪಿ.ಗಳು ಶಾಶ್ವತವಾಗಿ ಉಳಿಯುವಂತ ಕೆಲಸಗಳಿಗೆ ಹಣ ವಿನಿಯೋಗಿಸದೆ ಕೇವಲ ಪ್ರಚಾರಕ್ಕಾಗಿ ಹೋದಲ್ಲೆಲ್ಲ 5-10 ಸಾವಿರ ಕೊಟ್ಟು ಹಣದ ದುಂದು ವೆಚ್ಚ ಮಾಡುತ್ತಾರೆ. ಮತ್ತು ಕೆಲಸ ಮಾಡಬೇಕಾದ ಗುತ್ತಿಗೆದಾರರನ್ನೂ ಇವರೇ ಸೂಚಿಸುತ್ತಾರೆ.

ಇವರು 1996-97ರಲ್ಲಿ ಒಟ್ಟು 109 ಕೆಲಸಗಳಿಗೆ ಹಣ ಹಂಚಿದ್ದಾರೆ. 1997-98ರಲ್ಲಿ 70 ಕೆಲಸಗಳಿಗೆ ಹಣ ಹಂಚಿದ್ದಾರೆ. 1998-99ರಲ್ಲಿ ಹಣವೇ ಬಂದಿಲ್ಲ ಎಂದ ಮೇಲೆ ಇನ್ನು ಹಂಚುವುದೆಲ್ಲಿಂದ ಬಂತು?


ಹಿಂದುಳಿದ ಪ್ರದೇಶಗಳಿಗೆ ಹಣವೇ ಇಲ್ಲ

ಸಾಮಾನ್ಯವಾಗಿ ಜಿಲ್ಲೆಯ ಹಿಂದುಳಿದ ಪ್ರದೇಶಗಳಿಗೆ ಇವರು ಹೆಚ್ಚು ಹಣವನ್ನು ವಿನಿಯೋಗಿಸಬೇಕು. ಆದರೆ ಜಿಲ್ಲೆಯ ಅತ್ಯಂತ ಹಿಂದುಳಿದ ಮತ್ತು ಅವಗಣನೆಗೆ ಒಗ್ಗದ ಕ್ಷೇತ್ರ ಜೊಯ್ಡಾಕ್ಕೆ ಅತ್ಯಂತ ಕಡಿಮೆ ಹಣ ವಿನಿಯೋಗ ಆಗಿದೆ. 1996-97ರಲ್ಲಿ 10 ಕಾಮಗಾರಿಗಳಿಗೆ ರೂ. 7.41 ಲಕ್ಷ ವಿನಿಯೋಗ ಆಗಿದೆ. ಆದರೆ 97-98ರಲ್ಲಿ ಜೊಯ್ಡಾಕ್ಕೆ ಒಂದು ರೂಪಾಯಿಕೂಡ ಬಿಡುಗಡೆ ಆದ ದಾಖಲೆ ಇಲ್ಲ. ಅಂದ ಮೇಲೆ ಈ ಹಣದ ವಿನಿಯೋಗದ ಹಿಂದಿನ ಕಾಳಜಿ ನಿಜವಾಗಿ ಜಿಲ್ಲೆಯ ಅಭಿವೃದ್ಧಿಯೇ? ಅಥವಾ ಓಟುಗಳಿಸುವ ತಂತ್ರವೆ?

ಹೀಗೆ 10 ಸಾವಿರದಿಂದ 10 ಲಕ್ಷಗಳವರೆಗೆ ಚಿಲ್ಲರೆ ಹಣವನ್ನು ವಿನಿಯೋಗಿಸುವ ಬದಲು ಇಡೀ ಜಿಲ್ಲೆಯ ಜನಕ್ಕೆ ಉಪಯೋಗ ಆಗುವ ಶಾಶ್ವತ ಕೆಲಸಗಳಿಗೆ ವಿನಿಯೋಗಿಸಬಹುದು.

ಉದಾಹರಣೆಗೆ :

1. ಪ್ರತಿವರ್ಷ ನೆರೆ ಹಾವಳಿ ಈ ಜಿಲ್ಲೆಯನ್ನು ಕಾಡುತ್ತಿವೆ. ಜೀವ ಹಾನಿ, ಮನೆಮಠದ ಹಾನಿ ಆಗುತ್ತಿವೆ. ಇದರ ಶಾಶ್ವತ ಪರಿಹಾರಕ್ಕಾಗಿ ಇದನ್ನು ಕೊಡಬಹುದಾಗಿತ್ತು.
2. ಯಲ್ಲಾಪುರ ಕಾಲೇಜಿಗೆ ಕಟ್ಟಡವೇ ಇಲ್ಲ. ಇಲ್ಲಿ ಕಟ್ಟಡದ ನಿರ್ಮಾಣ ಮಾಡಬಹುದಾಗಿತ್ತು.
3. ಜಿಲ್ಲೆಯಲ್ಲಿ ಬ್ಲಡ್‌ಬ್ಯಾಂಕ್ ಇಲ್ಲ. ಇದಕ್ಕಾಗಿ ಹಣ ವಿನಿಯೋಗಿಸಿದ್ದೇನೆ ಎಂದು ಹೇಳುವುದರಲ್ಲಿಯೇ ಕಾಲಕಳೆದಿದೆ. ಆದರೆ ರಕ್ತ ಕೇಂದ್ರ ಬರಲೇ ಇಲ್ಲ. (ಎನ್.ಹೆಚ್. 17 ಇಲ್ಲಿರುವುದರಿಂದ ತಿಂಗಳಿಗೆ ಹತ್ತಾರು ಅಪಘಾತದ ಕೇಸಿರುತ್ತವೆ)
4. ಜಿಲ್ಲೆಯಲ್ಲೊಂದು ಸುಸಜ್ಜಿತ ಆಸ್ಪತ್ರೆ ಇಲ್ಲ. ಕಾರವಾರದ ಜಿಲ್ಲಾ ಆಸ್ಪತ್ರೆಯನ್ನು ಈ ಹಣದಿಂದ ಆಧುನೀಕರಣಗೊಳಿಸಿದರೆ ಇದು ಎಲ್ಲರಿಗೆ ಉಪಯೋಗ ಆಗುತ್ತಿತ್ತು. ಈ ರೀತಿಯ ಹತ್ತಾರು ಅವಶ್ಯಕತೆಗಳನ್ನು ಗುರುತಿಸಬಹುದು.



ಹಾಗಾಗಿ ಹಣ ಎಷ್ಟು ಕಾಮಗಾರಿಗೆ ವಿತರಿಸಿದೆ ಎನ್ನುವುದಕ್ಕಿಂತ ಯಾವ ಕಾಮಗಾರಿಗೆ, ಎಲ್ಲಿ ವಿನಿಯೋಗಿಸಿದೆ, ಅದು ಎಷ್ಟರಮಟ್ಟಿಗೆ ಜಾರಿ ಆಗಿದೆ ಎನ್ನುವುದು ಜಿಲ್ಲೆಯ ಅಭಿವೃದ್ಧಿಯನ್ನು ನಿರ್ಧರಿಸುತ್ತದೆ.

ಇದರ ಹೊರತಾಗಿಯೂ ಕೂಡ ಅನಂತಕುಮಾರ ಜನರ ಸಮಸ್ಯೆಗೆ ಸ್ಪಂದಿಸಿದಂತಿಲ್ಲ.

ಜಿಲ್ಲಾ ಕೇಂದ್ರ ಕಾರವಾರದಲ್ಲೊಂದು ಆಕಾಶವಾಣಿ ಇದೆ. ಆದರೆ ಇದರ ಪ್ರಸಾರಮಿತಿ ತೀರಾ ಕಡಿಮೆ. ಅದು ಇಡೀ ಜಿಲ್ಲೆಯ ಕೇಂದ್ರವಾಗಬೇಕೆಂದು ಜನ ಒತ್ತಾಯಿಸಿದರೂ ಸಂಸದರು ಇದನ್ನು ಮೇಲ್ದರ್ಜೆಗೆ ಏರಿಸಲು ಪ್ರಯತ್ನಿಸಿದಂತಿಲ್ಲ.

ಸೀಬರ್ಡ್ ನಿರಾಶ್ರಿತರ ಗೋಳು

ಇನ್ನೊಂದು ಪ್ರಶ್ನೆ ಸೀಬರ್ಡ್ ನಿರಾಶ್ರಿತರದ್ದು. ಸೀಬರ್ಡ್‌ತಂದದ್ದು ತಾನೇ ಎಂದು ಬೀಗುವ (ಸುಳ್ಳು ಎನ್ನುವುದು ಎಲ್ಲರಿಗೂ ಗೊತ್ತು) ಅನಂತಕುಮಾರ ಒಂದು ದಿನ ಕೂಡ ನಿರಾಶ್ರಿತರ ಗೋಳನ್ನು ಕೇಳಿದವರಲ್ಲ. ಕೇಂದ್ರದಿಂದ ಸಿಗಬೇಕಾದ ಹೆಚ್ಚಿನ ಪರಿಹಾರ ಧನ, ಮೂಲಭೂತ ಸೌಕರ್ಯ ಇರುವ ಪುನರ್ವಸತಿಗಳ ಕುರಿತು ಏನೂ ತಲೆಕೆಡಿಸಿಕೊಳ್ಳದ ಅನಂತಕುಮಾರ್ ಬಗ್ಗೆ ಇದೇ ನಿರಾಶ್ರಿತರು ಕೆಂಡಕಾರುತ್ತಾರೆ.

ಬೇಡ್ತಿ, ಅಘನಾಶಿನಿ, ಪ್ರದೇಶಗಳೆಂದರೆ "ಅದು ಪರಿಸರ" ಎಂದು ಹೇಳುತ್ತಾ ಅಲ್ಲಿ ಏನೂ ಆಗದಂತೆ ಹೋರಾಡುವ ಇವರು ನಮ್ಮ ಜಮೀನು, ಮನೆಗಳು ಹೋಗುತ್ತಿದ್ದರೂ ಒಮ್ಮೆ ತಿರುಗಿ ನೋಡಿಲ್ಲ ಎಂಬ ಮಾತು ಅಕ್ಷರಶಃ ಸತ್ಯ.

1999ರ ಚುನಾವಣೆಯಲ್ಲೂ ಬಿಜೆಪಿ ಇವರಿಗೇ ಕೆನರಾ ಲೋಕಸಭಾ ಟಿಕೇಟ್ ಕೊಟ್ಟಿದೆ. ತಮ್ಮ ಸಾಧನೆಯ ಆಧಾರದಲ್ಲಿ ಓಟು ಕೇಳುವುದಾಗಿ ಹೇಳಿದ್ದಾರೆ. ಕಾದು ನೋಡಬೇಕು ಮತದಾರ ಯಾವಕಡೆ?

ವರದಿಗಾರ

ಖಾವಿ ಪಡೆಗಳ ಸ್ವರೂಪ ದರ್ಶನ ಮಾಡಿದ 'ದ್ವೇಶದ ಸುಗ್ಗಿ' ಪೋಸ್ಟರುಗಳು

ಮತೀಯವಾದ ಅತ್ಯಂತ ಅಮಾನವೀಯವಾಗಿ ರ್ಜಸುತ್ತಿರುವ ಈ ಪ್ರಸ್ತುತ ಸಂದರ್ಭದಲ್ಲಿ ನಮ್ಮ ಂದಿರುವ ಆಯ್ಕೆ ಸ್ಪಷ್ಟ ಹಾಗೂ ನಿರ್ದಿಷ್ಟ- ಅದು ೋಮುವಾದಿಗಳಿಂದ ದೇಶ ಉಳಿಸಿ" ಈ ೀಷಣೆಯನ್ನು ಹೊರತುಪಡಿಸಿ ಇಂದು ಯಾವುದೇ ೀಷಣೆಯ ಅಗತ್ಯವಿಲ್ಲ. ಬಿಜೆಪಿಯ ಹದಿಮೂರು ಗಳುಗಳ ದುರಾಡಳಿತದಲ್ಲಿ ಕೋಮುವಾದಿಗಳು ಟ್ಟಹಾಸಗೈಯುತ್ತಿದ್ದಾರೆ. ಅವರನ್ನ ಜನತೆಯ ಮುಂದೆ ತ್ತಲು ಮಾಡುವ ಕಾರ್ಯವನ್ನು 'ಸಹಮತ್'ನ ಈ ೀಸ್ಟರ್‌ಗಳ ಪ್ರದರ್ಶನ ಅತ್ಯಂತ ಸಮರ್ಥವಾಗಿ ಡುತ್ತಿದೆ ಎಂದವರು ಸಿ.ಪಿ.ಐ(ಎಂ) ಪೊಲಿಟ್ ್ಯುರೋ ಸದಸ್ಯರಾದ ಸೀತಾರಾಂ ಮೆಚೂರಿ. ಅವರು ಹಮತ್' ಖಾವಿ ಪಡೆಗಳ ಗೂಂಡಾಗಿರಿಯನ್ನ ಬಿಲಿಸುವ 38 ಪೋಸ್ಟರ್‌ಗಳ ಪ್ರದರ್ಶನದ ್ಘಾಟನಾ ಸಮಾರಂಭದಲ್ಲಿ ಮಾತನಾಡುತ್ತಾ ಈ ರ್ಶನವನ್ನು ಜನಸಮೂಹದ ಎಲ್ಲಾ ವಿಭಾಗಗಳಿಗೆ ಂದೊಯ್ಯುವ ಕಾರ್ಯವಾಗಬೇಕು ಎಂದರು.


ದ್ವೇಷದ ಸುಗ್ಗಿ

ದ್ವೇಷದ ಸುಗ್ಗಿ ನಡೆದ ಬಿಜೆಪಿಯ ಹದಿಮೂರು ತಿಂಗಳುಗಳ ಕಾಲದ ದುರಾಡಳಿತ ಕಾವಿ ಪಡೆಗಳ ಆಕ್ರಮಣ ಕುರಿತು ದಾಖಲೆಯ ರೂಪದಲ್ಲಿ ಹೊರತಂದಿರುವ 'harvest of hatred' ಪೋಸ್ಟರ್‌ಗಳ ಪ್ರಕಟಣೆ ಉದ್ಘಾಟನೆಯ ಈ ಸಮಾರಂಭದಲ್ಲಿ ಖ್ಯಾತ ಚಿತ್ರನಟ ಕಾಂಗ್ರೆಸ ಎಂ.ಪಿ. ಸುನೀಲ್‌ದತ್, ಮಾಜಿ ಅರ್ಥ ಸಚಿವ ಮನ್ ಮೋಹನ್ ಸಿಂಗ್, ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಪ್ರಕಾಶ ಕಾರಟ್ ಮೊದಲಾದವರು ಭಾಗವಹಿಸಿದ್ದರು. ಇಂದು ನಾವು ಮತೀಯ ಶಕ್ತಿಗಳನ್ನು ಹಿಮ್ಮೆಟ್ಟಿಸದಿದ್ದರೆ ಅವು ಮತ್ತಷ್ಟು ಪ್ರಬಲವಾಗಿ ಅವುಗಳನ್ನು ನಾಶಮಾಡಲು ಸಾಧ್ಯವೇ ಆಗದಂತ ಪರಿಸ್ಥಿತಿ ಬರಬಹುದು ಎಂದು ಡಾ! ಮನ್ ಮೋಹನ್ ಸಿಂಗ್ ಎಚ್ಚರಿಸಿದರು. ಸಹಮತ್‌ನ ಈ ಕಾರ್ಯವನ್ನು ಪ್ರಶಂಸಿಸಿದ ಸುನೀಲ್ ದತ್ ಬಿಜೆಪಿಯ ಹದಿಮೂರು ತಿಂಗಳುಗಳ ದುರಾಡಳಿತವನ್ನು ಈ ಪೋಸ್ಟರುಗಳು ನಮಗೆ ನೆನಪಿಸುತ್ತವೆ ಎಂದರು.

ಈ ವಿವಿಧ ಪೋಸ್ಟರ್‌ಗಳಲ್ಲಿ ಬಿಜೆಪಿ ಈ ಆಡಳಿತದ ಅವಧಿಯಲ್ಲಿ ನಡೆದ ಗ್ರಹಾಂ ಸ್ಟೈನ್ ಮತ್ತು ಮಕ್ಕಳ ಹತ್ಯೆ, ಕೋಮುಗಲಭೆಗಳ ಭೀಕರತೆಯನ್ನು ಚಿತ್ರಿಸುವ ಕಾರ್ಟೂನ್‌ಗಳಿವೆ. ಕೊಲೆಗೀಡಾದ ಇರ್ಫಾನ್ ಹುಸೇನ್, ಲಕ್ಷ್ಮಣ್, ಉನ್ನಿ, ಕೇಶವ್, ಸುವ್ರಂಗ್ ಕೈಲಾಂಗ್ ಮುಂತಾದ ಖ್ಯಾತ ವ್ಯಂಗಚಿತ್ರಕಾರರ ಚುರುಕು ಗೆರೆಗಳು - ಸಂಕ್ಷಿಪ್ತ ವಿವರಣೆಗಳು ಈ ಪೋಸ್ಟರ್‌ಗಳಲ್ಲಿ ಮೈದಾಳಿವೆ.

ಈ ಪೋಸ್ಟರ್‌ಗಳನ್ನು ಪ್ರಕಟಿಸಲು ಬಯಸುವವರಿಗೆ ಅದರ ಪ್ರತಿಗಳನ್ನು ಸಹಮತ್ ಒದಗಿಸುತ್ತದೆ. 38 ಪೋಸ್ಟರ್‌ಗಳಿಗೆ ಅಂಚೆ ವೆಚ್ಚ ಸೇರಿ 500 ರೂ. ಬೆಲೆ ನಿಗದಿ ಪಡಿಸಲಾಗಿದೆ. ಆಸಕ್ತರು ಸಹಮತ್ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಬೆಂಗಳೂರಿನಲ್ಲಿ ಆಗಸ್ಟ್ 31 ರಂದು 'ವಿವೇಕ' ಏರ್ಪಡಿಸಿದ್ದ ಕೋಮುಶಕ್ತಿ ವಿರೋಧಿ ಸಮಾವೇಶದಲ್ಲಿ 'ಸಹಮತ್'ನ ಈ ಪೋಸ್ಟರ್‌ಗಳನ್ನು ಪ್ರದರ್ಶಿಸಲಾಗಿತ್ತು.



ಬಾಗೇಪಲ್ಲಿಯಲ್ಲಿ ಗೋಲೀಬಾರ್-ಚುನಾವಣೆ ಮುಂದೂಡಿಕೆ ಏಕಾಯಿತು?

15 ಸಾವಿರ ಜನರು ಸಿಪಿಐ(ಎಂ) ಅಭ್ಯರ್ಥಿ ನಾಮಪತ್ರ ದಾಖಲು ಮಾಡಲು ಬಂದಾಗ ಮೆರವಣಿಗೆಯಲ್ಲಿ ಬಂದಿದ್ದರೂ ಎಲ್ಲೂ ಒಂದು ಸಣ್ಣ ಅಹಿತಕರ ಘಟನೆ ನಡೆಯಲಿಲ್ಲ. ಆದರೆ ಕೇವಲ ಒಂದು ಸಾವಿರ ಜನರ ದಂಡು ಇಷ್ಟೊಂದು ದಾಂದಲೆ ನಡೆಸಿತು. ಅಧಿಕಾರ ಬಂದರೆ ಇನ್ನೆಷ್ಟು ದೌರ್ಜನ್ಯ ಮಾಡುವರೋ ಎಂಬ ಚರ್ಚೆ ಇಡೀ ಕ್ಷೇತ್ರದಾದ್ಯಂತ ನಡೆಯುತ್ತಿದೆ.

ಭಾಸ್ಕರ ರೆಡ್ಡಿ

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಏನೆಲ್ಲಾ ನಡೆಯುತ್ತದೆ ಎನ್ನುವುದಕ್ಕೆ ಬಾಗೇಪಲ್ಲಿ ಕ್ಷೇತ್ರದ ವಿಧಾನಸಭೆ ಚುನಾವಣೆ ಮುಂದೂಡಿರುವುದೇ ಸಾಕ್ಷಿ ಆಗಿದೆ. ಚುನಾವಣಾ ಇತಿಹಾಸದಲ್ಲಿ ಒಬ್ಬ ರಾಷ್ಟ್ರೀಯ ಪಕ್ಷದ ಅಭ್ಯರ್ಥಿ ಆತನ ಬೇಜವಾಬ್ದಾರಿಯಿಂದ ನಾಮಪತ್ರ ದಾಖಲು ಮಾಡದೇ ಇರುವುದರಿಂದ ಚುನಾವಣೆ ಮುಂದುಡಿರುವುದು ಪ್ರಪ್ರಥಮವಾಗಿದೆ.

ದುಡಿಯುವ ಜನತೆಯ ಪ್ರತಿನಿಧಿಯನ್ನು ವಿಧಾನಸಭೆಗೆ ಕಳುಹಿಸದಂತೆ ಮಾಡುವ ಪಿತೂರಿಗಳಲ್ಲಿ ಚುನಾವಣೆ ದಿನಾಂಕ ನಿಗದಿಯಾದಗಿನಿಂದ ಕಾಂಗ್ರೇಸ್‌ನಲ್ಲಿ ಟಿಕೆಟ್ ಪರ್ವ ಪ್ರಾರಂಭವಾಯಿತು. 5 ವರ್ಷ ಸಿಪಿಐ(ಎಂ) ಶಾಸಕ ಜಿ.ವಿ. ಶ್ರೀರಾಮರೆಡ್ಡಿಯವರ ಅಭಿವೃದ್ಧಿ ಕಾರ್ಯಗಳು, ಅವರ ಕಾರ್ಯಶೈಲಿ ಕಾಂಗ್ರೆಯನ್ನು ಧೃತಿಗೆಡಿಸಿತ್ತು. ಸಿಪಿಐ(ಎಂ) ಅನ್ನು ಸೋಲಿಸುವ, ಈ ಕ್ಷೇತ್ರವನ್ನು ಮತ್ತೆ ಪಡೆಯುವ ವ್ಯಕ್ತಿಯೊಬ್ಬನ ಹುಡುಕಾಟದಲ್ಲಿ ನಿರತವಾಗಿ ದಿನಕ್ಕೊಂದು ಹೆಸರು ಪತ್ರಿಕೆಗಳಲ್ಲಿ ಕೇಳಿಸುತ್ತಾ ಕುತೂಹಲ ಕೆರಳಿಸಿತ್ತು. ಕಡೆಗೊಬ್ಬ ಅಭ್ಯರ್ಥಿಯನ್ನು ಹಿಡಿಯಿತು. ಸಿಪಿಐ(ಎಂ) ಅನ್ನು ಸೋಲಿಸಲು ಹೇಳಿಕೊಳ್ಳು ವಂತಹ ವ್ಯಕ್ತಿ ಯಾರೂ ಇಲ್ಲ ಎಂದು ಅರಿತ ಕಾಂಗ್ರೆ 82 ವರ್ಷದ ಮುನಿರಾಜುರವರನ್ನು ಹುಡುಕಿತು.

ಇವರ ಹೆಸರು 'ಬಿ' ಫಾರಂಗೆ ಸೇರಿತು. ಆದರೆ ಬಾಗೇಪಲ್ಲಿಯ ಇನ್ನೊಂದು ಕಾಂಗ್ರೆ ಗುಂಪು ಹೇಳುವುದೇ ಬೇರೆ 82 ವರ್ಷದ ಈ ವ್ಯಕ್ತಿಗೆ ಮತ ಕೊಡುವವರ್‍ಯಾರು? ಇಂದು ಯುವಕರಾದರೆ ಮಾತ್ರ ಜಿ.ವಿ.ಎಸ್ ರವರನ್ನು ಸೋಲಿಸಲು ಸಾಧ್ಯವಾಗುತ್ತದೆ ಎಂದು. ಆದ್ದರಿಂದ ತನಗೇ ಟಿಕೆಟ್ ಬೇಕು ಎಂದು ಸ್ಥಳೀಯರಾದ ಸಂಪಂಗಿಯವರು ಹೇಳುತ್ತಾರೆ. ಎಂ.ಎಲ್.ಎ ಆಗಲಿಕ್ಕಾಗಾಗಿಯೇ ಸ್ಥಳೀಯರಾಗಬೇಕೆಂದು ಗುಡಿಬಂಡೆಯಲ್ಲಿ ಜಮೀನು ಕೊಂಡು ಸ್ಥಳೀಯರಾಗಿದ್ದಾರೆ.

16-8-99 ರಂದು ಸಿಪಿಐ(ಎಂ) ನ ಜಿ.ವಿ. ಶ್ರೀರಾಮರೆಡ್ಡಿಯವರು ನಾಮಪತ್ರ ಸಲ್ಲಿಸುವ ದಿನ ಸುಮಾರು 15 ರಿಂದ 20 ಸಾವಿರ ಜನರ ಅಭೂತಪೂರ್ವ ಜನಸ್ತೋಮವನ್ನು ಕಂಡ ಕಾಂಗ್ರೆ ವರಿಷ್ಠರು ಕಕ್ಕಾಬಿಕ್ಕಿಯಾದರು. ಸಾವಿರಾರು ಜನರ ಕೆಂಪುಸಾಗರ ಬಾಗೇಪಲ್ಲಿ ಮುಖ್ಯ ಬೀದಿಯಲ್ಲಿ ಮೆರವಣಿಗೆ ಹೋದಾಗ ಒಂದೇ ಒಂದು ಚಿಕ್ಕ ನಷ್ಟವೂ ಉಂಟುಮಾಡಲಿಲ್ಲ.

ಎಸ್.ಎಫ್.ಐ ನ ಜಿಲ್ಲಾಧ್ಯಕ್ಷ ಲಕ್ಷ್ಮೀ ನಾರಾಯಣ ಮೇಲೆ ಉದ್ದೇಶ ಪೂರ್ವಕವಾಗಿ ಪೂರ್ವಯೋಜಿತ ಯೋಜನೆಯಿಂದ ABVP ಎಂದುಕೊಂಡು ತಿರುಗುತ್ತಿದ್ದ 5-6 ಜನ ಗೂಂಡಾಗಳು ಹಲ್ಲೆ ಮಾಡಿದರು. ಆದರೆ ಅತ್ಯಂತ ಸಂಯಮದಿಂದ ವರ್ತಿಸಿ ಕಾರ್ಯಕರ್ತರು ಯಾವುದೇ ಅಹಿತಕರ ಘಟನೆ ನಡೆಯದಂತೆ, ಈ ಕಾರ್ಯಕ್ರಮ ಅಭೂತಪೂರ್ವವಾಗಿ ಯಶಸ್ವಿಯಾಗುವಂತೆ ಮಾಡಿದರು. ಇದು ಕಾಂಗ್ರೆಗೆ ನುಂಗಲಾರದ ತುತ್ತಾಯಿತು. ಕಡೆಗೆ ಇವೆಲ್ಲಾ ಬೆಳವಣಿಗೆಯ ನಂತರ ರೆಡ್ಡಿಯವರನ್ನು ಸೋಲಿಸಬೇಕೆಂದರೆ 82 ವರ್ಷದ ಮುನಿರಾಜುರವರೇ ಅರ್ಹ ವ್ಯಕ್ತಿ ಎಂದು ಗುರುತಿಸಿ 17-8-99 ರಂದು ಅವರಿಗೆ ಬಿ ಫಾರಂ ನೀಡಿದರು. ಆದರೆ ಕೆಲವು ಪತ್ರಿಕೆಗಳಲ್ಲಿ ಮುನಿರಾಜು ಅಥವಾ ಸಂಪಂಗಿ ಎಂದು ಬಂದಿತ್ತು. ಇದು ಕಾಂಗ್ರೆ ಪಾಳೆಯದಲ್ಲಿ ಗೊಂದಲವುಂಟು ಮಾಡಿತ್ತು.

ಕಾಂಗ್ರೆ ಪಾಳೆಯದಲ್ಲಿ ಯೋಜನೆ ರೂಪಿತವಾಯಿತು. ಮುನಿರಾಜು ನಾಮಪತ್ರ ಹಾಕದಂತೆ ಮಾಡುವುದೇ ಈ ಯೋಜನೆಯಾಗಿತ್ತು.

ನಾಮಪತ್ರ ಸಲ್ಲಿಸಲು ಬಂದ ಮುನಿರಾಜು ಅವರ ಮೇಲೆ ಹಲ್ಲೆ ನಡೆಸುವ ವಿರೋಧಿ ಕಾಂಗ್ರೆ ಗುಂಪು ಅವರನ್ನು ಕೂಡ ಹಾಕಿ ಹೊರಗೆ ಧರಣಿ ನಡೆಸಿತು. ಆದರೆ ಬಿ ಫಾರಂ ಅನ್ನು ಅವರಿಂದ ಕಸಿದುಕೊಳ್ಳುವುದರಲ್ಲಿ ವಿಫಲವಾಯಿತು. ಮುನಿರಾಜು ಪೋಲೀಸ್ ರಕ್ಷಣೆಯಲ್ಲಿ ಚುನಾವಣಾ ಕಛೇರಿ ಪ್ರವೇಶಿಸಿದರು. ಹೊರಗಿದ್ದ ವಿರೋಧಿ ಗುಂಪು ಕಲ್ಲಿನ ಸುರಿಮಳೆಗೈದರು. ರಕ್ಷಣೆಗಾಗಿ ಪೋಲಿಸರು ಗೋಲಿಬಾರ್ ಮಾಡಬೇಕ್ಕಾಗಿ ಬಂತು. ಮುನಿರಾಜುರವರು ಗಾಬರಿಯಲ್ಲಿ ಬೇರೊಂದು ರೂಮಿನಲ್ಲಿ ಕುಳಿತು ನಾಮಪತ್ರ ದಾಖಲು ಮಾಡುವುದನ್ನು ಮರೆತರು.

ಈ ಗೋಲಿಬಾರ್ ಇಬ್ಬರು ಮುಗ್ದ ಜನರನ್ನು ಬಲಿ ತೆಗೆದುಕೊಂಡಿತು. ಶಾಂತಿಪ್ರಿಯ ಬಾಗೇಪಲ್ಲಿಯ ಚರಿತ್ರೆಗೆ ಮಸಿಬಳಿಯುವ ದುರ್ಘಟನೆ ನಡೆದೇ ಹೋಯಿತು. ಬಿಹಾರದ ಮಾದರಿಯನ್ನು ಬಾಗೇಪಲ್ಲಿಗೆ ತಂದ ಕುಖ್ಯಾತಿ ಕಾಂಗ್ರೆಸ್ಸಿಗೆ ಸಂದಿತು.

ಪ್ರಜಾಪ್ರಭುತ್ವದಲ್ಲಿ ನಿರ್ಭಯದಿಂದ ಮತಚಲಾಯಿಸುವುದು, ನಿರ್ಭಯದಿಂದ ನಾಮಪತ್ರ ದಾಖಲು ಮಾಡಿ ಚುನಾವಣೆಗೆ ನಿಲ್ಲುವುದು, ಪ್ರಚಾರ ಮಾಡುವುದು ಇವೆಲ್ಲಾ ಚುನಾವಣಾ ದಸ್ತಾಮೇಜಿನಲ್ಲಿ ಮಾತ್ರ ಅಡಗಿ ಕುಳಿತಿದೆ. ಮುನಿರಾಜುರವರಿಗೆ ಕೊಟ್ಟ ಬಿ.ಫಾರಂನ್ನು ದೌರ್ಜನ್ಯದಿಂದ ಕಸಿಯುವ, ನಾಮಪತ್ರ ದಾಖಲು ಮಾಡುವುದನ್ನು ನಿರ್ಭಂಧಿಸುವ ಹಕ್ಕನ್ನು ಸಂಪಂಗಿ ಗುಂಪಿಗೆ ಕೊಟ್ಟವರ್‍ಯಾರು? ಶಾಸಕರಾಗುವ ಅತುರಕ್ಕೆ ಇಬ್ಬರು ಅಮಾಯಕರನ್ನು ಬಲಿತೆಗೆದುಕೊಳ್ಳಬೇಕಿತ್ತೇ? ಇವೆಲ್ಲಾ ಬಾಗೇಪಲ್ಲಿ ಜನರ ಮಧ್ಯೆ ಈಗ ಚರ್ಚೆಯಲ್ಲಿದೆ.

15 ಸಾವಿರ ಜನರು ಸಿಪಿಐ(ಎಂ) ಅಭ್ಯರ್ಥಿ ನಾಮಪತ್ರ ದಾಖಲು ಮಾಡಲು ಬಂದಾಗ ಮೆರವಣಿಗೆಯಲ್ಲಿ ಬಂದಿದ್ದರೂ ಎಲ್ಲೂ ಒಂದು ಸಣ್ಣ ಅಹಿತಕರ ಘಟನೆ ನಡೆಯಲಿಲ್ಲ. ಆದರೆ ಕೇವಲ ಒಂದು ಸಾವಿರ ಜನರ ದಂಡು ಇಷ್ಟೊಂದು ದಾಂದಲೆ ನಡೆಸಿತು. ಅಧಿಕಾರ ಬಂದರೆ ಇನ್ನೆಷ್ಟು ದೌರ್ಜನ್ಯ ಮಾಡುವರೋ ಎಂಬ ಚರ್ಚೆ ಇಡೀ ಕ್ಷೇತ್ರದಾದ್ಯಂತ ನಡೆಯುತ್ತಿದೆ.

ಮಾರನೇ ದಿನ ಗೋಲಿಬಾರ್ ಸುದ್ದಿಯೊಂದಿಗೆ, ಬಿ.ಫಾರಂಗಾಗಿ ಕಾಳಗ ನಡೆಸಿದ ನಾಯಕಶಿಖಾಮಣಿಗಳು ಇಡೀ ಘಟನೆಗೆ ಸಿಪಿಐ(ಎಂ) ಕಾರಣ ಎಂದು ಹೇಳಿಕೆ ನೀಡಿ ನಗೆಪಾಟಲಿಗೀಡಾದರು. ಇದು ಅತ್ಯಂತ ಬೇಜವಾಬ್ದಾರಿ ಹೇಳಿಕೆ. ಜವಾಬ್ದಾರಿಯುತ ಸ್ಥಾನಗಳಲ್ಲಿರುವ ಅವರು ಕ್ಷುಲ್ಲಕ ಹೇಳಿಕೆ ನೀಡುವುದು, ರಾಜಕೀಯ ಕುಚೇಷ್ಟೆ ಮಾಡುವುದು ಅವರ ಸ್ಥಾನಗಳಿಗೆ ತಕ್ಕುದಲ್ಲವೆಂದು ಸಿಪಿಐ(ಎಂ) ಕಾರ್ಯದರ್ಶಿ ವಿ.ವೆಂಕಟಸ್ವಾಮಿರೆಡ್ಡಿಯವರು ತಿಳಿಸಿದರು. ಕಾಂಗ್ರೆಯ ಬಾಬುರೆಡ್ಡಿಯವರು ಘಟನೆಗೆ ಕಾಂಗ್ರೆ ಕಾರ್ಯಕರ್ತರೇ ಕಾರಣ ಎಂದಿದ್ದಾರೆ.

ಚುನಾವಣಾ ಆಯೋಗವು ದೆಹಲಿಯಿಂದ ಆಯೋಗದ ಕಾರ್ಯದರ್ಶಿಗಳಾದ ಕೆ.ಜೆ.ರಾವ್ ರವರನ್ನು ಖುದ್ದು ವಿಚಾರಿಸಲಿಕ್ಕೆ ಕಳುಹಿಸಿಕೊಟ್ಟಿತ್ತು. ಅವರು ಚುನಾ[...] ಮುಂದೂಡುವ ವರದಿ ತಯಾರಿಸಿ ಆಯೋ[...] ಕಳುಹಿಸಿದರು. ಆದರಂತೆ ಆಯೋಗ ಚುನಾ[...] ಮುಂದೂಡುವ ತೀರ್ಮಾನ ಕೈಗೊಂಡಿತು. [...] ಕಾಂಗ್ರೆಸ್‌ನ ಪರವಾಗಿ ಪಕ್ಷಪಾತದ ನಿ[...] ಎಂದು ಸಾರ್ವಜನಿಕರಲ್ಲಿ ಗುಮಾನಿ [...] ಇದೇ ರೀತಿಯ ಅವ್ಯವಹಾರಗಳು ನಡೆದು[...] ಮುಂದೆ ಚುನಾವಣೆ ಮುಂದೂಡು[...] ರೂಢಿಯಾಗುವ ಭಯ ಉಂಟಾಗಿದೆ.

ನಾಮಪತ್ರ ದಾಖಲು ಮಾ[...] ಬೇಜಾವಾಬ್ದಾರಿತನ ತೋರಿಸಿದ್ದರಿಂದ ಚುನಾ[...] ಮುಂದೂಡುವುದೆಂದರೆ, ಇದು ಪ್ರಜಾಪ್ರ[...] ದಲ್ಲಿ ನಕಾರಾತ್ಮಕ ಬೆಳವಣಿಗೆಯೇ[...] ಹೇಳಬೇಕು.

ಸಿಪಿಐ(ಎಂ) ಅಭ್ಯರ್ಥಿ ಕಾಂ. ಜಿ[...] ಶ್ರೀರಾಮರೆಡ್ಡಿ ಇದನ್ನು ಖಂಡಿಸಿ ಇದೊ[...] ಪಕ್ಷಪಾತದ ಆದೇಶ ಎಂದರು. ಬೇಕಾ[...] ಮುನಿರಾಜುವಿಗೆ ನಾಮಪತ್ರ ಸಲ್ಲಿಸಲು ಅ[...] ಕೊಡಬಹುದಿತ್ತು ಅಥವಾ 11 ನೇ ತಾ[...] ಚುನಾವಣೆ ನಡೆಸಬಹುದಿತ್ತು. ಆದರೆ ವಿ[...] ಒಂದೂವರೆ ತಿಂಗಳು ಮುಂದಕ್ಕೆ ಹಾಕಿರು[...] ಬೇಜವಾಬ್ದಾರಿಯುತವಾಗಿದೆ ಎಂದು [...] ಜಿ.ವಿ.ಎಸ್ ರವರು ತಿಳಿಸಿದರು. ಇತರ ಪ[...] ಅಭ್ಯರ್ಥಿಗಳೂ ಈ ಅಭಿಪ್ರಾಯ ಪಡುತ್ತಿದ್ದಾ[...]

ಶಾಂತಿಪ್ರಿಯನಾದ ಬಾಗೇಪಲ್ಲಿ ಮತ[...] ಈ ಬೆಳವಣಿಗೆಗಳನ್ನು ಗಮನಿಸುತ್ತಾ ಇದ್ದಾ[...] ಎಲ್ಲಾ ಬೆಳವಣಿಗೆಗಳಿಗೆ ಕಾರಣರಾದ[...] ಬುದ್ಧಿ ಕಲಿಸಲು 3-10-99 ರವ[...] ಕಾಯುತ್ತಿದ್ದಾನೆ. ಆತ ಕೊಡುವ ತೀ[...] ಅಕ್ಟೋಬರ್ 6 ರಂದು ಈಚೆಗೆ ಬರಲಿದ[...]

ಸಿಪಿಐ(ಎಂ) ನ 73 ಅಭ್ಯರ್ಥಿಗಳು ಕಣದಲ್ಲಿ

13ನೇ ಲೋಕಸಭಾ ಚುನಾವಣೆಗ[...] ಸ್ಪರ್ಧಿಸುತ್ತಿರುವ ಸಿಪಿಐ(ಎಂ) ಅಭ್ಯರ್ಥಿ[...] ಪೂರ್ಣ ಪಟ್ಟಿಯನ್ನು ಆಗಸ್ಟ್ 30 ರ[...] ಸಿಪಿಐ(ಎಂ) ಕೇಂದ್ರ ಸಮಿತಿ ಪ್ರಕಟಿಸಿದೆ. [...] ಬೆಂಬಲಿತ ಪಕ್ಷೇತರರೂ ಸೇರಿದಂತೆ ಒಟ್ಟು[...] ಸಿಪಿಐ(ಎಂ) ಅಭ್ಯರ್ಥಿಗಳು ಈ ಚುನಾವಣಾ ಕಣದಲ್ಲಿದ್ದಾರೆ.

ರಾಜ್ಯವಾರು ವಿವರ ಹೀಗಿದೆ

ಪಶ್ಚಿಮ ಬಂಗಾಳ	32
ಕೇರಳ (ಇಬ್ಬರು ಬೆಂಬಲಿತ ಪಕ್ಷೇತರರೂ ಸೇರಿ)	14
ಆಂಧ್ರಪ್ರದೇಶ	7
ಮಹಾರಾಷ್ಟ್ರ	3
ತ್ರಿಪುರಾ	2
ತಮಿಳುನಾಡು	2
ಉತ್ತರ ಪ್ರದೇಶ	2
ಅಸ್ಸಾಂ	2
ಬಿಹಾರ	2
ಒರಿಸ್ಸಾ	1
ಜಮ್ಮು-ಕಾಶ್ಮೀರ	1
ರಾಜಸ್ತಾನ	1
ಪಂಜಾಬ್	1
ಮಧ್ಯಪ್ರದೇಶ	1
ಹರ್‍ಯಾಣ	1

ಈ 73 ರಲ್ಲಿ 7 ಸ್ಥಾನಗಳು ಪ[...] ಜಾತಿಗಳಿಗೆ ಮೀಸಲಾಗಿರುವ ಕ್ಷೇತ್ರಗಳು 7 ಪರಿಶಿಷ್ಟ ಬುಡಕಟ್ಟುಗಳಿಗೆ ಮೀಸಲಾ[...] ಕ್ಷೇತ್ರಗಳು. ಮಹಿಳಾ ಅಭ್ಯರ್ಥಿಗಳ 5(ಪಶ್ಚಿಮ ಬಂಗಾಳ-2, ಕೇರಳ, ಮಹಾ[...] ಮತ್ತು ಮಧ್ಯಪ್ರದೇಶಗಳಲ್ಲಿ ತಲಾ ಒ[...] ತಮಿಳು ನಾಡಿನಲ್ಲಿ ಮಧುರೈ ಮತ್ತು ಉತ್ತರ[...] ಕ್ಷೇತ್ರಗಳಲ್ಲಿ ಸಿಪಿಐ(ಎಂ) ಸ್ಪರ್ಧಿಸ[...] ಆಂಧ್ರಪ್ರದೇಶದಲ್ಲಿ ಮಿರಿಯಾಲಗುಂಡಂ, [...] ವಾರಂಗಲ್, ನರಸಾಪುರಂ, ನೆಲ[...] ವಿಶಾಖಪಟ್ಟಣಂ ಹಾಗೂ ತೆನಾಲಿ ಕ್ಷೇತ್ರ[...] ಸಿಪಿಐ(ಎಂ) ಸ್ಪರ್ಧಿಸುತ್ತಿದೆ. ಲೋಕಸಭೆಯಲ್ಲಿ ಸಿಪಿಐ(ಎಂ) ಸದಸ್ಯರ [...] 32(ಪಶ್ಚಿಮ ಬಂಗಾಳ -24, ಕೇರಳ-6[...] ತ್ರಿಪುರಾ-2.)

ಹೊಸಪೇಟೆಯಲ್ಲಿ ಕೆಂಬಾವುಟದ ಸಾಗರ

ಹೊಸಪೇಟೆ ನಗರದ ಹೆದ್ದಾರಿಗಳಲ್ಲಿ ಕೆಂಬಾವುಟದ ಸಾಗರ, ಸುಮಾರು 2000ಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದರು. ಪಾಲ್ಗೊಂಡ ಕೃಷಿ ಕೂಲಿಕಾರರು, ಕಾರ್ಮಿಕರು, ಯುವಜನರು, ರೈತರು, ದುಡಿಯುವ ಜನರ ಸಾಗರ ಜಾತ್ಯಾತೀತ ಪ್ರಗತಿಪರ ದುಡಿಯುವ ಜನತೆಯ ಪ್ರಾಣಮಿತ್ರನಾದ ಕಮ್ಯುನಿಷ್ಟ್ ಪಕ್ಷಕ್ಕೆ ಓಟು ಕೊಡಿ ಎಂದು ಹೊಸಪೇಟೆ ಜನತೆಗೆ ಮನವಿಮಾಡಿತು.

ಸಿ.ಪಿ.ಐ(ಎಂ) ಪಕ್ಷದ ಅಭ್ಯರ್ಥಿ ಕಾಂ॥ಎಸ್. ಪ್ರಸನ್ನಕುಮಾರ್‌ರವರ ನಾಮಪತ್ರ ಸಲ್ಲಿಸುವ ಕಾರ್ಯಕ್ರಮದ ಅಂಗವಾಗಿ ಈ ಬೃಹತ್ ರ್‍ಯಾಲಿಯನ್ನು ಸಂಘಟಿಸಲಾಗಿತ್ತು. ಈ ಬೃಹತ್ ರ್‍ಯಾಲಿ ಹೊಸಪೇಟೆ ಜನತೆಯ ಹೃದಯದಲ್ಲಿ ರೂಪುಗೊಂಡ ಆತ್ಮೀಯ ಸಹಕಾರದ ಸಂಕೇತವಾಗಿದೆ ಎಂಬುದು ಜನತೆಯ ಅನಿಸಿಕೆ. ಮಧ್ಯಾಹ್ನ 2 ಗಂಟೆಗೆ ಪ್ರಾರಂಭವಾದ ಮೆರವಣಿಗೆ ಸಂಜೆ 4 ಗಂಟೆಗೆ ತಾಲೂಕು ಕಛೇರಿಯಲ್ಲಿ ನಾಮಪತ್ರ ಸಲ್ಲಿಸಿ ಪುನಃಮೆರವಣಿಗೆ ಮುಂದುವರೆದು 5 ಗಂಟೆಗೆ ನಗರದ ಗಾಂಧೀ ಚೌಕದಲ್ಲಿ ಸಮಾವೇಶಗೊಂಡಿತು.

ಬಿಜೆಪಿಗೆ ಬಹಿಷ್ಕಾರ- ಕಮ್ಯುನಿಸ್ಟರಿಗೆ ಸ್ವಾಗತ


ಈ ರ್‍ಯಾಲಿಯ ನಂತರ ತಿಳಿದುಬಂದ ಸುದ್ದಿಗಳು ಎಚ್ಚರದ ರಾಜಕೀಯ ಪ್ರಜ್ಞೆಗಳ ಸಂಕೇತಗಳಾಗಿವೆ. ಕೆಲವು ಏರಿಯಾಗಳಲ್ಲಿ ಹಾಲಿ ಬಿಜೆಪಿ ಎಂ.ಎಲ್.ಎ ಬರಬಾರದೆಂದು ಅಲ್ಲಿನ ಜನತೆ ಬಹಿಷ್ಕಾರ ಹಾಕಿದರೆ, ನಮಗೆ ಸಂಪರ್ಕವಿಲ್ಲದ ಬಡಜನರ ಕೆಲವು ಏರಿಯಾಗಳಲ್ಲಿ ಬಡಜನರು ತಮ್ಮ ಸಂಕಷ್ಟಗಳನ್ನು ಅರಿಯಲು, ಸಹಾಯ ಮಾಡಲು ಸಿಪಿಐ(ಎಂ) ಅಭ್ಯರ್ಥಿ ತಮ್ಮ ಏರಿಯಾಗಳಿಗೆ ಬರಬೇಕೆಂದು ಆತ್ಮೀಯ ಸ್ವಾಗತ ಕೋರಿದ್ದಾರೆ.

ನಾಮಪತ್ರ ಸಲ್ಲಿಕೆಯ ನಂತರ ಗಾಂಧೀಚೌಕದಲ್ಲಿರುವ ಟೌನ್ ರೀಡಿಂಗ್ ರೂಂ ಆವರಣದಲ್ಲಿ ಬೃಹತ್ ಬಹಿರಂಗಸಭೆ ನಡೆಯಿತು. ಸಭೆಯನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ॥ ಎಸ್.ವೈ.ಗುರುಶಾಂತ್‌ರವರು ಕೋಮುವಾದದ ವಿಷಕುಡಿದು ಮತ್ತರಾದ ಜನ ಜಾತ್ಯಾತೀತ ಪರಂಪರೆಯನ್ನು ಹಾಳುಮಾಡಲು ಕೋಮುಗಲಭೆ ನಡೆಸಲು ಮತ್ತು ಅಧಿಕಾರ ಹಿಡಿಯಲು ಹವಣಿಸುತ್ತಿದ್ದಾರೆ, ಇದಕ್ಕೆ ಪರ್ಯಾಯವಾದ ಪ್ರಗತಿಪರ, ಜಾತ್ಯಾತೀತ, ದುಡಿಯುವ ಜನತೆಯ ಹಿತಾಸಕ್ತಿಗೆ ಬದ್ಧವಾದ ವ್ಯವಸ್ಥೆಯನ್ನು ಸಿಪಿಐ(ಎಂ) ದೇಶದ 3 ರಾಜ್ಯಗಳಲ್ಲಿ ಎತ್ತಿ ಹಿಡಿದಿದೆ. ಅಷ್ಟೇ ಅಲ್ಲ. ನಿರಂತರ ಸ್ಥಿರ ಸರಕಾರವನ್ನು ಜನತೆಗೆ ನೀಡುತ್ತಾ ಬಂದಿದೆ ಎಂದು ತಿಳಿಸಿದ ಅವರು ಕಾಂಗ್ರೆಸ್ (ಐ) ಹಾಗೂ ಎನ್.ಡಿ.ಎ. ಪಕ್ಷಗಳನ್ನು ಸೋಲಿಸಿ ಸಿಪಿಐ (ಎಂ) ಅನ್ನು ಗೆಲ್ಲಿಸುವಂತೆ ಜನತೆಗೆ ಕರೆಕೊಟ್ಟರು.

ನಂತರ ಇನ್ನೊಬ್ಬ ರಾಜ್ಯ ಸಮಿತಿ ಸದಸ್ಯರಾದ ಕಾಂ॥ ಯು.ಬಸವರಾಜ ಹಾಗೂ ಅಭ್ಯರ್ಥಿಯಾದ ಕಾಂ॥ ಪ್ರಸನ್ನ ಕುಮಾರರವರೂ ಮಾತನಾಡಿ ಹೊಸಪೇಟೆಯಲ್ಲಿ ನಡೆದ ಕಾರ್ಮಿಕರ, ರೈತರ ಹೋರಾಟಗಳನ್ನು, ಸಮಸ್ಯೆಗಳಿಗೆ ಪರಿಹಾರ ನೀಡುವಲ್ಲಿ ಸಿಪಿಐ(ಎಂ) ವಹಿಸಿದ ಪಾತ್ರವನ್ನೂ ವಿವರಿಸಿದರು. ಅಲ್ಲದೆ ಹೊಸಪೇಟೆಯಲ್ಲಿ ಬಿ.ಜೆ.ಪಿ.ಯ ಜನ ಹಾಗೂ ನಾಯಕ ಹಾಲಿ ಎಂ.ಎಲ್.ಎ. ಶಂಕರಗೌಡ ಕೋಮು ಗಲಭೆಗಳನ್ನು ಹೇಗೆ ಹುಟ್ಟಿಹಾಕಿ ಮುಗ್ದ ಜನತೆಯ ಪ್ರಾಣಕ್ಕೆ ಬಂದೊದಗಿದ ಸಂಚಕಾರದ ಬಗ್ಗೆ ಹಾಗೂ ಅಂಥಹ ಸಂದರ್ಭದಲ್ಲಿ ಜನತೆಗೆ ಧೈರ್ಯವನ್ನು ತುಂಬಲು, ದುಡಿಯುವ ಜನತೆಯ ಐಕ್ಯತೆಯನ್ನು ಕಾಪಾಡಲು ವಹಿಸಿದ ಸಿಪಿಐ(ಎಂ)ನ ಮಹತ್ತರ ಪಾತ್ರವನ್ನು ವಿವರಿಸಿದರು.

- ಪಿ.ಆರ್. ವೆಂಕಟೇಶ್.

ಕೋಮುಗಲಭೆಗಳಲ್ಲಿ ಪೀಡಿತರಾದವರಿಗೆ ಪುನರ್ವಸತಿ, ಇವರ ನಡುವೆಯಲ್ಲಿ ಭೂಮಾಲಕರ ವಿರುದ್ಧ ನಡೆದ ಐತಿಹಾಸಿಕ ತೇಭಾಗ ಚಳುವಳಿ, ನಂತರ ದೇಶದ ವಿಭಜನೆಯೊಂದಿಗೆ ಸ್ವಾತಂತ್ರ್ಯ............ ಈ ಬಗ್ಗೆ ಕಳೆದ ಭಾಗದಲ್ಲಿ ಓದಿರುವಿರಿ.............. ಮುಂದೆ ಓದಿ



ಭಾಗ-13

ಸ್ವಾತಂತ್ರ್ಯ, ವಿಭಜನೆಯ ನಂತರ

ದೇಶದ ವಿಭಜನೆ ಬಗ್ಗೆ ಕಮ್ಯುನಿಸ್ಟ್ ಪಕ್ಷದ ನಿಲುವನ್ನು ವಿವರಿಸುವುದು ತುಂಬಾ ಅಗತ್ಯ. ವಾಸ್ತವವಾಗಿ ನಾವು ವಿಭಜನೆಗೆ ಕಡು ವಿರೋಧಿಯಾಗಿದ್ದೆವು, ಆದರೆ ಅದನ್ನು ತಡೆಯುವ ಅಧಿಕಾರವಾಗಲೀ ಪ್ರಭಾವವಾಗಲೀ ನಮಗೆ ಇರಲಿಲ್ಲ. ಮೂರನೇ ಶಕ್ತಿಯಾಗಿ ನಾವು ಪರಿಗಣಿತರಾಗಿದ್ದರೂ ಪ್ರಭಾವದ ವಿಚಾರದಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ನಿಂದ ತುಂಬಾ ಹಿಂದೆ ಉಳಿದಿದ್ದೆವು. ವಿಭಜನೆಯನ್ನು ಅಂಗೀಕರಿಸದೆ ನಮಗೆ ಬೇರೆ ದಾರಿ ಇರಲಿಲ್ಲ. ಏನಿದ್ದರೂ ಯೂನಿಯನ್ ಜಾಕ್ (ಬ್ರಿಟಿಷ್ ಧ್ವಜ) ಅಂತೂ ಕೆಳಗೆ ಇಳಿಯಿತು.

1942 ಮತ್ತು 47ರ ನಡುವೆ ನಮ್ಮ ಪಕ್ಷ ಮಹತ್ವದ ಪ್ರಗತಿಯನ್ನು ಸಾಧಿಸಿತು. ಹಾಗೂ ಹಲವಾರು ಚಳುವಳಿ ಮೂಲಕ ಜನರ ಮಧ್ಯೆ ಹೋಯಿತು.

ಅವಿಭಜಿತ ಬಂಗಾಳದ 28 ಜಿಲ್ಲೆಗಳಲ್ಲಿ 1942ರಲ್ಲಿ ಇದ್ದ ಪಕ್ಷದ ಸದಸ್ಯರ ಸಂಖ್ಯೆ 2,200 ಅದು 1947ರಲ್ಲಿ 26,000ಕ್ಕೆ ಏರಿತು. ಪಶ್ಚಿಮ ಬಂಗಾಳದಲ್ಲಿ 14 ಸಾವಿರಕ್ಕೆ ಪೂರ್ವ ಬಂಗಾಳದಲ್ಲಿ 12 ಸಾವಿರಕ್ಕೆ. ಬಂಗಾಳದ ಏಕತೆಯನ್ನು ಕಾಯ್ದುಕೊಳ್ಳುವುದು ನಮ್ಮ ಬಯಕೆಯಾಗಿತ್ತು. ಸುಹ್ರಾವರ್ದಿ ಕೂಡ ಅದನ್ನೇ ಬಯಸಿದ್ದರು. ಆದರೆ ಅವರು "ಮಹಾ ಬಂಗಾಳ"ದ ಪರವಾಗಿದ್ದರು ಅದಕ್ಕೆ ನಮ್ಮ ವಿರೋಧವಿತ್ತು.

ಶರತ್ ಚಂದ್ರ ಬಸು ಕೂಡ ವಿಭಜನೆಯ ವಿರುದ್ಧ ದನಿ ಎತ್ತಿದರು. ನನಗೆ ನೆನಪಿರುವಂತೆ ವಿಭಜನೆಯ ವಿರುದ್ಧ ಸಹಿ ಸಂಗ್ರಹ ಆಂದೋಲನ ಆರಂಭಿಸಿದ ಮೊದಲಿಗರಲ್ಲಿ ಅವರೂ ಒಬ್ಬರಾಗಿದ್ದರು. ವಿಭಜನೆಯನ್ನು ತಪ್ಪಿಸಲು ಶರತ್ ಬಸು ಮತ್ತು ಸುಹ್ರಾವರ್ದಿ ಒಟ್ಟಿಗೆ ಒಂದು ಸೂತ್ರವನ್ನು ರೂಪಿಸಿದರು. ಆದರೆ ಅವರ ನಡುವೆ ಭಿನ್ನಾಭಿಪ್ರಾಯ ಇಳಿದ್ದವು. ಸ್ವಾತಂತ್ರ್ಯದ ನಂತರವೂ ಶರತ್ ಬಾಬು ಬಂಗಾಳಗಳ ಏಕತೆ ಬಗ್ಗೆ ಮಾತನಾಡುವುದನ್ನು ಮುಂದುವರಿಸಿದರು. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳೆರಡೂ ಜಾತಿ ಸೂತ್ರವನ್ನು ತಿರಸ್ಕರಿಸಿದವು.

ಸುಹ್ರಾವರ್ದಿ ವಾಸಿಸಲು ಪೂರ್ವ ಪಾಕಿಸ್ತಾನಕ್ಕೆ (ಈಗಿನ ಬಾಂಗ್ಲಾದೇಶ) ಹೋದರು. ಪಶ್ಚಿಮ ಬಂಗಾಳದಲ್ಲಿ 1977 ಆಗಸ್ಟ್ 15ರಿಂದ ಮುಸ್ಲಿಂ ಲೀಗ್‌ನಿಂದ ಆಡಳಿತ ಸೂತ್ರವನ್ನು ಕಾಂಗ್ರೆಸ್ ವಹಿಸಿಕೊಂಡಿತು. ಡಾ.ಪ್ರಫುಲ್ಲ ಚಂದ್ರ ಘೋಷ್ ಅದರ ಪ್ರಥಮ ಮುಖ್ಯಮಂತ್ರಿ ಆದರು. ಸಿಲ್ಹೆಟ್ ಪೂರ್ವ ಪಾಕಿಸ್ತಾನದ ಒಂದು ಜಿಲ್ಲೆಯಾಗಬೇಕು ಎಂದೂ ನಿರ್ಧರಿಸಲಾಯಿತು. ಅದು ಭಾರತದಲ್ಲಿ ಇರಬೇಕೇ ಪಾಕಿಸ್ತಾನಕ್ಕೆ ಸೇರಬೇಕೇ ಎಂಬ ಬಗ್ಗೆ ಜನಮತ ಗಣನೆ ನಡೆಸಲಾಯಿತು. ಸಿಲ್ಹೆಟ್ ಪೂರ್ವ ಪಾಕಿಸ್ತಾನಕ್ಕೆ ಹೋಯಿತು.

ನಾವು ವಾಸ್ತವಸ್ಥಿತಿಯನ್ನು ಒಪ್ಪುವ ಒತ್ತಡಕ್ಕೆ ಒಳಗಾದೆವು. ಹೊಸದಾಗಿ ಸಿಕ್ಕಿದ ಸ್ವಾತಂತ್ರ್ಯದ ಗುಂಗಿನಲ್ಲಿ ಭಾರತ ಮತ್ತು ಪಾಕಿಸ್ತಾನಗಳೆರಡೂ ತೇಲಾಡಿದವು. ಎಲ್ಲೆಡೆಯಲ್ಲೂ ಹಬ್ಬದ ವಾತಾವರಣವಿತ್ತು. 1947 ಆಗಸ್ಟ್ 15ರಂದು ಗವರ್ನರ್ ಹೌಸ್‌ನ (ಈಗಿನ ರಾಜಭವನ) ಗೇಟುಗಳನ್ನು ಸಾರ್ವಜನಿಕರಿಗಾಗಿ ತೆರೆದಿಡಲಾಗಿತ್ತು ಎಂಬುದು ನನಗೆ ಈಗಲೂ ನೆನಪಿದೆ.

ಅದೇ ವೇಳೆ, ಇನ್ನೊಂದು ಮಟ್ಟದಲ್ಲಿ, ಅಲ್ಪಸಂಖ್ಯಾತ ನಿರಾಶ್ರಿತರು ಗುಂಪು ಗುಂಪಾಗಿ ಪೂರ್ವ ಪಾಕಿಸ್ತಾನದಿಂದ ಬರುತ್ತಿದ್ದರು. ಇದೊಂದು ರಾಷ್ಟ್ರೀಯ ವಿಷಯವಾಯಿತು. ಪಶ್ಚಿಮ ಬಂಗಾಳಕ್ಕೆ ಒಟ್ಟು 35 ಲಕ್ಷ ಜನರು ಬಂದರು. ನಂತರ ಈ ಸಂಖ್ಯೆ ಇನ್ನೂ ಹೆಚ್ಚಿ ಸುಮಾರು 70 ಲಕ್ಷವನ್ನು ಮುಟ್ಟಿತು. 50 ವರ್ಷಗಳ ನಂತರವೂ ಈ ಸಮಸ್ಯೆ ಬಗೆಹರಿಯದೆ ಉಳಿದಿದೆ. ಕೇಂದ್ರದಲ್ಲಿ ಸತತ ಅಧಿಕಾರ ನಡೆಸಿದ ಕಾಂಗ್ರೆಸ್ ಸರಕಾರಗಳ ಅದಕ್ಷತೆಯೇ ಇದಕ್ಕೆ ಮುಖ್ಯ ಕಾರಣ.

ಪತ್ರಿಕೆ, ಮುದ್ರಣಾಲಯ

1946ರಲ್ಲಿ 'ದೈನಿಕ ಸ್ವಾಧೀನತಾ' ಪ್ರಕಟಣೆಯನ್ನು ಆರಂಭಿಸಿದ ನಂತರ ಡಾಕ್ರಸ್ ಲೇನ್‌ನಲ್ಲಿರುವ ನಮ್ಮ ಪಕ್ಷದ ಕಚೇರಿಯಲ್ಲಿ ಡಿಸೆಂಬರ್‌ನಲ್ಲಿ ಒಂದು ಮುದ್ರಣಾಲಯವನ್ನು ಸ್ಥಾಪಿಸಿದೆವು. ಆ ಮನೆಯನ್ನು ಸ್ನೇಹಾಂಶು ಆಚಾರ್ಯರ ಹೆಸರಿನಲ್ಲಿ ಬಾಡಿಗೆಗೆ ಪಡೆಯಲಾಗಿತ್ತು.

ಪಕ್ಷದ ಪ್ರಾಂತ ಮಟ್ಟದ ನಾಲ್ಕನೇ ಸಮ್ಮೇಳನ ಈ ಮನೆಯ ಮಾಡಿನ ಮೇಲೆ ನಡೆಯಿತು. ಈ ಸಮ್ಮೇಳನ ನಡೆದದ್ದು ಸ್ವಾತಂತ್ರ್ಯದ ನಂತರ. ಪಕ್ಷ ಬೆಳೆಯುತ್ತಿರುವುದರಿಂದ ಸ್ವಲ್ಪ ದೊಡ್ಡಗಾತ್ರದ ಪ್ರಾಂತ ಸಮಿತಿಯನ್ನು ಆಯ್ಕೆಮಾಡಲಾಯಿತು. ನಾನೂ ಅದರ ಸದಸ್ಯನಾಗಿದ್ದೆ. ಪೂರ್ವ ಬಂಗಾಳದಲ್ಲಿನ ಪಕ್ಷದ ವ್ಯವಹಾರಗಳನ್ನು ನೋಡಿಕೊಳ್ಳುವಂತೆ ಸಮಿತಿಯು ಕೆಲ ಸದಸ್ಯರಿಗೆ ಸೂಚಿಸಲಾಯಿತು.

ನಾನು ಆಗಲೂ ರೈಲ್ವೆಯ ಟ್ರೇಡ್ ಯೂನಿಯನ್ ಚಟುವಟಿಕೆಗಳಲ್ಲಿ ಪಾಲ್ಗೊಂಡು ರಾಜ್ಯಾದ್ಯಂತ ಪ್ರವಾಸ ಮಾಡುತ್ತಿದ್ದೆ. ನಾನು ನಗರದಲ್ಲಿದ್ದಾಗ ಪ್ರತಿದಿನ ರೈಲ್ವೆ ಯೂನಿಯನ್ ಕಛೇರಿ ಭೇಟಿ ನಿಡುತ್ತಿದ್ದೆ. ರೈಲ್ವೆ ಯೂನಿಯನ್ ಅಲ್ಲದೆ ಇತರ ಕಾರ್ಮಿಕ ಸಂಘಟನೆಗಳಲ್ಲೂ ನನ್ನನ್ನು ತೊಡಗಿಸಿಕೊಂಡಿದ್ದೆ.

ಹೊಸ ವಿಧಾನಸಭೆಯಲ್ಲಿ 83 ಸದಸ್ಯರಿದ್ದರು. ಹಿಂದಿನ ಅಸೆಂಬ್ಲಿಗಳಲ್ಲಿದ್ದ ಕೆಲವು ಕಾಂಗ್ರೆಸಿಗರು ರಾಜಿನಾಮೆ ನೀಡಿದರು. ಅವರ ಸ್ಥಾನಗಳಿಗೆ ಹೊಸಬರು ಬಂದರು. ವಿಶ್ವವಿದ್ಯಾಲಯ ಕ್ಷೇತ್ರದಿಂದ ಆರಿಸಿಬಂದಿದ್ದ ಡಾ. ಶ್ಯಾಮ ಪ್ರಸಾದ್ ಮುಖರ್ಜಿ ಆ ಮೇಲೆ ಕೇಂದ್ರ ಸಚಿವ ಸಂಪುಟವನ್ನು ಸೇರಿದರು. ಡಾ. ಬಿಧಾನ ಚಂದ್ರರಾಯ್ ಅಸೆಂಬ್ಲಿ ಸದಸ್ಯರಾದರು. ರೂಪನಾರಾಯಣ್‌ರಾಯ್ ಅವರ ಕ್ಷೇತ್ರ ಪೂರ್ವ ಪಾಕಿಸ್ತಾನಕ್ಕೆ ಸೇರಿದ್ದರಿಂದ ಅವರು ಹೊಸ ವಿಧಾನಸಭೆಯ ಸದಸ್ಯರಾಗಲು ಸಾಧ್ಯವಾಗಲಿಲ್ಲ.

ಹೀಗಾಗಿ ಅಸೆಂಬ್ಲಿಯಲ್ಲಿ ನಮ್ಮ ಪಕ್ಷದಿಂದ ಒಬ್ಬರಷ್ಟೆ ಉಳಿದೆವು. ರತನ್‌ಲಾಲ್ ಬ್ರಹ್ಮನ್ ಮತ್ತು ನಾನು ಪಶ್ಚಿಮ ಬಂಗಾಳದಲ್ಲಿ ಉಳಿದುಕೊಂಡ ಮುಸ್ಲಿಂಲೀಗ್ ಸದಸ್ಯರು ಪ್ರತ್ಯೇಕ ಗುಂಪನ್ನು ರಚಿಸಿಕೊಂಡರು. ಅವರು ಪ್ರತಿಪಕ್ಷದಲ್ಲಿ ಇಲ್ಲದಿದ್ದಾಗ ಅನೇಕ ವಿಷಯಗಳಲ್ಲಿ ನಮ್ಮನ್ನು ಬೆಂಬಲಿಸಿದರು.

ಮಹಮದ್ ಖುದಾ ಬಕ್ಷ್ ಮತ್ತು ಅಬ್ದುಲ್ ಹಾಶಿಮ್ ಅವರ ಹೆಸರು ತಕ್ಷಣವೇ ಹೊಳೆಯುತ್ತದೆ. ಹಾಶಿಮ್ ಸಾಹೆಬ್ ನಮ್ಮ ರಾಜ್ಯದ ಮಾಜಿ ಕಾನೂನು ಸಚಿವ ಮನ್ಸೂರ್ ಹಬಿಬುಲ್ಲಾ ಅವರ ಮಾವ. ಅವರು ಒಬ್ಬ ಪ್ರಗತಿಪರ ಚಿಂತನೆಯ ಮುಖಂಡರಾಗಿದ್ದರು. ಹೊಸ ಅಸೆಂಬ್ಲಿಯಲ್ಲಿ ಬಹುತೇಕ ಪ್ರತಿಪಕ್ಷ ಎಂಬುದೇ ಇರಲಿಲ್ಲ ನಾವಿಬ್ಬರೇ ಪ್ರತಿಪಕ್ಷದ ದನಿಯಾಗಿದ್ದೆವು.

ಪ್ರಥಮ ಅಧಿವೇಶನ

ಸ್ವಾತಂತ್ರ ಸಿಕ್ಕ ಮೂರು ತಿಂಗಳ ನಂತರ, ನವೆಂಬರ್ 21 ರಂದು ಹೊಸ ವಿಧಾನಸಭೆಯ ಅಧಿವೇಶನ ಪ್ರಾರಂಭವಾಯಿತು. ಈಶ್ವರ್‌ದಾಸ್ ಜಲಾನ್ ಸ್ಪೀಕರ್ ಆಗಿ ಮತ್ತು ಅಶುತೋಷ್ ಮಲ್ಲಿಕ್ ಉಪಸ್ಪೀಕರ್ ಆಗಿ ಆಯ್ಕೆಯಾದರು. ಅಶುತೋಷ್ ಬಾಬೂ ತುಂಬಾ ಪ್ರೀತಿಪಾತ್ರ ವ್ಯಕ್ತಿಯಾಗಿದ್ದರು ಹಾಗೂ ಅವರಲ್ಲಿ ಹಾಸ್ಯ ಪ್ರಜ್ಞೆ ತುಂಬಿ ತುಳುಕುತ್ತಿತ್ತು.

(ಮುಂದುವರಿಯುವುದು)

ಪುಟ 7 ರಿಂದ

.......ಜಾಹೀರಾತು ಯುದ್ಧ

ಯಾವ ಜನಪರ ಹೋರಾಟ ಮಾಡಿದರೋ ಅಂತ ಜಾಹೀರಾತಿನಲ್ಲಿ ಎಲ್ಲೂ ಸುದ್ದಿ ಇಲ್ಲ. ಜಾಹೀರಾತಿನ ಚಿತ್ರ ಶಾಸಕರ ಸಂಖ್ಯೆ ಏರಿದ್ದು ಮಾತ್ರ ತೋರಿಸುತ್ತಿದೆ. 'ಹೋರಾಟ' ಮಾಡಿದ್ದು ಜನ-ವಿರೋಧಿ ಕೋಮುದಂಗೆಗಳನ್ನು ಸೃಷ್ಟಿಸುವಲ್ಲಿ ಮಾತ್ರ. ಕೋಮುದಂಗೆಗಳಾದಲ್ಲೇ ಶಾಸಕರನ್ನು ಗಿಟ್ಟಿಸಿದ್ದು.

'ಕಟ್ಟುವೆವು ಹೊಸ ನಾಡೊಂದನು ಸುಖದ ಬೀಡೊಂದನು'!

ಬಿಜೆಪಿ ಅಧಿಕಾರಕ್ಕೆ ಬಂದ ರಾಜ್ಯಗಳಲೆಲ್ಲ ನಾಡನ್ನು ಒಡೆದದ್ದೆ. ಉತ್ತರ ಪ್ರದೇಶವನ್ನು ಒಡೆದರು. ದಿಲ್ಲಿ, ರಾಜಸ್ತಾನ, ಹಿಮಾಚಲ ಪ್ರದೇಶಗಳಲ್ಲಿ ಬಡವರಿಗೆ ಸಿಕ್ಕಿದ್ದು ಸಂಕಷ್ಟಗಳ ಬೆಂಗಾಡು ಮಾತ್ರ. ಆದಕ್ಕೇ ಮುಂದಿನ ಚುನಾವಣೆಗಳಲ್ಲಿ ಅವರನ್ನು ಒದ್ದು ಕಳಿಸಿದರು. ಇಲ್ಲೂ ಉತ್ತರ ಕರ್ನಾಟಕ ಕೊಡಗುಗಳನ್ನು ಒಡೆಯುವರಿಗೆ ಕುಮ್ಮಕ್ಕು ಕೊಟ್ಟಿದ್ದಾರೆ. ಇಂತಹ ರೆಕಾರ್ಡು ಇರುವವರನ್ನು ನಂಬಬಹುದೆ?

'ರೈತರ ಕನಸು, ಬಿಜೆಪಿಯಿಂದ ನನಸು'!

ಇದು ಇನ್ನೊಂದು ಘೋಷಣೆ. ಬಿಜೆಪಿ ಆಡಳಿತದಲ್ಲಿ 9 ರಾಜ್ಯಗಳ ರೈತರನ್ನು ಕೇಳಬೇಕು. ರೈತರ ಕನಸು ನನಸು ಮಾಡಿದ್ದರೆ ಅವರಿಗೆ ಅಷ್ಟು ಜೋರಾದ ಒದೆ ಸಿಗುತ್ತಿರಲಿಲ್ಲ.

ತಮಾಷೆಯೆಂದರೆ ಬಿಜೆಪಿ ಜಾಹೀರಾತುಗಳಲ್ಲಿ ಇಲ್ಲದ ಸೌಹಾರ್ದತೆಯ ಸಂದೇಶ ಸಂಯುಕ್ತ ಜನತಾದಳ- ಬಿಜೆಪಿ ಮೈತ್ರಿಯ ಜಾಹೀರಾತುಗಳಲ್ಲಿ ಬಂದಿದೆ. **ಮೈತ್ರಿಕೂಟದ ಅಪೀಲು ಜಾತ್ಯಾತೀತರಿಗೆ, ಬಿಜೆಪಿಯ ಅಪೀಲು ಮತಾಂಧರಿಗೆ ಅಂತಲೋ?**

ಇಂತ ಜೀವನ ನಡೆಸುವುದಕ್ಕೆ ನಾವು ಅರ್ಹರೆ?

ನಾವೆಲ್ಲಾ ಒಂದಾಗಿ ಬಾಳೋಣ, ಕಟ್ಟೋಣ ನಮ್ಮ ಭಾರತವನ್ನು ಸುಭದ್ರ ಭಾರತವನ್ನು

ಸಂಯುಕ್ತ ಜನತಾದಳ ಬಿಜೆಪಿ ಮೈತ್ರಿಕೂಟಕ್ಕೆ ಬೆಂಬಲ ನೀಡಿ

ಇನ್ನೊಂದು ಜಾತಿ ಜಾಹೀರಾತು.

ದೇಶ ಮೊದಲು - ಜನತಾದಳ (ಸಂಯುಕ್ತ) ಕ್ಕೆ ಮತ ನೀಡಿ, ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕೂಟ ಬೆಂಬಲಿಸಿ.

ಸಂಯುಕ್ತ ಜನತಾದಳ ಜಾಹೀರಾತು,

'ಅಸ್ಥಿರತೆ ಅಳಿಯಲಿ, ಜನತಂತ್ರ ಉಳಿಯಲಿ'!

ಕರ್ನಾಟಕದಲ್ಲಿ ರಾಜಕೀಯ ಅಸ್ಥಿರತೆ ತಂದ, ಜನತಂತ್ರವನ್ನು ಬುಡಮೇಲು ಮಾಡಿದ ಸಂಯುಕ್ತ ಜನತಾದಳದ ಘೋಷಣೆ ಇದು ಪ್ರತಿ ಜಾಹೀರಾತಿನಲ್ಲಿ! ಏಕ ಪಕ್ಷೀಯ ಅಧಿಕಾರದ ಆಡಳಿತ ಇನ್ನಿಲ್ಲ, ವಂಶ ಪಾರಂಪರ್ಯದ ಹೇರಿಕೆ ದೇಶಕ್ಕೆ ಬೇಕಿಲ್ಲ - ಇದು ಎಲ್ಲಾ ಜಾಹೀರಾತುಗಳಲ್ಲಿ ಅವರ ಘೋಷಣೆ. ಬಿಜೆಪಿ ಪೋಸ್ಟರಲ್ಲಿ ಬರದ ಕೋಮು ಸಾಮರಸ್ಯ, ಸಮಾನತೆಯ ಘೋಷಣೆ ಸಂಯುಕ್ತ ಜನತಾದಳದ ಜಾಹೀರಾತಿನಲ್ಲಿದೆ. ಇದು ಮುಖವಾಡವಲ್ಲವೆ?. ಒರಿಸ್ಸಾದ ಸ್ಟೈನ್ಸ್ ಕೊಲೆ 'ವಿದೇಶಿ ಪಿತೂರಿ' ಎಂದ ಇವರಿಗೆ ಇದು ಹೇಳಲು ಏನು ಅಧಿಕಾರವಿದೆ?.

ಹಿಂದೂ, ಮುಸ್ಲಿಂ, ಕ್ರೈಸ್ತರಿಗೆ ಭಾರತ ಮಂದಿರ ಮತೀಯ ಗಲಭೆಗಳಿಲ್ಲದ ಶಾಂತಿಯ ಸಾಗರ-ಇದು ದೊಡ್ಡ ಗೋಸುಂಬೆತನ ಅಲ್ಲವೆ! ಜನರೇ ಹೇಳುವ ಕರ್ನಾಟಕ ಕಂಡ ಅತ್ಯಂತ ಕೆಟ್ಟ ಮುಖ್ಯಮಂತ್ರಿ ಪಟೇಲ್ ಕೂಟಕ್ಕೆ ಎನ್ನುತ್ತಾರೆ ಜಾಹಿರಾತುಗಳು. ಜನತೆಯ ನಿರೀಕ್ಷೆಗಳನ್ನು ಪೂರೈಸಬಲ್ಲ, ಜನಪರ ಸರಕಾರಕ್ಕಾಗಿ ಮತ ನೀಡಬೇಕಂತೆ!.

ಎಡರು ತೊಡರುಗಳ ನೂರಾರು-ನಡುವೆಯೇ ಸಾಧಿಸಿದ್ದು ಸಾವಿರಾರು!

ಬರಡು ಭೂಮಿಗಳಿಗೆ ಹರಿಸಲು ನೀರು-ರೈತರ ಬದುಕಿದೂ ಬೆಂಬಲ ನೂರು!

ಗ್ರಾಮೀಣಾಭಿವೃದ್ಧಿಯಲ್ಲಿ ಎಂದೂ ಕಾಣದ ವಿಕಾಸ-ಹಳ್ಳಿಗರ ಬದುಕಿನಲ್ಲಿ ತಂದಿದೆ ಸಂತಸ!

ಕೈಗಾರಿಕೆಗಳಿಂದ ಜನತೆಯ ಅಭಿವೃದ್ಧಿ-ದೇಶ ರಾಜ್ಯಗಳು ತರಲು ಸಮೃದ್ಧಿ!

ಇವೆಲ್ಲ ಪಟೇಲರ ಜೋಕುಗಳೇ?

ಪುಟ 5 ರಿಂದ

ಇಣುಕು ನೋಟ

ಒಮರ್ ಅಬ್ದುಲ್ಲಾ ಸ್ಪರ್ಧಿಸಿದ್ದು ಅವನ ವಿರುದ್ಧ ಕಾಶ್ಮೀರದ ಇನ್ನೊಬ್ಬ ನಾಯಕ ಮಫ್ತಿ ಮುಹಮ್ಮದ್ ಸೈಯದ್ ಮಗಳು ಮಹಬೂಬಾ ಸ್ಪರ್ಧಿಸುತ್ತಿದ್ದಾರೆ. ಮಹಬೂಬಾ ಈಗಾಗಲೇ ವಿಧಾನಸಭಾ ಸದಸ್ಯೆ ಆಗಿದ್ದಾರೆ. ಮುಫ್ತಿ ಮಹಮದ್ ಸೈಯದ್ ಮತ್ತು ಮಹಬೂಬ ಹಿಂದೆ ಕಾಂಗ್ರೆಸ್‌ನಲ್ಲಿದ್ದು ಈಗ ಪೀಪಲ್ಸ್ ಡೆಮೋಕ್ರೆಟಿಕ್ ಪಾರ್ಟಿ (ಪಿಡಿಪಿ) ಎಂಬ ಹೊಸ ಪಕ್ಷ ರಚಿಸಿದ್ದಾರೆ. ಅನಂತನಾಗ್ ಕ್ಷೇತ್ರದಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಯುಸೋಫ್ ತರಿಗಾಮಿ ಮತ್ತು ವಾಜಪೇಯಿ ಸರ್ಕಾರದ ವಿರುದ್ಧ ಮತದಾನ ಮಾಡಿ ನೇಶನಲ್ ಕಾನ್ಫರೆನ್ಸ್‌ನಿಂದ ಉಚ್ಚಾಟಿಸಲ್ಪಟ್ಟ ಪ್ರೊ|| ಸೋರುಜ್ ತೀವ್ರ ಸವಾಲು ಹಾಕಿದ್ದಾರೆ.

ಕಾಶ್ಮೀರಕ್ಕೆ ಸ್ವಾಯತ್ತತೆ ಕೊಡುವ ಸಂವಿಧಾನ ಕಲಮು 370 ಅನ್ನು ವಿರೋಧಿಸುವ ಬಿಜೆಪಿ ಜತೆ ಅಪವಿತ್ರ ಮೈತ್ರಿ ಹೊಂದಿರುವ ನ್ಯಾಶನಲ್ ಕಾನ್ಫರೆನ್ಸ್ ಇದರಿಂದಾಗಿ ಕಷ್ಟಕ್ಕೆ ಸಿಲುಕಿಹಾಕಿಕೊಂಡಿದೆ. ಕಾಶ್ಮೀರದಲ್ಲೂ ಏಕಪಕ್ಷೀಯ ಅಧಿಕಾರದ ಕಾಲ ಕಳೆದಂತೆ ಕಾಣುತ್ತದೆ.

***

ಮುಖವಾಡದ ಬಾಯಲ್ಲೊಂದು ಕವಿತೆ ಬೇರೆ

ಸಂಘ ಪರಿವಾರದ ಕರಾಳ ಮುಖ ಮುಚ್ಚಲು ಮುಖವಾಡವೊಂದನ್ನು ಸೃಷ್ಟಿಸಿರುವುದು ನಿಮಗೆ ಗೊತ್ತೇ ಇದೆ. ಆ ಮುಖವಾಡ ಕವಿತೆಗಳನ್ನು ಹೇಳಿದರೆ, ಅದು ಮುಖ ಎಂದು ಜನರನ್ನು ಮರುಳು ಮಾಡಬಹುದಲ್ಲ. ಕಳೆದವಾರ ದೆಹಲಿಯ ಸಿರಿ ಕೋಟೆ ಮ್ಯೂಸಿಯಂನಲ್ಲಿ ಇದೇ ಪ್ರಯತ್ನ ನಡೆದಿದ್ದು.

ವಾಜಪೇಯಿಯವರ ಕವಿತೆಗಳ ಕ್ಯಾಸೆಟ್ 'ನಯೀ ದಿಶಾ' (ಹೊಸದಿಕ್ಕು) ಭಾರೀ ಗದ್ದಲದೊಂದಿಗೆ ಬಿಡುಗಡೆ ಮಾಡಲಾಯಿತು. ದೊಡ್ಡ ಗುತ್ತೇದಾರಿ ಗುಂಪು ಆರ್.ಪಿ.ಜಿ (ರಾಮಪ್ರಸಾದ್ ಗೊಯಂಕಾ) ಈ ಮುಖವನ್ನು ಮಾರಾಟ ಮಾಡುವ ಕೆಲಸದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿತ್ತು. ಗೊಯಂಕಾ ವಾಜಪೇಯಿ 'ಕವಿತ್ವ'ವನ್ನು ವಾಚಾಮಗೋಚರವಾಗಿ ಹೊಗಳಿ ಮೈಮರೆತು, 'ಒಮರ್ ಖಯ್ಯಮ್' ಎಂದುಬಿಟ್ಟನಂತೆ ಏನೂ ತೋಚದೆ. ವಾಜಪೇಯಿಯ 'ಕವಿತೆ'ಗಳನ್ನು ಪ್ರಸಿದ್ಧ ಹಾಡುಗಾರರಾದ ಅಲ್ಕಾ ಯಾಜ್ಞಿಕ್, ಜಗಜೀತ್ ಸಿಂಗ್, ಶಂಕರ್ ಮಹಾದೇವನ್ ಗಂಟೆ ಕಾಲ ಕೊರೆದರಂತೆ. ವಾಜಪೇಯಿಯವರೇ ಸ್ವತಃ ಮಂತ್ರಮುಗ್ಧರಾಗಿ ತಮ್ಮ ಕವಿತೆ ಕೇಳಿದರಂತೆ. ಆಮೇಲೆ ತಮ್ಮ ಕವಿತೆಗಳಿಂದ ದಂಡಿಯಾಗಿ ಉದ್ಧರಿಸುತ್ತಾ ವಾಜಪೇಯಿ ಭಾಷಣ ಬೇರೆ ಕುಟ್ಟಿದರಂತೆ.

***

ಚುನಾವಣಾ ಪ್ರಚಾರದಲ್ಲಿ ಕಾರ್ಗಿಲ್‌ನ ಪ್ರತಿಧ್ವನಿ

ಬಿಜೆಪಿ ಚುನಾವಣಾ ಪ್ರಚಾರದಲ್ಲಿ ಕಾರ್ಗಿಲ್‌ನ ವಿಜಯದ 'ಕ್ರೆಡಿಟ್' ತೆಗೆದುಕೊಳ್ಳುವುದೇ ಮುಖ್ಯ ಭಾಗವಾಗಿಬಿಟ್ಟಿದೆ. ಚುನಾವಣಾ ಆಯೋಗ ಈ ಬಗ್ಗೆ ಕಟ್ಟುಪಾಡು ವಿಧಿಸಿದ್ದರೂ, ಹಲವು ರೀತಿಯಲ್ಲಿ ಇದು ಮುಂದುವರೆದಿದೆ. ಮೂರು ಸೇನಾ ಮುಖ್ಯಸ್ಥರಿದ್ದ ಕಾರ್ಗಿಲ್ ಭಿತ್ತಿಪತ್ರ ವಾಜಪೇಯಿ ಸಭೆಯಲ್ಲಿ ಇದ್ದದ್ದನ್ನು ವಿರೋಧಪಕ್ಷಗಳು ತೀವ್ರವಾಗಿ ಪ್ರತಿಭಟಿಸಿದವು. ಆಮೇಲೆ ಇದನ್ನು ಪರೋಕ್ಷವಾಗಿ ಮಾಡುತ್ತಿದ್ದಾರೆ. ವಾಜಪೇಯಿ ಹೋದಲೆಲ್ಲಾ ಖಡ್ಗವನ್ನು ಎಳೆದು ಝಳಪಿಸಿದ್ದೇ-ಝಳಪಿಸಿದ್ದು. ಉತ್ತರ ಭಾರತದಲ್ಲಿ ಹಲವು ಸ್ಪರ್ಧಿಗಳೇ ಮಾಜಿ ಸೈನಿಕರು, ಅಧಿಕಾರಿಗಳು ಬಿಜೆಪಿ ಚುನಾವಣಾ ಪ್ರಚಾರ ಸಭೆಗಳು ಕಾರ್ಗಿಲ್ ಹುತಾತ್ಮರ ಸಂಬಂಧಿಕರನ್ನು ಸನ್ಮಾನಿಸುವುದು ಇತ್ಯಾದಿ ಅದು ಮುಂದುವರೆಯುತ್ತಲೇ ಇದೆ.

ಅನುವಂಶಿಕ ರಾಜಕೀಯ

ಹಲವು ಪಕ್ಷಗಳ ಪ್ರಮುಖ ನಾಯಕರ ಮಕ್ಕಳು ಈ ಬಾರಿ ಚುನಾವಣಾ ಸ್ಪರ್ಧೆಯಲ್ಲಿದ್ದಾರೆ. ಕೇಂದ್ರ ವಿದೇಶ ಮಂತ್ರಿ ಜಸ್ವಂತ್ ಸಿಂಗ್ ಮಗ ರಾಜಸ್ತಾನದಲ್ಲಿ, ಹರಿಯಾಣ ಮಾಜಿ ಮುಖ್ಯಮಂತ್ರಿ ಓಂಪ್ರಕಾಶ್ ಚೌತಾಲಾ ಮಗ, ಪಂಜಾಬಿನ ಮುಖ್ಯಮಂತ್ರಿ ಪ್ರಕಾಶ ಸಿಂಗ್ ಬಾದಲ್ ಮಗ, ಕಾಶ್ಮೀರ ಮುಖ್ಯಮಂತ್ರಿ ಫರೂಕ್ ಅಬ್ದುಲ್ಲಾ ಮಗ ಕಾಶ್ಮೀರದಲ್ಲಿ, ದೇವೇಗೌಡರ ಮಗ ಹೀಗೆ ಸುಮಾರು 10 ಜನ ಚುನಾವಣಾ ಕಣದಲ್ಲಿದ್ದಾರಂತೆ. ಆದರೆ ಪತ್ರಿಕೆಗಳ ಕಿಡಿಗೇಡಿತನ ನೋಡಿ. ಇವರೆಲ್ಲಾ ಮೊದಲ ಬಾರಿಗೆ ಚುನಾವಣೆಯಲ್ಲಿ ಸ್ಪರ್ಧಿಸುವವರು, ಇತ್ತೀಚೆಗೆ ರಾಜಕೀಯಕ್ಕೆ ಇಳಿದವರು, ಅವರ ಜತೆ ಮೆತ್ತಗೆ ದಶಕಗಳಿಂದಲೂ ಸಕ್ರಿಯ ರಾಜಕಾರಣದಲ್ಲಿದ್ದು ಮೊದಲಬಾರಿಗೆ ಲೋಕಸಭೆಗೆ ಸ್ಪರ್ಧಿಸುತ್ತಿರುವ ಇಎಂಎಸ್ ಮಗ ಶ್ರೀಧರರನ್ನು ಸೇರಿಸಿಬಿಟ್ಟಿದ್ದಾರೆ. ಅನುವಂಶಿಯ ರಾಜಕೀಯಕ್ಕೆ ಎಡಪಕ್ಷಗಳೂ ಹೊರತಲ್ಲ ಎಂದು ಸೇರಿಸಲು.

"ವಿದೇಶಿ ಹಿಟ್ಲರ್‌ನ ಪ್ರೇರಣೆ ಪಡೆದ ಹಿಂದುತ್ವದವರನ್ನು ಹಿಮ್ಮೆಟ್ಟಿಸೋಣ"

ಕೋಮುಶಕ್ತಿ-ವಿರೋಧಿ ಸಮಾವೇಶದಲ್ಲಿ ಕರೆ



ಭಾರತದ ಇಂದಿನ ಸಂದರ್ಭದಲ್ಲಿ ಜನರು ಒಂದಾಗಿ ಫ್ಯಾಸಿಸ್ಟ್ ಶಕ್ತಿಗಳನ್ನು ಸೋಲಿಸುವುದು ಅವಶ್ಯವಾಗಿದೆ. ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳನ್ನು ಸೋಲಿಸುವ ಸಾಮರ್ಥ್ಯವುಳ್ಳ ಯಾವುದೇ ಪಕ್ಷ ಅಥವಾ ಪಕ್ಷೇತರ ಅಭ್ಯರ್ಥಿಗಳಿಗೆ ಮತ ಹಾಕುವುದು ಅವಶ್ಯವಾಗಿದೆ. ಇದು ಆಗಸ್ಟ್ 31 ರಂದು ನಡೆದ ಕೋಮುಶಕ್ತಿ-ವಿರೋಧಿ ಸಮಾವೇಶದ ತೀರ್ಮಾನ. ವಿಚಾರವಾದಿಗಳ ವೇದಿಕೆ ಕರ್ನಾಟಕ(ವಿವೇಕ) ಈ ಸಮಾವೇಶವನ್ನು ಏರ್ಪಡಿಸಿತ್ತು. ಈ ಸಮಾವೇಶ ಅಂಗೀಕರಿಸಿದ ಘೋಷಣೆ 'ಮತದಾರರೇ ಎಚ್ಚರಗೊಳ್ಳಿ ಮತಾಂಧರಿದ್ದಾರೆ' ಎಂದು ಎಚ್ಚರಿಸಿದೆ.

ದೇಶೀ ವಿವೇಕಾನಂದ, ಬುದ್ಧ ಮೊದಲಾದವರ ಪ್ರೇರಣೆಯನ್ನು ಬದಿಗೊತ್ತಿ, ವಿದೇಶಿ ಹಿಟ್ಲರ್‌ನಿಂದ ಪ್ರೇರಣೆ ಪಡೆದು ಗಾಂಧೀಜಿಯವರ ಹಿಂದುತ್ವವನ್ನು ಮೂಲೆಗೆ ದೂಡಿದ ಇಂದಿನ ಹಿಂದುತ್ವವನ್ನು ಹಿಮ್ಮೆಟ್ಟಿಸೋಣ ಎಂದು ನಿಡುಮಾಮಿಡಿ ಮಠದ ವೀರಭದ್ರ ಚೆನ್ನಮಲ್ಲಿಕಾರ್ಜುನ ಸ್ವಾಮಿ ಸಮಾವೇಶದ ಮುಖ್ಯ ಅತಿಥಿಗಳಾಗಿ ಕರೆ ನೀಡಿದರು.

'ಮನುಷ್ಯನಿಗಾಗಿ ಧರ್ಮವೇ ಹೊರತು ಧರ್ಮಕ್ಕಾಗಿ ಮನುಷ್ಯ ಅಲ್ಲ! ವೈದಿಕ ಧರ್ಮವೇ ಪುರಾತನ ಧರ್ಮವಾಗಿದ್ದರೆ ಶ್ರೇಷ್ಠ ದಾರ್ಶನಿಕವಾಗಿದ್ದರೆ ಭಾರತದ ನೆಲದಲ್ಲೇ ಬೇರೆ ಧರ್ಮಗಳ ಅಗತ್ಯತೆ ಏನಿತ್ತು ಎಂದು ಪ್ರಶ್ನಿಸಿದ ನಿಡುಮಾಮಿಡಿ ಸ್ವಾಮಿ ಯಾವ ಧರ್ಮವೂ ಪರಿಪೂರ್ಣವಲ್ಲ ಎಂದು ವಿವರಿಸಿದರು.

ಸ್ವದೇಶಿ- ವಿದೇಶಿ ಯಾರು? ಇಂದು ಈ ಬಗ್ಗೆ ಮಾತನಾಡುತ್ತಿರುವವರ ಇತಿಹಾಸದ ಪುಟಗಳನ್ನು ತಿರುವಿ ನೋಡಿದರೆ ಇವರೇ ವಿದೇಶಿಯರಾಗುತ್ತಾರೆ. ಇವರನ್ನೆ ಮಧ್ಯ ಏಷ್ಯಕ್ಕೆ ಓಡಿಸಬೇಕಾಗುತ್ತದೆ ಎಂದ ಸ್ವಾಮಿ ಇವರು ಮುಂದೊಂದು ದಿನ ಅನ್ಯಧರ್ಮದವರು ಪ್ರಧಾನಿಯಾಗ ಬಾರದೆಂದು ಬಯಸುತ್ತಾರೆಂದು ವಿವರಿಸಿದರು.

22 ಜನಾಂಗಗಳು ಈ ದೇಶಕ್ಕೆ ವಲಸೆ ಬಂದು ಸೌಹಾರ್ದ ಜೀವನ ನಡೆಸಿಲ್ಲವೇ? ಬಿಜೆಪಿಯವರ ಹಿಂದುತ್ವ ಮೇಲ್ಜಾತಿಯವರ ಹಿತ ಕಾಪಾಡುವುದೇ ಆಗಿದೆ. ಸಮಾಜದ ಹಿಂದುಳಿದ ಶ್ರೇಣಿಗಳಲ್ಲಿರುವ ದಲಿತ, ಶೂದ್ರ, ಮಹಿಳೆಯರನ್ನು ಅಲ್ಪಸಂಖ್ಯಾತರನ್ನು ಅಧಃಪತನದಂಚಿಗೆ ಕೊಂಡೊಯ್ಯುವುದೆ, ಅಲ್ಲದೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಇವರ ಅಧೀನರಾಗಬೇಕಾಗುತ್ತದೆ. ಪ್ರಜ್ಞಾವಂತ ಮತದಾರರೆಲ್ಲ ಈ ಹಿಟ್ಲರ್ ಅನುಯಾಯಿಗಳನ್ನು ಹಿಮ್ಮೆಟ್ಟಿಸೋಣವೆಂದು ಕರೆ ನೀಡಿದರು.

12 ನೇ ಶತಮಾನದಲ್ಲಿ ವೈದಿಕ ಧರ್ಮದ ತಪ್ಪುಗಳನ್ನು ಎತ್ತಿಹಿಡಿದರು. ಉನ್ನತ ವಿಚಾರ ಹೇಳಿದವರು ಹುಟ್ಟಿದ ನಾಡಿನಲ್ಲಿ ಹೆಣ್ಣಿನ ಸ್ವಾತಂತ್ರ್ಯವನ್ನು ಎತ್ತಿ ಹಿಡಿದ ಲಿಂಗಾಯಿತ ಸಮುದಾಯದ ಜಗದ್ಗುರುಗಳು ಮತ್ತು ಶ್ರೀಮಂತರು ಹಣ ಮತ್ತು ಅಧಿಕಾರದ ಆಸೆಗಾಗಿ ಕೋಮುವಾದಿಗಳ ತೆಕ್ಕೆಯಲ್ಲಿದ್ದಾರೆ ಎಂದು ಸಮಾವೇಶ ಉದ್ಘಾಟಿಸಿದ ಹಿರಿಯ ಪತ್ರಕರ್ತ ಪಿ.ಲಂಕೇಶ್ ವಿಷಾದಿಸಿದರು.

ಕಮ್ಯೂನಿಸ್ಟ್ ತತ್ವವನ್ನು ಒಂದು ವಿಚಾರ ಹಾಗೂ ತತ್ವವಾಗಿ ತೆಗೆದು ಕೊಂಡಾಗ ಅದು ಬೇರೆಲ್ಲಾ ಸಿದ್ಧಾಂತಕ್ಕಿಂತ ಮಾನವ ಕೋಟಿಗೆ ಮಾಡಿರುವ ಸಹಾಯ ಅಪಾರವಾದ್ದದೆಂದು ಸ್ಮರಿಸಿದ ಅವರು ಜಾತಿ ಪದ್ಧತಿಯನ್ನು ನಂಬಕೂಡದು ಅದು ನಿಷಿದ್ಧ, ಅದು ಅನೇಕಾನೇಕ ತಪ್ಪುಗಳಿಗೆ ನಮ್ಮನ್ನು ಪ್ರೇರೇಪಿಸುತ್ತದೆ ಆ ಸಿದ್ಧಾಂತ ಎಂದು ವಿವರಿಸಿದರು.

ಎಲ್ಲಾ ಜಾತಿಗಳು ಒಂದೇ ಎಂಬುವುದನ್ನು ಮರೆತವರು ವಿವೇಚನೆ ಕಳೆದುಕೊಂಡವರಾಗಿದ್ದಾರೆ ಎಂದ ಲಂಕೇಶ್‌ರವರು ಭಾರತದ ಜಾತ್ಯಾತೀತತೆಯ ಗಂಗೋತ್ರಿಯಂತಿದ್ದ ಗಾಂಧೀಜಿಯವರಿಂದ ಕೇವಲ ಖಾದಿಪಡೆದು ಮತ್ತೆಲ್ಲವನ್ನು ಬಿಟ್ಟಿದ್ದೇವೆಂದು ನೊಂದು ನುಡಿದರು.

ವಿಮರ್ಶಕ ಬಿ.ಕೆ. ರಾಮಚಂದ್ರ ಶರ್ಮ ಮಾತನಾಡಿ ಇಂದಿನ ಸಾಹಿತಿಗಳು ಹಾಗೂ ವಿಚಾರವಂತರಿಗೆಲ್ಲಾ ಈ ಪರಿವರ್ತನೆಯ ಗಾಳಿ ಬೀಸುತ್ತಿರುವುದು ನೋವಿನ ಸಂಗತಿ. ಇಂದಿನ ಸ್ಥಿತಿಯನ್ನು ನೋಡಿದರೆ ಎಂತಹ ಪ್ರಪಂಚವನ್ನು ಮುಂದಿನ ಪೀಳಿಗೆಗೆ ಕಾಣಿಕೆಯಾಗಿ ನೀಡಿ ಹೋಗುತ್ತಿದ್ದೇವೆ ಎಂದು ನೋವಾಗುತ್ತಿದೆ. ಉತ್ತಮ ಬದುಕು ಮುಂದಿನ ಪೀಳಿಗೆಗೆ ಸಿಗುವುದೇ ಎಂಬುದು ಭ್ರಮೆಯಾಗಿ ಉಳಿಯುವುದೇನೋ ಎಂಬ ಭಾವನೆ ಮೂಡುತ್ತಿದೆ ಎಂದು ಭಾವುಕರಾದರು ಶರ್ಮಾ.

1992 ಡಿಸೆಂಬರ್ 6 ರಂದು ಮಸೀದಿಯ ಗೋಪುರದಲ್ಲಿದ್ದ ಪಾರಿವಾಳಗಳು ತತ್ತಿಯ ಜೊತೆ ಕಾಯುತ್ತಿವೆ, ಇನ್ನು ಕಾಯುತ್ತಿವೆ ನಿಮ್ಮ ಹೃದಯದಲ್ಲಾದರೂ ಸ್ಥಳ ಕೊಡಿ ಎಂದು ಮಾರ್ಮಿಕವಾಗಿ ಶರ್ಮ ನುಡಿದರು.

ಪ್ರೊ. ಜಿ.ಕೆ. ಗೋವಿಂದ ರಾವ್ ಮಾತನಾಡಿ ಅನ್ಯಾಯ, ಅಸಹನೆ, ಹಿಂಸೆ, ದ್ವೇಷ ಮತ್ತು ಅಸಮಾನತೆ ಇದೇ ಫ್ಯಾಸಿಸ್ಟ್ ಮೂಲ ಧೋರಣೆ, ಇದರ ರೂಪವೇ ಕೋಮುವಾದಿ ಬಿಜೆಪಿ. ಇದು ದೇಶದಲ್ಲಿ ಮತ್ತೆ ಅಧಿಕಾರಕ್ಕೆ ಬಂದರೆ, ದ್ವೇಷ, ಅಸಹನೆ ಹೆಚ್ಚಾಗುವುದೆಂದರು.

ನೆರೆ-ಹೊರೆಯ ರಾಷ್ಟ್ರಗಳ ಭಾಂದವ್ಯ ಹದಗೆಟ್ಟು ಪಾಕಿಸ್ತಾನ ಮತ್ತು ಭಾರತದ ನಡುವೆ ಕ್ರಿಕೆಟ್ ಸರಣಿಯಂತೆ ಯುದ್ಧ ನಡೆಯ ತೊಡಗಲಿದೆ ಎಂದು ವಿಷಾದಿಸಿದರು.

ಕಾಂಗ್ರೆಸ್ ಪಕ್ಷದ ಜೊತೆ ನಮಗೆ ನೂರಾರು ಭಿನ್ನಾಭಿಪ್ರಾಯ ಇರಬಹುದು. ಕಮ್ಯೂನಿಸ್ಟ್ ಪಕ್ಷದ ಜೊತೆ ಸಾವಿರ ಭಿನ್ನಾಭಿಪ್ರಾಯ ಇರಬಹುದು. ಆದರೆ ಬಿಜೆಪಿ ಜೊತೆ ಅದಕ್ಕೆ ಅವಕಾಶವೇ ಇಲ್ಲ! ಎಂದು ಗೋವಿಂದರಾವ್ ಅದರ ಅಪಾಯವನ್ನು ಎಚ್ಚರಿಸ

ಪ್ರಸ್ತುತ ಸನ್ನಿವೇಶ ದೇಶದ ಅಭಿವೃದ್ಧಿಗಾಗಿ ಕಾರ್ಯಕ್ರಮ ಗೌಣವಾಗಿ ಕೇವಲ ಭಾವೋದ್ರೇಕ ಸ ಸೃಷ್ಟಿಯಾಗಿದೆ ಎಂದು ಸಮಾವೇಶದ ಅಧ್ಯಕ್ಷತೆ ವ ಸಾಹಿತಿ ಬರಗೂರು ರಾಮಚಂದ್ರಪ್ಪ ವಿವರಿಸಿದರು

ಇಂದು ಯುದ್ಧವನ್ನು ವೈಭವೀಕರಿಸಲಾಗ ಒಬ್ಬೊಬ್ಬ ಸೈನಿಕರ ಶವವನ್ನು ವೈಭವಿ ಅನುಕಂಪವನ್ನು ಮತಗಳನ್ನಾಗಿಸುವ ಹ ವ್ಯವಸ್ಥಿತವಾಗಿ ನಡೆಯುತ್ತಿದೆ ಎಂದರು.

ಜನಪರ ಕಾರ್ಯಕ್ರಮದ ಮೂಲಕ ಸ್ಥಿರ ಸ ಕೊಡಲಾಗದವರು 5 ವರ್ಷಗಳ ಅಧಿಕಾರಕ್ಕಾಗಿ ತಿದ ಸ್ಥಿರ ಸರ್ಕಾರದ ಭರವಸೆ ಇವೆಲ್ಲ ಕೇವಲ ದಿಕ್ಕು ತಪ್ಪಿ ಕೊಂಡೊಯ್ಯುವುದೆಂದರು.

ಕೋಮುವಾದಿಗಳು, ಅಧಿಕಾರದ ಗ್ರಹಣ ಮ ರಾಜಕೀಯವಲ್ಲದೆ ದೇಶದ ಬಹುರೂಪತ ನಾಶವಾಗಲಿದೆ. ಜನ ಸಂಸ್ಕೃತಿ ಹಾಗೂ ಹುಸಿ ಸ ನಡುವಿನ ಆಯ್ಕೆಯಲ್ಲಿ ಜನ ಸಂಸ್ಕೃತಿ ಆಯ್ಕೆಮಾಡಿಕೊಳ್ಳೋಣ ವೆಂದು ಬರಗ ರಾಮಚಂದ್ರಪ್ಪ ಕರೆನೀಡಿದರು.

ವಿವೇಕದ ಸಂಚಾಲಕರಾದ ಕೆ.ವಿ.ಶ್ರೀನಿವ ಪ್ರಾರಂಭದಲ್ಲಿ ಪ್ರಾಸ್ತಾವಿಕ ಭಾಷಣ ಕೋಮುವಾದದ ಅಪಾಯವನ್ನು ವಿವರಿಸಿ ಶಶಿಧರ್‌ಬಾರಿಘಾಟ್ ಘೋಷಣೆ ಮಂಡಿಸಿದರೆ, ಕೆ ವಿಮಲಾ ಕಾರ್ಯಕ್ರಮ ನಿರೂಪಿಸಿದರು.

- ಎಂ.ಜಯರ

"ಚುನಾವಣೆ ಎಂಬ ಸಮರ"ದಲ್ಲಿ ಪ್ರಜಾಪ್ರಭುತ್ವದ ಉಳಿವಿಗಾಗಿ

ಕೋಮುವಾದಿಗಳನ್ನು ಸೋಲಿಸಿ

ಕೋಮುವಾದದಂತಹ ಅಪಾಯಕಾರಿ ನಿಲುವಿನಿಂದ ಪ್ರಜಾ ಪ್ರಭುತ್ವ ನಾಶವಾಗುತ್ತಿದೆ. ದೇಶದ ಎಲ್ಲಾ ಧರ್ಮೀಯ ಜನರ ಹಿತಕ್ಕಾಗಿ, ಪ್ರಜಾಪ್ರಭುತ್ವದ ರಕ್ಷಣೆಗಾಗಿ ಚುನಾವಣೆ ಎಂಬ ಸಮರದಲ್ಲಿ ಕೋಮುವಾದಿ ಬಿಜೆಪಿ ಮತ್ತದರ ಮಿತ್ರ ಕೂಟವನ್ನು ಸೋಲಿಸಬೇಕು-ಇದು ಆಗಸ್ಟ್ 29 ರಂದು ಬೆಂಗಳೂರಿನ'ಬಹುಮುಖಿ ವೇದಿಕೆ' ಏರ್ಪಡಿಸಿದ್ದ ರಾಜಕೀಯ ಧೃಡೀಕರಣ ಚರ್ಚೆಯಲ್ಲಿ ಪ್ರಗತಿಪರ ಚಿಂತಕರ ಒಮ್ಮತವಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ನಿಡುಮಾಮಿಡಿ ವೀರಭದ್ರ ಚನ್ನಮಲ್ಲ ಸ್ವಾಮೀಜಿ ದೇಶಕ್ಕೆ



ಕೋಮುವಾದಿಗಳಿಂದ ಅಪಾಯಕಾದಿದೆ. ಹಾಗೆಯೇ ಕ್ರಿಮಿನಲ್ ಚಾರಿತ್ರ್ಯವುಳ್ಳ ಅಭ್ಯರ್ಥಿಗಳನ್ನು ತಿರಸ್ಕರಿಸಬೇಕು ಎಂದರು.

ವಂಶಪಾರಂಪರ್ಯವಾಗಿ ಅಧಿಕಾರದ ದುರಾಸೆಯಿಂದ ತಾತನಿಂದ ಹಿಡಿದು ಮೊಮ್ಮಕ್ಕಳವರೆಗೆ ರಾಜಕೀಯ ಪ್ರವೇಶ ಮಾಡುತ್ತಿದ್ದಾರೆ. ಇಂತಹ ಬೆಳವಣಿಗೆ ತಡೆಯುವ ಅಗತ್ಯವಿದೆ ಎಂದವರು ಅಭಿಪ್ರಾಯಪಟ್ಟರು. ಇಂತಹ ಪ್ರಕ್ರಿಯೆಗಳು ಬರೀ ರಾಜಕೀಯ ಕ್ಷೇತ್ರಗಳಷ್ಟೇ ಅಲ್ಲ ಮಠಗಳಲ್ಲೂ ಮುಂದುವರೆಯುತ್ತಿದೆ. ರಕ್ತ ಸಂಬಂಧಿಕರನ್ನು ಅಧಿಕಾರಕ್ಕೆ ತರಲು ಯತ್ನಿಸುತ್ತಾರೆ. ಇಂತಹ ಸ್ವಾರ್ಥಶಕ್ತಿಗಳನ್ನು ತಿರಸ್ಕರಿಸಿದಾಗ ರಾಜಕೀಯ ಧೃವೀಕರಣ ಸಾಧ್ಯವೆಂದು ಅಭಿಪ್ರಾಯಪಟ್ಟರು. ಮಾತನ್ನು ಮುಂದುವರೆಸುತ್ತಾ ಇಂದು ರಾಜಕೀಯ ಪಕ್ಷಗಳಲ್ಲಿ ಪ್ರಾಮಾಣಿಕ, ಪ್ರಗತಿಪರ, ಬಡಜನರ, ದಲಿತ ಅಲ್ಪಸಂಖ್ಯಾತರ ಬಗ್ಗೆ ಕಾಳಜಿ ವಹಿಸುವ ಯಾವ ಪಕ್ಷಗಳೂ ಇಲ್ಲ ಎಂದು ವಿಷಾಧ ವ್ಯಕ್ತಪಡಿಸಿದರು.

ರಾಜಕಾರಣದ ಧ್ರುವೀಕರಣ ಆಗುತ್ತಿಲ್ಲ, ಮಾಧ್ಯಮಗಳು ರಾಜಕೀಯದ ಜೊತೆ ಧೃವೀಕರಣ ಆಗುತ್ತಿವೆ ಎಂದು ಪತ್ರಕರ್ತ ರವೀಂದ್ರ ರೇಷ್ಮೆ ಅಭಿಪ್ರಾಯ ಪಟ್ಟರು. 'ಮಾಧ್ಯಮ ಮತ್ತು ರಾಜಕೀಯ ಧೃವೀಕರಣ' ಎಂಬ ವಿಷಯ ಕುರಿತು ಮಾತನಾಡುತ್ತಿದ್ದರು.

ಮುಖ್ಯವಾಗಿ ಇಂದಿರಾಗಾಂಧಿ ಹೇರಿದ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ರಾಜಕೀಯ ಧೃವೀಕರಣ ನಡೆಯಿತು. ಆಗ ಜೈಲಿನಲ್ಲಿದ್ದವರು ಜನತಾ ಪಕ್ಷವೆಂದು ಅಧಿಕಾರಕ್ಕೆ ಬಂದರು. ಅವರು ಕೂಡ ಜನಪರ ಕಾರ್ಯಕ್ರಮಗಳಿಗೆ ಒತ್ತುಕೊಡಲಿಲ್ಲ. ಮೀಸಲಾತಿಯನ್ನು ತಮ್ಮ ರಾಜಕೀಯ ಪಕ್ಷಗಳ ಲಾಭಕ್ಕೆ ಪ್ರಚಾರ ಮಾಡಿಕೊಂಡರು. ಜನಗಳಲ್ಲಿ ವೈರುಧ್ಯ ಸೃಷ್ಟಿಸಿದರು ಎಂದವರು ಹೇಳಿದರು.

ಇತ್ತೀಚಿನ ರಾಜಕೀಯ ಧೃವೀಕರಣ ಎಂದರೆ ವಾಜಪೇಯಿ, ಸೋನಿಯ ನಡುವೆ ಎಂದು ಮಾಧ್ಯಮಗಳು ಗುರುತಿಸುತ್ತಿದ್ದಾರೆ. ಬರಿ ಎರಡು ಪಕ್ಷಗಳ ರಾಜಕೀಯ ಧೃವೀಕರಣವನ್ನು ವಿವರಿಸುತ್ತಾರೆ. ಕೇವಲ ಪಕ್ಷಗಳ ಬದಲಾವಣೆ ಅಷ್ಟೆ, ರಾಜಕೀಯ ಬದಲಾವಣೆ ಆಗುತ್ತಿಲ್ಲ ಇಂದು ಎಲ್ಲಾ ಪಕ್ಷಗಳ ಪಟ್ಟಭದ್ರ ಹಿತಾಸಕ್ತಿಗಳ ದ್ರುವೀಕರಣ ಮಾತ್ರ ಆಗುತ್ತಿದೆ. ಇದಕ್ಕೆ ತಕ್ಕಂತೆ ಮಾಧ್ಯಮಗಳು ವರ್ತಿಸುತ್ತಿವೆ. ಆದ್ದರಿಂದ ಇಂದು ಮತದಾರರಲ್ಲಿ ವೈಚಾರಿಕ ಸ್ಪಷ್ಟತೆ ಕೂಡ ಆಗಬೇಕಿದೆ ಎಂದು ಅಭಿಪ್ರಾಯ ಪಟ್ಟರು.

ಎಲ್ಲಾ ಮಾನವರು ಹುಟ್ಟಿನಲ್ಲಿ ಒಂದೇ ಸಮಾನರೆಂದು ಪ್ರಜಾಪ್ರಭುತ್ವ ಚಿಮ್ಮಿ ಬಂದದ್ದು. ಆದ್ದರಿಂದಲೇ ಪ್ರತಿಯೊಬ್ಬ ವಯಸ್ಕನಿಗೂ ಒಂದು ಮತ ಎಂದು ಪ್ರಜಾಪ್ರಭುತ್ವದ ಆಧಾರದಲ್ಲಿ ಬಂದದ್ದು ಎಂದು 'ಐಕ್ಯರಂಗ' ಸಂಪಾದಕರಾದ ಜಿ.ಎನ್. ನಾಗರಾಜ್ ಪ್ರಜಾಪ್ರಭುತ್ವ ಮತ್ತು ರಾಜಕೀಯ ಧ್ರುವೀಕರಣ ಎಂಬ ವಿಷಯ ಕುರಿತು ಮಾತಾಡುತ್ತಾ ಹೇಳಿದರು.

1986ರಲ್ಲಿ ವಿಶ್ವಾಸ ಮತ್ತು ಅವಿಶ್ವಾಸ ನಿರ್ಣಯ ಪ್ರಾರಂಭವಾಯಿತು. ಅಂದಿನಿಂದ ಇಂದಿನವರೆಗೂ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಬಿಟ್ಟು ಉಳಿದ ವಿಷಯಗಳ ಬಗ್ಗೆ ಮಾತಾಡುತ್ತಾರೆ. ನಾವು ಬೇರೆಲ್ಲಾ ಭ್ರಷ್ಟತೆಗಳಿಗಿಂತ ಕೋಮುವಾದದ ವಿರುದ್ಧ ಏಕೆ ಇದ್ದೀವಿಯೆಂದರೆ ಇಂದು ಪ್ರಜಾಪ್ರಭುತ್ವ ಉಳಿಸಿಕೊಳ್ಳುವುದಕ್ಕಾಗಿ. ಪ್ರಜಾಪ್ರಭುತ್ವದ ಒರೆಗಲ್ಲು ಎಂದರೆ ಅಸಂಖ್ಯಾತರ ಪರಿಸ್ಥಿತಿ ಹೇಗಿದೆ ಎಂಬುದು. ವಿಜ್ಞಾನ ವಿಚಾರದಿಂದ, ತತ್ವಶಾಸ್ತ್ರಜ್ಞರ ಪ್ರಚಾರದಿಂದ ಪ್ರಜಾಪ್ರಭುತ್ವ ಮಹತ್ತರ ಪಾತ್ರವಹಿಸಿದೆ ಎಂದವರು ಹೇಳಿದರು. ಸರ್ವರೂ ಸಮಾನರು ಎಂಬುದನ್ನು ಕೋಮುವಾದ ವಿರೋಧಿಸುತ್ತದೆ. ಕೋಮುವಾದ ಎಲ್ಲಾ ಜನರ ಜಾತಿ, ಧರ್ಮಗಳನ್ನು ಕೆದಕುತ್ತದೆ. ಮುಸ್ಲಿಂ ಕ್ರಿಶ್ಚಿಯನ್, ಸಿಕ್ಕರು, ದಲಿತರು, ಮಹಿಳೆಯರು ಹೀಗೆ ವಿಂಗಡಿಸಿ ಗಲಭೆಗಳಿಗೆ ಕುಮ್ಮಕ್ಕು ನೀಡಿ ಅತಂತ್ರ ಆತಂಕ ಸ್ಥಿತಿಗೆ ತಳ್ಳುತ್ತದೆ.

ಬಾಬಾ ಬುಡನಗಿರಿಯಲ್ಲಿ ಬಹಳ ಹಿಂದಿನ ಕಾಲದಿಂದಲೂ ಹಿಂದೂ ಮುಸ್ಲಿಂ ಬೇದಭಾವ ಇಲ್ಲದೆ ಸಾಮರಸ್ಯ ಸಂಕೇತವಾಗಿದ್ದ, ಜನರೆಲ್ಲಾ ಕೂಡಿ ಬಾಳಿಬಂದ ಜನರ ನಡುವೆ ವಿಷ ಗಲಭೆ ಎಬ್ಬಿಸಿದರು ಇದು ಎಂಥಾ ಮಹಾ ಸಂಚು ಎಂದು ತಿಳಿಯಿರಿ. ಇದೇ ರೀತಿ ಇಡೀ ಕರ್ನಾಟಕವನ್ನೇ ಈ ಸಂಚಿಗೆ ತಳ್ಳಲು ಯತ್ನಿಸಿದರು, ಆದರೆ ಜಾತ್ಯಾತೀತ ಶಕ್ತಿಗಳಿಂದಾಗಿ ಅವರ ಆಟ ನಡೆಯಲಿಲ್ಲ. ಎಂದು ಅವರು ಹೇಳಿದರು.

ಟಿ.ವಿ. ಮಾಧ್ಯಮಗಳಲ್ಲಿ ಪುನರ್‌ಜನ್ಮ ಮಾಟ ಮಂತ್ರ ಎಂಬ ಮೌಢ್ಯತೆಯನ್ನು ಪುಂಖಾನುಪುಂಖವಾಗಿ ಬಿತ್ತರಿಸುತ್ತಿದ್ದಾರೆ. ಜನರನ್ನು ಅಜ್ಞಾನದ ಕತ್ತಲೆಗೆ ನ ಯತ್ನಿಸುತ್ತಿದ್ದಾರೆ. ಹೀಗೆ ಎಲ್ಲಾ ರೀತಿಯಲ್ಲಿ ಕೋಮು ಪ್ರಜಾಪ್ರಭುತ್ವದ ಎದುರಾಳಿಯಾಗಿ ಬರುತ್ತದೆ ಎಂ ಗಂಭೀರವಾಗಿ ಯೋಚಿಸಬೇಕು ಎಂದರು.


ಹಿಟ್ಲರ್‌ನ ಫ್ಯಾಸಿಸ್ಟ್‌ವಾದದಿಂದ ಸಾ ಯೆಹೂದಿಗಳನ್ನು ಗುಂಡಿಗಳಿಗೆ ತುಂಬಿದ್ದು, ಎಳೆ ಚರ್ಮಗಳಿಂದ ಬ್ಯಾಗ್‌ಗಳನ್ನು ಮಾಡಿಕೊಂ ನೆನೆಸಿಕೊಂಡು, ಗಂಭೀರವಾಗಿ ಯೋಚಿಸಿ ಕೋಮುವಾದದ ಭಯಂಕರ ಶಕ್ತಿಯು ನಮ್ಮ ಪ್ರ ಎದುರಾಳಿಯಾಗಿದೆ. ಇದನ್ನು ಸೋಲಿಸಿ ಪ್ರಜಾ ಉಳಿಸಿಕೊಳ್ಳಬೇಕಾಗಿದೆ ಎಂದವರು ಹೇಳಿದರು.

ಮಾನವ ಹಕ್ಕುಗಳ ಪ್ರತಿಪಾದಕ ಪ್ರೊ. ಮನ್ಸೂರ್ ಅಲ್ಪಸಂಖ್ಯಾತರು ಮತ್ತು ಇಂದಿನ ರಾಜ ಪರಿಸ್ಥಿತಿ ಕುರಿತು ಮಾತನಾಡುತ್ತಾ ಅಲ್ಪಸಂಖ್ಯಾ ದಲಿತರ ಹಿತಕಾಯುವಲ್ಲಿ ಸರ್ಕಾರ ವಿಫಲವಾಗಿದೆ ಆಪಾದಿಸಿದರು. ಸಿಪಿಐ(ಎಂ) ಬಿಟ್ಟರೆ ಉಳಿ ಪಕ್ಷಗಳಲ್ಲಿ ತತ್ವ ಸಿದ್ಧಾಂತ ಇಲ್ಲವೆಂದು ಅ ಅಭಿಪ್ರಾಯಪಟ್ಟರು.

ದೇಶದ ಮೇಲೆ ಸಾಂಸತಿಕವಾಗಿ ದುಷ್ಪರಿ ಬೀರುವ ಕೋಮುವಾದದ ಹುನ್ನಾರ ನಡೆಯುತ್ತಿದೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬರಗ ರಾಮಚಂದ್ರಪ್ಪ ಅವರು ಆತಂಕ ವ್ಯಕ್ತಪಡಿಸಿದರು. ಚುನಾವಣೆಗಳಲ್ಲಿ ಕೋಮುವಾದಿ ಶಕ್ತಿ ದಮನಮಾಡಿ ಪ್ರಾಮಾಣಿಕ ಅಭ್ಯರ್ಥಿ ಬೆಂಬಲಿಸಬೇಕೆಂದು ಕರೆ ನೀಡಿದರು.

- ಬಿ. ರಾಜಶೇಖರಮ

ಆಗಸ್ಟ್ 29 ರಂದು ಬೆಂಗಳೂರಿನಲ್ಲಿ ನಡೆದ ಮಾನವ ಸರಪಳಿ ಕಾರ್ಯಕ್ರಮದ ಒಂದು ಜಾತ್ಯಾತೀತತೆಯ, ಮಾನವೀಯತೆಯ ರಕ್ಷಣೆಗಾಗಿ ಜನವಾದಿ ಮಹಿಳಾ ಸಂಘಟನೆ ಮತ್ತು ಮಹಿಳಾ ಸಂಘಟನೆಗಳ ಮುತುವರ್ಜಿಯಿಂದ ಈ ಕಾರ್ಯಕ್ರಮ ಏರ್ಪಾಡಾಗಿತ್ತು.



Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ